ಚರ್ಚೆ ಮಾಡುತ್ತೇವೆ. ನಮ್ಮ ಹಣೆಬರಹ ಅವರಿಗೂ ಆಗಿದೆಯೇ ಎಂದು ಕೇಳುತ್ತಿದ್ದೇವೆ. ಮಾನ್ಯ ನಡಹಳ್ಳಿಯವರಿಗೆ ಕೇಳುತ್ತಿದ್ದೇವೆ.

(ಗೊಂದಲ)

ಛೇರ್ಮನ್:– ಈ ಚೇರ್‌ನಲ್ಲಿ ಕುಳಿತವರು ಎಲ್ಲಾ ಸದಸ್ಯರನ್ನು ಒಂದೇ ದೃಷ್ಟಿಯಿಂದ ನೋಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ನಿಮ್ಮ ಬಗ್ಗೆ ಕೇಳುತ್ತಿಲ್ಲ. ಸರ್ಕಾರದ ಬಗ್ಗೆ ಕೇಳುತ್ತಿದ್ದೇವೆ.

ಛೇರ್ಮನ್:– ಕೃಷಿ ಸಚಿವರು ಪ್ರಾರಂಭ ಮಾಡಿ.

4. ವಿತ್ತೀಯ ಕಾರ್ಯಕಲಾಪಗಳು:
2015–16 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಸರ್ಕಾರದಿಂದ ಉತ್ತರ:
ಬೇಡಿಕೆ ಸಂಖ್ಯೆ 01 (ಕೃಷಿ ಮತ್ತು ತೋಟಗಾರಿಕೆ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಛೇರ್ಮನ್‌ರವರೆ, 2015–16ನೇ ಸಾಲಿನ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಹಾಗೆ ಬೇಡಿಕೆಯ ಮೇಲೆ ಕಳೆದ ಗುರುವಾರ ಹಾಗೂ ಶುಕ್ರವಾರ ಸಾಕಷ್ಟು ಚರ್ಚೆ ನಡೆದಿದೆ. ಅನೇಕ ಗೌರವಾನ್ವಿತ ಸದಸ್ಯರು ಅಂದರೆ ಶ್ರೀಯುತ ಕಾಗೇರಿಯವರು, ಮಾನ್ಯ ನಡಹಳ್ಳಿ ಪಾಟೀಲ್‌ರವರು, ಮಾನ್ಯ ಶಿವಮೂರ್ತಿಯವರು, ಮಾನ್ಯ ನಾಯಕ್‌ರವರು, ಮಾನ್ಯ ಬಾಲಕೃಷ್ಣರವರು, ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಗೋಪಾಲ್ ಪೂಜಾರಿಯವರು, ಮಾನ್ಯ ಬಿ.ಆರ್. ಪಾಟೀಲ್‌ರವರು, ಮಾನ್ಯ ಜೆ.ಟಿ. ಪಾಟೀಲ್‌ರವರು, ಮಾನ್ಯ ಕೋನರೆಡ್ಡಿಯವರು, ಮಾನ್ಯ ಕಾರಜೋಳರವರು, ಮಾನ್ಯ ಸಿದ್ದು ನ್ಯಾಮಗೌಡರವರು, ಮಾನ್ಯ ನಿಂಗಯ್ಯನವರು, ಶ್ರೀಮತಿ ಶಶಿಕಲಾ ಜೊಲ್ಲೆಯವರು ಹೀಗೆ ಅನೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ

ಉಪಯುಕ್ತವಾದಂತಹ ಸಲಹೆ-ಸೂಚನೆ ಸರ್ಕಾರದ ಧೋರಣೆಗಳ ಬಗ್ಗೆ ಟೀಕೆ ಹಾಗೂ ನ್ಯೂನತೆಗಳನ್ನು ಹೇಳಿದರು. ಮಧ್ಯದಲ್ಲಿ ಬಸವರಾಜ್ ಬೊಮ್ಮಾಯಿಯವರು, ಶ್ರೀಯುತ ಸವದಿಯವರು ಹೀಗೆ ಮಧ್ಯ ಮಧ್ಯದಲ್ಲಿ ಇತರರು ಸಹ ಸೇರಿ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ನಾನಾ ರೀತಿಯಲ್ಲಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಮುಂದೆ ಇಡಬೇಕಾಗಿರತಕ್ಕಂತಹ ಹೆಜ್ಜೆಗಳ ಬಗ್ಗೆಯೂ ಸಹ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಆರಂಭದಲ್ಲಿ ನಾನು ಧನ್ಯವಾದಗಳನ್ನು ಹೇಳುತ್ತಾ, ನಾಲ್ಕಾರು ವಿಚಾರಗಳನ್ನು ಅವರೆಲ್ಲರೂ ಸಹ ಪ್ರಸ್ತಾಪ ಮಾಡಿದ್ದಾರೆ. ಆದಷ್ಟು ಸಾರ್ವತ್ರಿಕವಾಗಿರತಕ್ಕಂತಹ ವಿಚಾರಗಳ ಬಗ್ಗೆ . . .

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಮಾನ್ಯ ಛೇರ್ಮನ್‌ರವರೆ, ಈಗ ಮಾನ್ಯ ನಡಹಳ್ಳಿಯವರು ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚರ್ಚೆಯ ಕುರಿತು 52 ಶಾಸಕರು ಸಹಿ ಮಾಡಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದರಲ್ಲಿ 23 ಶಾಸಕರು ಸಹಿಯನ್ನು withdraw ಮಾಡಿದ್ದಾರೆ. ಯಾರು withdraw ಮಾಡಿದ್ದಾರೆ ಎಂದು ಸದನಕ್ಕೆ ಬಹಿರಂಗಪಡಿಸಿದರೆ ಗೊತ್ತಾಗುತ್ತದೆ. ಆಮೇಲೆ ಅವರು ಉತ್ತರ ಹೇಳಲಿ.

ಛೇರ್ಮನ್:- ಆ ವಿಷಯ ಬಂದಾಗ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಅಲ್ಲ. ಆ ವಿಷಯ ಬಂದಾಗ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. Sign ಮಾಡಿ withdraw ಮಾಡಿರುವವರ ಹೆಸರನ್ನು ಬಹಿರಂಗಪಡಿಸಲಿ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಉತ್ತರ ಕರ್ನಾಟದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿದ ಶಾಸಕರು ಯಾರು ಹಾಗೂ ಸಹಿ ಮಾಡಿದ ನಂತರ withdraw ಮಾಡಿರುವ ಸದಸ್ಯರಾರು ಎನ್ನುವುದನ್ನು ಸದನಕ್ಕೆ ಬಹಿರಂಗಪಡಿಸಬೇಕು.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:- ಇದರಲ್ಲಿ ಸ್ವಲ್ಪ ಗೊಂದಲವಿತ್ತು. ಅದಕ್ಕೆ ವಾಪಸ್ಸು ಮಾಡಿರುತ್ತಾರೆ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ:- ನೋಡಿ ಅದರ ಬಗ್ಗೆ ತೀರ್ಮಾನವಾಗಿಲ್ಲ. ನಂಜುಂಡಪ್ಪ ವರದಿ ಬಗ್ಗೆ ಚರ್ಚೆಯಾಗುತ್ತದೆ. ಅವರು ಹೇಳಿದ ಹಾಗೆ ಉತ್ತರ ಕರ್ನಾಟಕದಲ್ಲಿ ಯಾವುದೇ ಸಮಸ್ಯೆಯಿಲ್ಲ ಬಿಡಿ.

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:- ಇದರೊಳಗೆ ದಯಮಾಡಿ ರಾಜಕೀಯ ಮಾಡುವುದಕ್ಕೆ ಬರಬೇಡಿ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಉತ್ತರ ಕರ್ನಾಟದ ಅಭಿವೃದ್ಧಿಯ ಬಗ್ಗೆ ಚರ್ಚೆಗೆ ಸಹಿ ಮಾಡಿದವರು ಯಾರು ಹಾಗೂ withdraw ಮಾಡಿದವರು ಯಾರು ಎಂದು ಸದನಕ್ಕೆ ಬಹಿರಂಗಪಡಿಸಲಿ. ಇವರ ಹಣೆಬರಹ ಏನು ಎಂಬುದು ಈ ನಾಡಿನ ಜನತೆಗೆ ಗೊತ್ತಾಗಲಿ.

(ಗೊಂದಲ)

ಶ್ರೀ ಪುಟ್ಟರಂಗಶೆಟ್ಟಿ:- ನಿಮ್ಮದೂ ಸಹಿ ಇದೆ ಏನ್ರಿ?

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಉತ್ತರ ಕರ್ನಾಟದ ಅಭಿವೃದ್ಧಿ ಬಗ್ಗೆ ಸಹಿ ಮಾಡಿದವರು ಯಾರು ಹಾಗೂ withdraw ಮಾಡಿದವರು ಯಾರು ಎಂಬುದನ್ನು ಬಹಿರಂಗಪಡಿಸಲಿ. ಅವರ ಹೆಸರುಗಳನ್ನೂ ಬಹಿರಂಗಪಡಿಸಲಿ. ಉತ್ತರ ಕರ್ನಾಟಕದ ಪರವಾಗಿ ಯಾರಿದ್ದಾರೆ ಹಾಗೂ ವಿರೋಧಿಗಳ್ಯಾರು ಎಂಬುದು ಗೊತ್ತಾಗಲಿ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಅದನ್ನು ಹೇಳಿ ನಂತರ ಉತ್ತರವನ್ನು ಅವರು ಹೇಳಲಿ.

(ಗೊಂದಲ)

ಛೇರ್ಮನ್:- ಆ ವಿಷಯ ಬಂದಾಗ ಹೇಳುತ್ತಾರೆ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ಮಾನ್ಯ ನಡಹಳ್ಳಿಯವರಿಗಾದರೂ ಬಹಿರಂಗಪಡಿಸುವುದಕ್ಕೆ ಬಿಡಿ. 52 ಜನರು ಶಾಸಕರು ಸಹಿ ಮಾಡಿದವರು ಯಾರು? ಮತ್ತೆ withdraw ಮಾಡಿದವರು ಯಾರು ಎಂದು ಅವರ ಹೆಸರುಗಳನ್ನು ಬಹಿರಂಗಪಡಿಸಿ ನಂತರ ಸಚಿವರು ಉತ್ತರ ಕೊಡಲಿ.

(ಗೊಂದಲ)

ಛೇರ್ಮನ್:- ಪಾಟೀಲರಿಗೆ 9 ಹಾಗೂ 10ನೇ ತಾರೀಖಿನಂದು ಅವಕಾಶ ಕೊಟ್ಟಿದ್ದೇವೆ. ಅವರು ಮಾತನಾಡುತ್ತಾರೆ. ಈಗ ಕೃಷಿ ಇಲಾಖೆಯ ಬಗ್ಗೆ ಕೃಷಿ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ನೋಡಿ ಉತ್ತರ ಆರಂಭ ಮಾಡಿದ್ದೇನೆ. ರಾಜಕೀಯ ಮಾಡಿದರೆ ಹೇಗೆ? ಸಮಯವಿಲ್ಲ. ಉತ್ತರ ಆರಂಭ ಮಾಡಿದ್ದೇನೆ. ನನ್ನನ್ನು ಉತ್ತರ ಕೊಡುವುದಕ್ಕೆ ಕರೆದಿದ್ದಾರೆ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:- ನಿಮ್ಮ ಉತ್ತರವನ್ನು ಹೃದಯತುಂಬಿ ನಾವು ಸ್ವಾಗತ ಮಾಡುತ್ತೇವೆ, ತಿರಸ್ಕಾರ ಮಾಡುತ್ತಿಲ್ಲ. ಆದರೆ, 52 ಜನರು ಶಾಸಕರು ಸಹಿ ಮಾಡಿದವರು ಯಾರು, withdraw

ಮಾಡಿದವರು ಯಾರು ಎಂದು ಸದನಕ್ಕೆ ಬಹಿರಂಗಪಡಿಸಿ ಇದನ್ನು ಪ್ರಾರಂಭ ಮಾಡಬೇಕು ಎಂಬುದು ನಮ್ಮ ಒತ್ತಾಯ.

(ಗೊಂದಲ)

ಶ್ರೀ ಕೆ. ಷಡಕ್ಷರಿ:- ನಿಮ್ಮ ಸಹಿ ಇದೆಯೇನ್ರಿ ಮಾಮನಿಯವರೆ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ಕುಳಿತುಕೊಳ್ಳಿ. ಮಾನ್ಯ ಛೇರ್ಮನ್‌ರವರೆ, 2015-16 ನೇ ಸಾಲಿನ ಬಗ್ಗೆ ಮಾತನಾಡುವುದಕ್ಕೆ ಮೊದಲು ಸ್ವಲ್ಪ 2014-15 ನೇ ಸಾಲಿನ ಕೆಲವು ವಿಚಾರಗಳ ಬಗ್ಗೆ ಸ್ವಲ್ಪಮಟ್ಟಿಗೆ ಅವಲೋಕನ ಮಾಡಲಿಕ್ಕೆ ಬಯಸುತ್ತೇನೆ. 2014-15 ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿ ಪರಿಸ್ಥಿತಿ ಬಗ್ಗೆಯೂ ಸಹ ಮಾತನಾಡುತ್ತಾ ಕೆಲವರು ಮಾತನಾಡಿದರು. ಒಟ್ಟು ಮೌಲ್ಯದ ಅಭಿವೃದ್ಧಿ ದರ ಕಡಿಮೆಯಾಗಿದೆ ಎಂದು ವಿಶ್ಲೇಷಣೆ ಮಾಡಿದರು. 2013-14 ನೇ ಸಾಲಿನಲ್ಲಿ ಶೇಕಡಾ 9.4 ರಷ್ಟು ಕೃಷಿ ಅಭಿವೃದ್ಧಿ ದರ ಇತ್ತು ಹಾಗೂ 2014-15 ನೇ ಸಾಲಿನಲ್ಲಿ ಕೃಷಿ ಕ್ಷೇತ್ರ ಶೇಕಡಾ ನಾಲ್ಕೂವರೆಯಷ್ಟು ವೃದ್ಧಿಯಾಗಿದೆ ಎನ್ನುವುದು ಇದೆ. ಕೃಷಿ ವಲಯ ಸಾಲುವುದಿಲ್ಲವೆನ್ನುವುದೂ ಸಹ ಹೌದು. ಮಾನ್ಯ ಛೇರ್ಮನ್‌ರವರೆ, 2014-15 ನೇ ಸಾಲಿನಲ್ಲಿ ತಮಗೂ ತಿಳಿದ ಹಾಗೆ ರಾಜ್ಯ ನಾನಾ ರೀತಿಯ ಪ್ರಕೃತಿ ವಿಕೋಪಗಳಿಗೆ ತುತ್ತಾಗಿತ್ತು. ಆರಂಭದಲ್ಲಿ ಆಲಿಕಲ್ಲಿನ ಮಳೆ ಹೊಡೆತ ಬಿತ್ತು. ತದನಂತರ ಈ ದ್ವಿದಳ ಧಾನ್ಯಗಳು ಅಂದರೆ ಹೆಸರು, ಉದ್ದು ಇಂತಹವುಗಳನ್ನು ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಯಥೇಚ್ಚವಾಗಿ ಬೆಳೆಯುತ್ತಾರೆ. ಕಳೆದ ವರ್ಷ ಆರಂಭದಲ್ಲಿ ಅಂದರೆ ಜೂನ್-ಜುಲೈ ತಿಂಗಳುಗಳಲ್ಲಿ ಮಳೆ ಕೊರತೆಯಿಂದ ಬಹುತೇಕವಾಗಿ ದ್ವಿದಳ ಧಾನ್ಯದ ಬೆಳೆ ಹಾನಿಯಾಯಿತು. ತದನಂತರ ಆಗಸ್ಟ್ ಮೂರನೇ ವಾರದಲ್ಲಿ ಒಮ್ಮೆಲೆಗೇ ಯಥೇಚ್ಚವಾಗಿ ಮಳೆಯಾಗಿ ಸ್ವಲ್ಪ ಬೆಳೆ ಹಾನಿಯಾಯಿತು. ಕೊನೆಗೆ ಸುಮಾರು 34 ತಾಲ್ಲೂಕುಗಳಲ್ಲಿ ತೀವ್ರವಾದಂತಹ ಬರಗಾಲದ ಪರಿಸ್ಥಿತಿ ಕಳೆದ ವರ್ಷವಿತ್ತು. ಇವೆಲ್ಲಾ ಕಾರಣಗಳಿಂದ ನಿರೀಕ್ಷಿತ ಮಟ್ಟದಲ್ಲಿ ನಾವು ವೃದ್ದಿಯನ್ನು ಕಾಣುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಸಹ

ನಾನು ನನಗೆ ಸಮಾಧಾನವಾಗಿದೆ ಎಂದು ಹೇಳುತ್ತಿಲ್ಲ. ಆದರೂ ಸಹ ಒಂದು ಹೋಲಿಕೆಯನ್ನು ಕೊಡುವುದಾದರೆ ದೇಶದಲ್ಲಿ ಕೃಷಿ ವಲಯದ ವೃದ್ಧಿದರ ಕಳೆದ ವರ್ಷ 2014–15 ರಲ್ಲಿ ಕೇವಲ 1.1% ಇತ್ತು. ಕರ್ನಾಟಕದಲ್ಲಿ 4.5% ಪ್ರತಿಶತ ವೃದ್ಧಿ ದರವನ್ನು ನಾವು ಸಾಧನೆ ಮಾಡಿದ್ದೇವೆ. ಒಂದು ಹೋಲಿಕೆ ಕೊಡುವುದಾದರೆ ಇವೆಲ್ಲಾ ಪ್ರಕೃತಿ ವಿಕೋಪಗಳ ನಡುವೆಯೂ ಸಹ, ಇನ್ನೊಂದು ಹೋಲಿಕೆ ಕೊಡುವುದಾದರೆ ಕರ್ನಾಟಕಕ್ಕೆ ಸೀಮಿತವಾಗಿ ಹೋಲಿಕೆ ಕೊಡುವುದಾದರೆ 2011–12 ರಲ್ಲಿ ನಮ್ಮ ರಾಜ್ಯದಲ್ಲಿ ಕೃಷಿ ವಲಯದ ವೃದ್ಧಿದರ –6.6 ಇತ್ತು. 2012–13 ರಲ್ಲಿ ಸಕಾರಾತ್ಮಕ ಅಂದರೆ +2.4 ಇತ್ತು. ಅದಕ್ಕೆ ಹೋಲಿಕೆ ಮಾಡಿದರೆ ನಮ್ಮ ಸರ್ಕಾರ ಬಂದನಂತರ ಎರಡು ವರ್ಷಗಳಲ್ಲಿ ಒಂದು ವರ್ಷ 9.4 ಮತ್ತು ಇನ್ನೊಂದು ವರ್ಷ 4.5 ಎರಡೂ ಕೂಡ ಸಕಾರಾತ್ಮಕವಾದಂತಹ plus ವೃದ್ಧಿ ದರವನ್ನು ಎಲ್ಲಿಯೋ ಆಗಿರತಕ್ಕಂತಹದ್ದು ಸ್ವಲ್ಪಮಟ್ಟಿಗೆ ನಮಗೆ ಸಮಾಧಾನವಾಗಿದೆ. ಪೂರ್ತಿ ಸಮಾಧಾನವಾಗಿದೆ, ಸಂತುಷ್ಟಿಯಾಗಿದ್ದೇನೆ ಎಂದು ನಾನು ಹೇಳುತ್ತಿಲ್ಲ. ಆ ರೀತಿ ಅರ್ಥಮಾಡಿಕೊಳ್ಳುವಂತಹ ಅವಶ್ಯಕತೆಯಿಲ್ಲ. ದೇಶಕ್ಕೆ ಹೋಲಿಕೆ ಮಾಡಿದಾಗ ರಾಜ್ಯದ ಹಿಂದಿನ ಎರಡು ವರ್ಷಗಳಿಗೆ ಹೋಲಿಕೆ ಮಾಡಿದಾಗ ಸ್ವಲ್ಪಮಟ್ಟಿಗೆ ಪರವಾಗಿಲ್ಲ ಎನ್ನುವಂತಹದ್ದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ನಡುವೆ ನಾನು ಆಗಲೇ ಹೇಳಿದೆ. ಹೋದ ವರ್ಷ ನಮಗೆ ಪ್ರಕೃತಿಯ ವಿಕೋಪದ ಹೊಡೆತ ಆರಂಭವಾಗಿದ್ದು ಇಲ್ಲಿಯವರೆವಿಗೂ ನಿಂತಿಲ್ಲ. ಈ ವರ್ಷ ಕೂಡ ಆಲಿಕಲ್ಲು ಮಳೆಯಿಂದ ಅಪಾರವಾದ ನಷ್ಟವನ್ನು ಅನುಭವಿಸಿದ್ದೇನೆ. ಹೋದ ವರ್ಷ ನಮ್ಮ ಕೃಷಿ ವಲಯದ ವೃದ್ಧಿ ದರ ಕಡಿಮೆಯಾಗುವುದಕ್ಕೆ ಪ್ರಕೃತಿ ವಿಕೋಪವೇ ಕಾರಣವೆಂದು ಹೇಳಿದೆ. ಅದಕ್ಕೆ ಪೂರಕವಾಗಿ ಹೇಳುವುದಾದರೆ ಹೋದವರ್ಷ ಪ್ರಕೃತಿ ವಿಕೋಪದಿಂದಾಗಿ ಸುಮಾರು 779 ಕೋಟಿ ರೂ. ಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. 2009–10 ರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಮಹಾ ಪ್ರವಾಹ ಬಂದಿದ್ದು, ಆ ವರ್ಷ ಬಿಟ್ಟರೆ ಕರ್ನಾಟಕದ ಇತಿಹಾಸದಲ್ಲಿ ಇಷ್ಟೊಂದು ಬೆಳೆ ಹಾನಿಗೆ ಪರಿಹಾರವನ್ನು ಕೊಟ್ಟಿರುವುದು ಕಳೆದ ವರ್ಷ ಮಾತ್ರ. ಆ ವರ್ಷದಲ್ಲಿ

ಯಥೇಚ್ಛವಾಗಿ ಕೊಟ್ಟಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಆಗ ಮಹಾ ಪ್ರವಾಹವಾಗಿತ್ತು. ಅದು ಬಿಟ್ಟರೆ ಹೋದವರ್ಷ ಸುಮಾರು 779 ಕೋಟಿ ರೂ. ಗಳಷ್ಟು ಆಲಿಕಲ್ಲು, ಬರ, ಅತಿವೃಷ್ಟಿಯ ಪರಿಹಾರವನ್ನು ಕೊಟ್ಟಿದ್ದೇವೆ. ಈಗಾಗಲೇ ಈ ವರ್ಷ ಸುಮಾರು 220 ಕೋಟಿ ರೂ. ಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ಈ ವರ್ಷ ಆರಂಭದಲ್ಲೇ ನಮ್ಮ ವರ್ಷಕ್ಕೆ ಆಗುತ್ತಿದ್ದ ವೆಚ್ಚವನ್ನು ಬಹುಶಃ ಮೊದಲನೇ ಭಾಗದಲ್ಲಿ ಪರಿಹಾರವನ್ನು ನಾವು ಕೊಟ್ಟಿದ್ದೇವೆ. ಏಕೆಂದರೆ ಪ್ರಕೃತಿ ವಿಕೋಪವೆಂದು ಹೇಳಿರುವುದಕ್ಕೆ ಪೂರಕವಾಗಿ ಈ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಇದರ ನಡುವೆಯೂ ಕೂಡ 4.50% ನಾವು ಸಾಧನೆಯನ್ನು ಮಾಡಿದ್ದೇವೆಂಬುದು ಒಂದು ವಿಚಾರವಾಗಿದೆ. ನಾವು 135 ಲಕ್ಷ ಟನ್ ಉತ್ಪಾದನೆಯ ಗುರಿಯನ್ನು ಇಟ್ಟುಕೊಂಡಿದ್ದು, ಇವೆಲ್ಲಾ ಕಾರಣಗಳಿಂದ 130 ಲಕ್ಷ ಟನ್ ಗುರಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿದೆ. ಇದು ನಮಗೆ ಸಮಾಧಾನವಿಲ್ಲ. ಬಹುಶಃ ಪ್ರಕೃತಿ ನಮಗೆ ಸಹಕಾರ ಕೊಡಲಿ ಎಂದು ಆಶಿಸುತ್ತೇನೆ. ನಿಮ್ಮೆಲ್ಲರ ಆಶಯ ಕೂಡ ಇದೇ ಆಗಿದೆಯೆಂದು ನಾನು ಭಾವಿಸುತ್ತೇನೆ. ಹಣಕಾಸಿನ ಖರ್ಚು-ವೆಚ್ಚಗಳ ಬಗ್ಗೆ ಕೂಡ ಕೆಲವು ಸದಸ್ಯರು ಮಾತನಾಡಿ ಖರ್ಚು ಮಾಡುತ್ತಿರುವುದು ಏನೇನು ಸಾಲುತ್ತಿಲ್ಲ. ನಿಮಗೇಕೆ ಇಷ್ಟು ಹಣವನ್ನು ಕೊಡಬೇಕೆಂದು ಹೇಳಿದರು. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಹೇಳುವುದಾದರೆ ಹಣ ಖರ್ಚು ಮಾಡುವುದಷ್ಟೇ ಮುಖ್ಯವಲ್ಲ. ಖರ್ಚು ಮಾಡಿದ ಹಣ ಸಮರ್ಪಕವಾಗಿ ಉಪಯೋಗವಾಗಬೇಕು, ಖರ್ಚು ಮಾಡಬೇಕೆಂಬ ಕಾರಣಕ್ಕೆ ಮಾಡುವುದಲ್ಲ. ಎಲ್ಲಿ ಅವಶ್ಯಕತೆಯಿದೆ, ಅಲ್ಲಿ ಖರ್ಚು ಮಾಡಬೇಕು. ಮನೆಯಿಂದ ತಂದಿರುವ ಹಣವನ್ನು ನಾನು ಖರ್ಚು ಮಾಡುತ್ತಿಲ್ಲ. ಇದು ಸಾರ್ವಜನಿಕರ ಹಣವಾಗಿದೆ. ಪ್ರತಿಯೊಂದೂ ರೂಪಾಯಿ ಖರ್ಚು ಮಾಡಬೇಕಾದರೂ ಕೂಡ ಅದು ಸದುಪಯೋಗ ಆಗುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಯೋಚನೆ ಮಾಡಿ ಖರ್ಚು ಮಾಡಬೇಕಾಗುತ್ತದೆ. ಆ ಕಾರಣದಿಂದ ನಮ್ಮ ಪ್ರಮುಖ ಆದ್ಯತೆ ಸಮರ್ಪಕವಾಗಿ ಸದುಪಯೋಗವಾಗುವ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕು. ಬೋಧನೆ ಮಾಡುತ್ತಿದ್ದೀರಾ ಎಂದು ತಾವು ಕೇಳಬಹುದು.

ಆದರೆ ನಾನು ಹೇಳುವುದರಲ್ಲಿ ಅರ್ಥವಿದೆ. 2013–14 ನೇ ಸಾಲಿನಲ್ಲಿ ರಸಗೊಬ್ಬರವನ್ನು ಕಾಪು ದಾಸ್ತಾನು ಮಾಡುತ್ತೇವೆ. ಯಾವುದೇ ಕಾರಣಕ್ಕೂ ಕೂಡ ರಸಗೊಬ್ಬರದ ಕೊರತೆ ಸೃಷ್ಟಿಯಾಗಬಾರದೆಂಬ ಕಾರಣದಿಂದ ಇದನ್ನು ಮಾಡುತ್ತಿದ್ದೇವೆ. ಕಾಪು ದಾಸ್ತಾನು ಮಾಡುವುದಕ್ಕೆ 2013–14 ನೇ ಸಾಲಿನಲ್ಲಿ 152 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. Buffer stocking ಎಂದು ನಾವೇನು ಕರೆಯುತ್ತೇವೆ, ಅದನ್ನು ಯಾವುದೇ ಕಾರಣಕ್ಕೂ ಕೂಡ ಮಾರುಕಟ್ಟೆಯಲ್ಲಿ ರಸಗೊಬ್ಬರದ ಕೊರತೆ ಬರಬಾರದೆಂಬ ಕಾರಣಕ್ಕೆ ಇದನ್ನು ಮಾಡಿದ್ದೇವೆ. 2014–15 ನೇ ಸಾಲಿನಲ್ಲಿಯೂ ಕೂಡ ಕಾಪು ದಾಸ್ತಾನನ್ನು ಮಾಡಿದ್ದೇವೆ. ಆದರೆ 2014–15 ನೇ ಸಾಲಿನಲ್ಲಿ ಕಾಪು ದಾಸ್ತಾನಿಗೆ ಖರ್ಚು ಮಾಡಿರುವುದು ಕೇವಲ 77 ಕೋಟಿ ರೂ. ಗಳು. ಇಷ್ಟು ಕಡಿಮೆ ಖರ್ಚು ಮಾಡಿದರೂ ಕೂಡ ಎಲ್ಲೂ ರಸಗೊಬ್ಬರ ಕೊರತೆ ಬಾರದ ರೀತಿ ಜವಾಬ್ದಾರಿಯನ್ನು ನಿರ್ವಹಣೆ ಮಾಡಿದ್ದೇವೆ. ಅಲ್ಲಲ್ಲಿ ಅಲ್ಪಸ್ವಲ್ಪ ಕೊರತೆಯಾಗಿರುವ ಘಟನೆಯನ್ನು ಬಿಟ್ಟರೆ ರಾಜ್ಯಾದ್ಯಂತ ರಸಗೊಬ್ಬರದ ಕೊರತೆ ಬಾರದ ಹಾಗೆ ಕಾಪು ದಾಸ್ತಾನು ನಿರ್ವಹಣೆಯನ್ನು ಮಾಡಿ ಸುಮಾರು ಅರ್ಧದಷ್ಟು ಕಡಿಮೆ ಖರ್ಚು ಮಾಡಿದ್ದೇವೆ. ಇದು ಒಳ್ಳೆಯ ಉದ್ದೇಶ ಹೌದೋ ಅಲ್ಲವೋ? ಇದನ್ನು ಮಾಡಬೇಕೇ ಬೇಡವೇ? ಖರ್ಚು ಕಡಿಮೆಯಾದ ತಕ್ಷಣ ಖರ್ಚು ಕಡಿಮೆ ಮಾಡಿದ್ದೀರೆಂದು ಹೇಳಿದರೆ ಸರ್ಕಾರ ಹಣವನ್ನು ಕೊಡುತ್ತದೆಂದು 150 ಕೋಟಿ ರೂ. ಗಳನ್ನು ನಾನು ಖರ್ಚು ಮಾಡಲೇ? ಇದು ತಾನಾಗಿ ತಾನು ಕಡಿಮೆಯಾಗಿರುವುದಿಲ್ಲ. ನಾವು ಮತ್ತು ನಮ್ಮ ಅಧಿಕಾರಿಗಳು ಸೇರಿ ಇನ್ನಷ್ಟು ನಾಜೂಕಾಗಿ ನಿರ್ವಹಣೆ ಮಾಡಿ ಖರ್ಚು ಕಡಿಮೆ ಮಾಡೋಣವೆಂದು ಪ್ರಯತ್ನ ಮಾಡಿ ಕಡಿಮೆ ಮಾಡಿದ್ದೇವೆ. ಇದನ್ನು ಕೂಡ ಸದನದಲ್ಲಿ ಗುರುತಿಸಬೇಕಾಗುತ್ತದೆಂದು ನಾನು ಮನವಿ ಮಾಡುತ್ತೇನೆ. ಅಲ್ಲಿ ಕಡಿಮೆ ಖರ್ಚು ಮಾಡಿದ್ದೇವೆಂದರೆ ಅದು ಹಣವನ್ನು ಉಳಿಸುವ ಉದ್ದೇಶವಲ್ಲ. ಆ ಹಣವನ್ನು ಕೂಡ ನಾವು ಖರ್ಚು ಮಾಡಿದ್ದೇವೆ. ಉದಾ:ಗೆ ನಮ್ಮ ಸರ್ಕಾರದ ಆದ್ಯತೆ ಹನಿ ನೀರಾವರಿಗೆ ಮತ್ತು ಕೃಷಿ ಯಾಂತ್ರೀಕರಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದಾಗಿದೆ. ಹಿಂದಿನ ವರ್ಷಗಳಲ್ಲಿ ಕೃಷಿ ಯಾಂತ್ರೀಕರಣಕ್ಕೆ ಕೇವಲ 128 ಕೋಟಿ ರೂ. ಗಳು

ಖರ್ಚಾಗುತ್ತಿತ್ತು. ನಮ್ಮ ಸರ್ಕಾರದಲ್ಲಿ ಕಳೆದ ವರ್ಷ 210 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. ಎರಡನೇ ವರ್ಷ ಸುಮಾರು 280 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. ಎಲ್ಲಿ ಆದ್ಯತೆಯಿದೆಯೋ ಅಲ್ಲಿಗೆ ಹೆಚ್ಚು ಖರ್ಚು ಮಾಡುತ್ತಿದ್ದೇವೆ. ಎಲ್ಲಿ ಉಳಿತಾಯ ಮಾಡುವುದಕ್ಕೆ ಸಾಧ್ಯ, ಎಲ್ಲಿ ಸಮರ್ಪಕವಾಗಿ ಸದುಪಯೋಗವಾಗುತ್ತಿಲ್ಲ, ಅಂತಹ ಕಡೆ ಕಡಿವಾಣ ಹಾಕುವ ಪ್ರಯತ್ನ ಸಹಾ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಸಾಲಿನಲ್ಲಿ ನಾವು ಕೈಗೆತ್ತಿಕೊಂಡಂತಹ ಕೆಲವು ಕಾರ್ಯಕ್ರಮಗಳಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಕೇಂದ್ರಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಹೋದ ವರ್ಷ ಭರವಸೆ ಕೊಟ್ಟ ಹಾಗೆ ಹೋಬಳಿ ಮಟ್ಟದಲ್ಲಿ ರೈತರಿಗೆ ಕಡಿಮೆ ದರದಲ್ಲಿ ಯಂತ್ರೋಪಕರಣಗಳು ಬಾಡಿಗೆಗೆ ಸಿಗುವಂತಹ ಕೃಷಿ ಯಂತ್ರ ಧಾರೆಯೆಂಬ ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡಿದ್ದೇವೆ. ಯಂತ್ರೋಪಕರಣಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸಿಕೊಳ್ಳಬೇಕು. ದಿನೇ-ದಿನೇ ಕೂಲಿ-ಕಾರ್ಮಿಕರು ಸಿಗುತ್ತಿಲ್ಲ, ಅದಕ್ಕೆ ಪರ್ಯಾಯವಾಗಿ ಯಂತ್ರೋಪಕರಣಗಳ ಬಳಕೆಯಾಗಬೇಕೆಂಬ ಉದ್ದೇಶವಾಗಿದೆ. ರಾಜ್ಯದಲ್ಲಿ ಸುಮಾರು 180 ಕೇಂದ್ರಗಳನ್ನು ಚಾಲನೆ ಮಾಡಿದ್ದೇವೆ. ಇದಕ್ಕೆ ಕಳೆದ ವರ್ಷ 63 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. ಇಲ್ಲಿಯವರೆಗೆ ಸುಮಾರು 56 ಸಾವಿರ ರೈತರು ಕೃಷಿ ಯಂತ್ರ ಧಾರೆ ಕೇಂದ್ರಗಳಿಂದ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆದುಕೊಂಡು ಜಮೀನಿನಲ್ಲಿ ಹೊಲ ಉಳುವುದಕ್ಕೆ ಮತ್ತು ಬಿತ್ತನೆ ಮಾಡುವ ಕೆಲಸಕ್ಕೆ ಅನುಕೂಲ ಪಡೆದುಕೊಂಡಿದ್ದಾರೆ. ಇದು ಶಾಶ್ವತವಾಗಿ ಉಳಿಯುವಂತಹ ಕಾರ್ಯಕ್ರಮವೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಕಳೆದ ವರ್ಷ ಅನೇಕ ಸದಸ್ಯರು ಮಾತನಾಡುತ್ತಾ ಕೃಷಿಯಲ್ಲಿ ತರಬೇತಿ ಕೊಡುವುದು ಜಾಸ್ತಿ ಆಗಬೇಕೆಂದು ಹೇಳಿದರು. ಕಳೆದ ವರ್ಷ ಐ.ಟಿ.ಐ. ಗಳ ಮುಖಾಂತರ ಕೃಷಿ ತರಬೇತಿ ಕೊಡುವ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ 10 ಕಾಲೇಜುಗಳಲ್ಲಿ ಕೃಷಿ ಐ.ಟಿ.ಐ. ಕೋರ್ಸ್ ಅನ್ನು ಪ್ರಾರಂಭ ಮಾಡಿದ್ದು, 86 ವಿದ್ಯಾರ್ಥಿಗಳು ಸೇರಿದ್ದಾರೆ. ಈ ವರ್ಷ 15 ಕಾಲೇಜುಗಳಲ್ಲಿ ಐ.ಟಿ.ಐ. ಅನ್ನು ವಿಸ್ತರಣೆ

ಮಾಡಿದ್ದೇವೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲೂ ಕೂಡ ಮಳೆ ಮಾಪನ ಘಟಕಗಳನ್ನು ನಾವು ಅಳವಡಿಸಿದ್ದೇವೆ. ಈ ಕೆಲಸವನ್ನು ಕಳೆದ ವರ್ಷ ಪೂರೈಸಿದ್ದೇವೆ. ಹೋಬಳಿ ಮಟ್ಟದಲ್ಲಿ telemetric weather monitoring and TRGs ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ Telemetric Rain Guage ಗಳನ್ನು ದೇಶದಲ್ಲಿಯೇ ಮೊದಲ ಬಾರಿಗೆ ಅಳವಡಿಸಿದ್ದೇವೆ. ಯಾವ ರಾಜ್ಯದಲ್ಲೂ ಕೂಡ ಈ ಕೆಲಸವನ್ನು ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಳೆ ಮಾಪನ ಕೇಂದ್ರವನ್ನು ನಾವು ಅಳವಡಿಸಿದ್ದೇವೆ. ಅದರಲ್ಲಿ ಕೇವಲ 20–30 ಕಡೆ ಜಾಗದ ಸಮಸ್ಯೆಯಾಗಿರುವ ಗ್ರಾಮ ಪಂಚಾಯತಿಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಸುಮಾರು 5625 telemetric rain guage ಗಳನ್ನು ಅಳವಡಿಸಿದ್ದೇವೆ. ದೇಶದಲ್ಲಿಯೇ ಇದು ವಿನೂತನ ಪ್ರಯೋಗವಾಗಿದೆ. ಯಾವ ರಾಜ್ಯದಲ್ಲೂ ಕೂಡ ಈ ರೀತಿ ಪ್ರಯತ್ನ ಮಾಡಿಲ್ಲ. ಇದರ ಅನುಕೂಲವೇನು ಎಂದು ತಾವುಗಳು ಕೇಳಬಹುದು, ಅನೇಕ ಸಂದರ್ಭಗಳಲ್ಲಿ ಮಳೆ ಮಾಪನ ಕೇಂದ್ರಗಳು ಹೋಬಳಿಯಲ್ಲಿ ಎಲ್ಲೋ ಒಂದು ಕಡೆ ಇರುತ್ತದೆ. ಬಹುಶಃ ಅಲ್ಲಿ ಮಾತ್ರ ಮಳೆ ಬಿದ್ದಿದ್ದು, ಹೋಬಳಿಯ ಇತರೆ ಭಾಗಗಳಲ್ಲಿ ಮಳೆಯಾಗಿರುವುದಿಲ್ಲ. ಹಾಗಾಗಿ ನಾವು ತರಿಸಿಕೊಳ್ಳುವ ವರದಿಗಳು ಯಾವುವು ಸಹಾ ಸಮರ್ಪಕವಾಗಿರುವುದಿಲ್ಲ. ಆ ಹೋಬಳಿಯ ಸಂಪೂರ್ಣ ಚಿತ್ರಣವನ್ನು ಕೊಡುವುದಿಲ್ಲ. ಎರಡನೆಯದಾಗಿ ವಿಮೆ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ನಿಖರವಾಗಿ ಮಾಡಬೇಕು. ವಿಮೆಯಿಂದ ರೈತರಿಗೆ ಅನುಕೂಲವಾಗಬೇಕೆಂಬುದಾದರೆ ನಾವು ಪಂಚಾಯಿತಿ ಮಟ್ಟದಲ್ಲಿ ಈ ಮಳೆ ಮಾಪನ ಕೇಂದ್ರಗಳನ್ನು ಅಳವಡಿಸದೆ ಹೋದರೆ ಗುಣಾತ್ಮಕವಾದಂತಹ ಮಳೆ ಬಗ್ಗೆ ಮಾಹಿತಿ ನಮಗೆ ಸಿಗುವುದಿಲ್ಲ. ಅಂತಹ ಸಂದರ್ಭದಲ್ಲಿ ವಿಮೆಯನ್ನು ಸಹ ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು contingency plan ಮಾಡುವುದಕ್ಕಾಗಲಿ, ಮಳೆಯ ಅತಿವೃಷ್ಟಿ–ಅನಾವೃಷ್ಟಿಯನ್ನು ಸರಿಯಾಗಿ ಅಧ್ಯಯನ ಮಾಡುವುದಕ್ಕಾಗಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿಯೂ ಸಹ ಮಳೆ ಮಾಪನ

ಕೇಂದ್ರಗಳನ್ನು ಮಾಡಬೇಕೆನ್ನುವಂತಹ ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಗಳು 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದ್ದರು. ಅದಕ್ಕಾಗಿಯೇ ಕೃಷಿ ಇಲಾಖೆಯಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ಅನುದಾನವನ್ನು ನೀಡಿ ದೇಶದಲ್ಲಿಯೇ ಮೊದಲ ಬಾರಿಗೆ ಈ ಕಾರ್ಯಕ್ರಮವನು ನಾವು ಅನುಷ್ಠಾನ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಆಡಳಿತ ದೃಷ್ಟಿಯಿಂದ ಮತ್ತು ಬೆಳೆ ವಿಮೆ ದೃಷ್ಟಿಯಿಂದ ಅತಿವೃಷ್ಠಿ–ಅನಾವೃಷ್ಠಿಗೆ ಸಂಬಂಧಿಸಿದಂತಹ ಎಲ್ಲಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವುದಕ್ಕೆ ಇದು ಬಹಳ ಅನುಕೂಲವಾಗುತ್ತದೆ. ಮಳೆ ಮಾಪನ ಕೇಂದ್ರಗಳನ್ನೇನು ಅಳವಡಿಸಿದ್ದೇವೆ, ಅಲ್ಲಿಂದ ಬರುವಂತಹ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಮುಂದಿನ ದಿನಗಳಲ್ಲಿ ಮಳೆ ಯಾವ ರೀತಿಯಾಗಬಹುದೆಂಬ prediction ಗೂ ಸಹ ಉಪಯೋಗ ಮಾಡುತ್ತಿದ್ದೇವೆ. ಇವುಗಳ ಆಧಾರದ ಮೇಲೆ ಪ್ರಾಯೋಗಿಕವಾಗಿ ಮಳೆ ಯಾವಾಗ ಆಗಬಹುದು, ಎಷ್ಟು ಮಳೆ ಆಗಬಹುದು ಎನ್ನವಂತಹ predict ಮಾಡುವ ವ್ಯವಸ್ಥೆಯನ್ನು ನಾವು ಚಾಲನೆ ಮಾಡಿದ್ದೇವೆ. ಪ್ರಾಯೋಗಿಕವಾಗಿ ಮಾಡುತ್ತಿದ್ದು ಇದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆನ್ನುವುದು ಗೊತ್ತಿಲ್ಲ. ಬಹಶಃ ಈ ಎಲ್ಲಾ ಅಂಶಗಳ ಪೂರಕವಾಗಿ, ವೈಜ್ಞಾನಿಕವಾಗಿ ಬಹಳ ಒಳ್ಳೆಯ ಒಂದು ಹೆಜ್ಜೆಯನ್ನು ಕರ್ನಾಟಕ ಇಟ್ಟಿದ್ದು, ಕಳೆದ ವರ್ಷದಲ್ಲಿ ಈ ಒಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದೇವೆಂದು ಸದನದಲ್ಲಿ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ, ಈ ವರ್ಷ ಆರಂಭದಿಂದ ಅನೇಕ ಸದಸ್ಯರುಗಳು ಮಾತನಾಡುತ್ತಾ ರೈತ ಸಂಪರ್ಕ ಕೇಂದ್ರಗಳ ಬಗ್ಗೆಯೂ ಮಾತನಾಡಿದ್ದಾರೆ. ರೈತರ ಸಂಪರ್ಕ ಕೇಂದ್ರಗಳು ಕೇವಲ ಬಿತ್ತನೆ ಬೀಜ, ಗೊಬ್ಬರ ಕೊಡುವುದಕ್ಕೆ ಮಾತ್ರ ಸೀಮಿತವಾಗುತ್ತಿವೆಯೇ ಹೊರತು ಇದರಿಂದ ಹೊರಗಡೆ ಬರಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಮಾತನಾಡುತ್ತೇನೆ. ಇದರ ಜೊತೆಗೆ ಇನ್ನೊಂದು ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟಿರುತ್ತೇವೆ. ಇನ್ನೊಂದು ರೈತರ ಅನುಭವ ಏನಿದೆ, ರೈತ ಅಂದರೆ ರೈತ. ಆದರೆ ನಮ್ಮ ಇಲಾಖೆಗಳಲ್ಲಿ ಏನಾಗುತ್ತೆಯೆಂದರೆ ರೈತ ಎಂದರೆ ನೀನು ರೇಷ್ಮೆ,

ತೋಟಗಾರಿಕೆ ಅಥವಾ ಕೃಷಿ ರೈತನೇ ಎಂದು ಕೇಳುತ್ತಾರೆ. ಈ ರೀತಿ ಮೂರು ಇಲಾಖೆಗಳನ್ನು ವಿಂಗಡಣೆ ಮಾಡಿಕೊಂಡಿದ್ದೇವೆ. ನಮ್ಮ ರೈತ ಸಂಪರ್ಕ ಕೇಂದ್ರಕ್ಕೆ ರೈತರು ಬಂದಾಗ, ಅವರು ಬಾಳೆಕಾಯಿ ಬಗ್ಗೆ ಮಾತನಾಡಿದರೆ, ಆಗ ಆ ಅಧಿಕಾರಿಯು ನಮಗೆ ಬಾಳೇಕಾಯಿ ವಿಚಾರ ಬರುವುದಿಲ್ಲ. ನೀವು ತೋಟಗಾರಿಕಾ ಇಲಾಖೆಯಲ್ಲಿ ವಿಚಾರ ಮಾಡಿ ಎಂದು ಹೇಳುತ್ತಾರೆ. ತೋಟಗಾರಿಕೆಯಲ್ಲಿ ರೇಷ್ಮೆ ಬಗ್ಗೆ ಕೇಳಿದರೆ, ಅವರು ನೀವು ರೇಷ್ಮೆ ಇಲಾಖೆಗೆ ಹೋಗಿ ವಿಚಾರ ಮಾಡಿ ಎಂದು ಹೇಳುತ್ತಾರೆ. ಈ ಪದ್ಧತಿಯನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ಹೇಳಿ ರೈತ ಸಂಪರ್ಕ ಕೇಂದ್ರಗಳನ್ನು ಒಂದೇ ಸೂರಿನಡಿ ಮೂರು ಇಲಾಖೆಗಳು ಕೆಲಸ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ಘೋಷಣೆ ಮಾಡಿದ್ದಾರೆ. ಈ ವರ್ಷದಿಂದ ಮೂರು ಇಲಾಖೆಗಳು ಆರಂಭದಲ್ಲಿ ವಾರದಲ್ಲಿ ಕೆಲವು ದಿನಗಳ ಮಟ್ಟಿಗೆ ಒಂದೇ ರೈತ ಸಂಪರ್ಕ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಬೇಕು. ಅಲ್ಲಿಗೆ ಬರುವಂತಹ ರೈತರಿಗೆ ಮೂರು ಇಲಾಖೆಗಳ ಅಧಿಕಾರಿಗಳು ಕೈಗೆ ಸಿಗುವಂತೆ ಆಗಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಅಂದರೆ ಈಗ ರೇಷ್ಮೆ ಇಲಾಖೆ Industry Department ನಿಂದ Agricultural Department ಗೆ ಬರುತ್ತದೆಯೇ?

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ರೇಷ್ಮೆ ಇಲಾಖೆ ಕೈಗಾರಿಕಾ ಇಲಾಖೆಯಿಂದ ತೋಟಗಾರಿಕಾ ಇಲಾಖೆಗೆ ವರ್ಗವಾಗಿದೆ. ಆ ಇಲಾಖೆ ತೋಟಗಾರಿಕಾ ಕಾರ್ಯದರ್ಶಿಯವರ ಕೆಳಗಿದೆ. ಮೂರು ಇಲಾಖೆಯ ಅಧಿಕಾರಿಗಳು ಸಂಪರ್ಕ ಕೇಂದ್ರದಲ್ಲಿ ಒಂದೇ ಸೂರಿನಡಿ ಅಲ್ಲಿಗೆ ಬಂದಂತಹ ರೈತರಿಗೆ ಮಾಹಿತಿ ಸಿಗಬೇಕೆನ್ನುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಚಾಲನೆ ಮಾಡಿದ್ದೇವೆ. ಅದು ಅಲ್ಲಿಗೆ ನಿಲ್ಲುತ್ತದೆಂದಲ್ಲ, ಮುಂದುವರೆದು ಆ ಇಲಾಖೆಗಳಿಂದ ಕೊಡತಕ್ಕಂತಹ ಅನೇಕ ಯೋಜನೆಗಳೇನಿವೆ, ಅಂದರೆ ಹನಿ ನೀರಾವರಿ ಯೋಜನೆ ಅಥವಾ ಇಲಾಖೆಗಳಿಂದ ಕೊಡತಕ್ಕಂತಹ ಸಹಾಯಧನವಿರಬಹುದು, ಎಲ್ಲವೂ ಸಹ

ಒಂದೇ ಕೇಂದ್ರದ ಮುಖಾಂತರ ವಿತರಣೆಯಾಗಬೇಕು. ರೈತರು ಅಲ್ಲಿಗೆ ಹೋದಾಗ ಮೂರು ಇಲಾಖೆಗಳ ಜೊತೆಗೆ ಸಂಪರ್ಕ ಸಾಧನೆಯಾಗಬೇಕೆನ್ನುವ ಉದ್ದೇಶದಿಂದ ಮೊದಲನೆಯ ಹೆಜ್ಜೆಯನ್ನು ಈ ವರ್ಷದಲ್ಲಿ ನಾವು ಈಗಾಗಲೇ ಇಟ್ಟಿದ್ದೇವೆ. ಮಾನ್ಯ ಸದಸ್ಯರಾದ ಬೊಮ್ಮಾಯಿ ಅವರು ಮತ್ತು ಅನೇಕ ಸದಸ್ಯರು ಇದರ ಬಗ್ಗೆ ಮಾತನಾಡಿದರು. ಈ ಒಂದು ದಿಕ್ಕಿನಲ್ಲಿ ನಾವು ಕ್ರಮ ವಹಿಸುತ್ತಿದ್ದೇವೆಂದು ಸದನದ ಮುಖಾಂತರ ಹೇಳಬಯಸುತ್ತೇನೆ.

ಕೆಲವೊಂದು ಕಾರ್ಯಕ್ರಮಗಳನ್ನು ಕಳೆದ ವರ್ಷ ಅವಳಡಿಸಲಾಗಿದೆ. ಮಾನ್ಯ ಸದಸ್ಯರಾದ ಗೋವಿಂದ ಎಂ. ಕಾರ್‌ಜೋಳ್ ಅವರು ಮಾತನಾಡುತ್ತಾ, ನಿಮ್ಮ ಇಲಾಖೆಯ ಸಲಕರಣೆಗಳ ದರಪಟ್ಟಿ ಏನಿದೆ, ಮಾರುಕಟ್ಟೆ ದರಗಳಿಗಿಂತ ಹೆಚ್ಚಾಗಿದೆ ಎನ್ನುವ ಮಾತನ್ನು ಹೇಳಿದ್ದರು. ಇದಕ್ಕೆ ಪರಿಹಾರವಾಗಿ ನಾವು ಬಹಳ ವಿಚಾರವನ್ನು ಮಾಡಿದೆವು. ವಿಚಾರ ಮಾಡಿ ಕೊನೆಗೆ ಈ ಹಣವನ್ನು ರೈತರ ಅಕೌಂಟ್‌ಗೆ ಹಾಕೋಣವೆಂದು ನಿರ್ಧಾರ ಮಾಡಿದೆವು. ಆಗ ರೈತರೇ ಮಾರುಕಟ್ಟೆಗೆ ಹೋಗಿ ಖರೀದಿ ಮಾಡಿದರೆ, ಸ್ವಲ್ಪಮಟ್ಟಿಗಾದರೂ ಇದಕ್ಕೆ ಕಡಿವಾಣ ಬೀಳುತ್ತದೆನ್ನುವ ಉದ್ದೇಶವನ್ನಿಟ್ಟುಕೊಂಡು ನಾವು ಇದರಲ್ಲಿ ಬದಲಾವಣೆಯನ್ನು ತಂದು 5,000 ರೂ. ಗಳಿಗೆ ಮೇಲ್ಪಟ್ಟಂತಹ ಸಹಾಯ ಧನವನ್ನು ರೈತರ ಅಕೌಂಟಿಗೆ ಹಾಕುವ ಕಾರ್ಯವನ್ನು ಕಳೆದ ವರ್ಷದಿಂದಲೇ ಮಾಡುತ್ತಿದ್ದೇವೆ. ಇದರ ಮುಖಾಂತರ ಎಲ್ಲೋ ಒಂದು ಕಡೆ ರೈತರಿಗೆ ಸರಿಯಾದ ದರದಲ್ಲಿ ಸಲಕರಣೆಗಳು ಸಿಗುತ್ತವೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:- ಮಾನ್ಯ ಸಚಿವರೆ, ಇದು ಒಳ್ಳೆಯ ಸಲಹೆ. Selection ಆದ ನಂತರ ರೈತರ ಅಕೌಂಟಿಗೆ ಹಣವನ್ನು ಹಾಕುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ:- Selection ಆದ ಮೇಲೆ ರೈತರ ಖಾತೆಗೆ ಹಣವನ್ನು ಜಮಾ ಮಾಡುತ್ತೇವೆ. ಎಲ್ಲಾ ರೈತರ ಆಯ್ಕೆಯಾಗಬೇಕು. ಆಯ್ಕೆ

ಮತ್ತು ನಮ್ಮ ಆದೇಶ ಪತ್ರ ಇಲ್ಲದೇ ಹೋದರೆ ನಾವು ಯಾವುದಕ್ಕೂ ಮಾನ್ಯತೆ ಕೊಡುವುದಿಲ್ಲ.

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಅಧ್ಯಕ್ಷರೆ, ಎರಡು ಲಕ್ಷಕ್ಕಿಂತ ಬೆಲೆ ಬಾಳುವ ಉಪಕರಣಗಳೇನಿವೆ, ಅದಕ್ಕೆ ಸಬ್ಸಿಡಿ ಕೊಡಬಾರದು ಮತ್ತು ಅದಕ್ಕೆ ಸಂಬಂಧಿಸಿದಂತೆ ಹೊಸದಾಗಿ G.O. ಬಂದಿದೆ ಎಂದು ನಿಮ್ಮ ಇಲಾಖೆಯವರೇ ಹೇಳುತ್ತಿದ್ದರು. ನಮ್ಮ ರೈತರು ಮೂರು ಲಕ್ಷಕ್ಕಿಂತಲೂ ಹೆಚ್ಚಿಗೆ ಹಣವನ್ನು ಕೊಟ್ಟು tractor ಕೊಂಡುಕೊಳ್ಳಬೇಕಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ:– ನೀವು ಹೇಳಿರುವ ವಿಷಯ ಗೊತ್ತಿದೆ. ನಂತರ ಹೇಳುತ್ತೇನೆ. ಆ ರೂಪದಲ್ಲಿ ರೈತರಿಗೆ ಹಣವನ್ನು ಹಾಕುವುದರ ಮುಖಾಂತರ, ಹಣ ಖರ್ಚಾಗಿ ಲಾಭವೇನಾದರೂ ಉಳಿದರೆ ರೈತರಿಗೆ ಉಳಿಯಲಿ. ನಮ್ಮ ಇಲಾಖೆಗೇನೂ ಇದರಿಂದ ಉಳಿತಾಯವಾಗುವುದಿಲ್ಲ. ಏಕೆಂದರೆ ನಮ್ಮ ದರಪಟ್ಟಿ ಪ್ರಕಾರವೇ ಸಹಾಯಧನ ಕೊಡುತ್ತೇವೆ. ಅದರಲ್ಲೇನಾದರೂ ಹೆಚ್ಚುವರಿ ಉಳಿತಾಯ ಅಥವಾ ಅನುಕೂಲ ಸಿಕ್ಕಿದರೆ ರೈತನಿಗೆ ಸಿಗಲಿ. ಖಾಸಗಿ ಕಂಪನಿಗೆ ಸಿಗುವುದು ಬೇಡವೆನ್ನುವ ಕಾರಣದಿಂದ ಆ ರೀತಿ ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನೀವು ಬಹಳ ದೃಢವಾದ ನಿರ್ಧಾರವನ್ನು ತೆಗೆದುಕೊಂಡು ಮಾಡಿರುವ ಕೆಲಸ ಬಹಳ ಒಳ್ಳೆಯ ಕೆಲಸ. ಆದರೆ ಅಲ್ಲಿ ಏನಾಗಿದೆ ಎಂದರೆ, ನೀವು ಇಂತಹ ಕಂಪನಿಯವರಿಂದಲೇ ತೆಗೆದುಕೊಳ್ಳಬೇಕೆಂದು ನಿರ್ದಿಷ್ಟ ಮಾಡಿದ್ದೀರಿ. ಇದಕ್ಕೆ ಪೂರಕವಾಗಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಬ್ಬಿಣದ ನೇಗಿಲು ಅಂದರೆ tractor ನ cultivator ಏನಿದೆ, ಅದು ನಮ್ಮ ಅರಸೀಕೆರೆಯಲ್ಲಿ 20,000 ರೂ. ಗಳಿಗೆ ಸಿಗುತ್ತದೆ. ನಿಮ್ಮ ಇಲಾಖೆಯಿಂದ ಕೊಡುವ same ಗುಣಮಟ್ಟವೇ ಆಗಿರುತ್ತದೆ. ನಿಮ್ಮ ಏಜೆನ್ಸಿಯವರು ಅರಸೀಕೆರೆಗೆ ಬಂದು ತೆಗೆದುಕೊಂಡು ಹೋಗುತ್ತಾರೆಯೇ ಹೊರತು ಅವರೇನು ಸ್ವಂತವಾಗಿ ತಯಾರು ಮಾಡುವುದಿಲ್ಲ. ಆ ಏಜೆನ್ಸಿಯವರು ಮಧ್ಯವರ್ತಿಗಳಾಗಿ ₹ 20,000/– ಗಳಿಗೆ ಖರೀದಿ ಮಾಡಿ ನಿಮಗೆ 32,000/– ರೂ. ಗಳಿಗೆ

ಕೊಡುತ್ತಿದ್ದಾರೆ. ನೀವು ರೈತರಿಗೆ ಒಳ್ಳೆಯದಾಗಲಿ ಎನ್ನುವ ಉದ್ದೇಶವನ್ನಿಟ್ಟು ಮಾಡಿದ್ದೀರಿ. ರೈತರಿಗೆ free ಬಿಡಿ. ಸಬ್ಸಿಡಿ ತೆಗೆದುಕೊಂಡು ಮೂಲಾಧಾರದಿಂದ ತಪ್ಪಿಸುವವಂತೆ ಹೇಗೆ ಮಾಡಿದ್ದೀರಿ, ಅದೇ ರೀತಿಯಲ್ಲಿ ಮಾಡಿ. ಏಜೆನ್ಸಿಯವರು ನೀವು ಸರ್ಟಿಫೈ ಮಾಡುವಂತಹ, ನಿಮ್ಮ ಗುಣಮಟ್ಟದ, ನಿಮ್ಮ ಎಲ್ಲಾ ನಿಯಮಗಳೆಲ್ಲವನ್ನೂ ಒಳಗೊಂಡಂತಹ ಪರಿಕರವನ್ನು ಅವನು ಖರೀದಿ ಮಾಡಿ ತೋರಿಸಿದಾಗ ನೀವು ಅವರಿಗೆ ಎಷ್ಟು ದುಡ್ಡು ಇದೆಯೋ ಅಷ್ಟನ್ನು ಮಾತ್ರ ಕೊಡಿ. ಮಧ್ಯದಲ್ಲಿ 12,000/- ರೂ. ಗಳೆಂದರೆ ಅರ್ಥವೇನು? ನಾನೇ ಸ್ವತಃ ಅರಸೀಕೆರೆಯಲ್ಲಿ ಅವರು ತೆಗೆದುಕೊಂಡು ಹೋಗಿರುವುದನ್ನು ನೋಡಿದ್ದೇನೆ. ಮಧ್ಯವರ್ತಿಯಾಗಿರುವವರು 12,000/- ರೂ. ಗಳನ್ನು ತಿನ್ನುತ್ತಿದ್ದಾರೆ. ನೀವು ಇಂತಹ ಕಂಪನಿಯಿಂದಲೇ ತೆಗೆದುಕೊಳ್ಳಿ ಎಂಬ ನಿರ್ದಿಷ್ಟವಾದ ಸೂಚನೆಯನ್ನು ಕೊಡಬೇಡಿ. ನೀವು ಎಲ್ಲಿ ಖರೀದಿ ಮಾಡಿದರೂ ನಿಯಮಾನುಸಾರ, ಬದ್ಧತೆಯಿಂದ ಖರೀದಿ ಮಾಡಿ ಎನ್ನುವ ಸೂಚನೆಯನ್ನು ಕೊಡಬೇಕು. ಹಣವೆಲ್ಲವೂ ಮಧ್ಯವರ್ತಿಗಳ ಪಾಲಾಗುತ್ತಿದೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ವಿಚಾರ ಮಾಡುತ್ತೇವೆ. ಆದರೆ ನಮ್ಮಲ್ಲಿ ನಾವು ಯಾವುದೇ ರೀತಿಯ ನಿಬಂಧನೆಯನ್ನು ಹಾಕುವುದಿಲ್ಲ. ನಾವು ಟೆಂಡರ್ ಕರೆಯುವುದು ನಿಜ. ಏಕೆಂದರೆ, ಕೇವಲ empanel ಮಾಡುವುದಕ್ಕಾಗಿ ಟೆಂಡರ್ ಕರೆಯುತ್ತೇವೆ. Empanel ಆದಾಗ ಆ ಪಟ್ಟಿಯಲ್ಲಿರುವಂತಹ ಯಾರ ಹತ್ತಿರ ಬೇಕಾದರೂ ರೈತರು ಸಲಕರಣೆಯನ್ನು ಖರೀದಿ ಮಾಡಬಹುದು. ಆ ರೀತಿಯ ಸ್ವಾತಂತ್ರ್ಯವನ್ನು ರೈತರಿಗೆ ಕೊಡುತ್ತಿರುವುದರಿಂದ ಸ್ವಲ್ಪಮಟ್ಟಿಗೆ ನೀವು ಹೇಳಿರುವ ವಿಷಯ ಸುಧಾರಣೆಯಾಗಬಹುದೆಂದು ಅನಿಸುತ್ತದೆ. ಈ ವಿಷಯದ ಬಗ್ಗೆ ನಾನು ತಮ್ಮ ಹತ್ತಿರ ವೈಯಕ್ತಿಕವಾಗಿ ಮಾತನಾಡುತ್ತೇನೆ.

ಹಾಗೆಯೇ, ಕಳೆದ ವರ್ಷ ಹನಿ ನೀರಾವರಿ ಘಟಕಗಳನ್ನು ಸ್ಥಾಪನೆ ಮಾಡಿದ್ದು, ಹನಿ ನೀರಾವರಿ ಅಥವಾ sprinkler, drip irrigation ಆಗಬಹುದು. ಈ ಬಗ್ಗೆ ಈಗಾಗಲೇ ಅನೇಕ ಜನ ಸದಸ್ಯರು ಮಾತನಾಡಿ

ನಿಮ್ಮ ಇಲಾಖೆಯ ದರಗಳು ಜಾಸ್ತಿಯಿವೆ ಎಂದು ಹೇಳಿದರು. ವಿಶೇಷವಾಗಿ ನಾವು ನಮ್ಮ ಅಧಿಕಾರಿಗಳು ಆ ಸಂಸ್ಥೆಗಳವರನ್ನು ನಮ್ಮ ಜೊತೆಯಲ್ಲಿ ಕೂರಿಸಿಕೊಂಡು ಮತ್ತು ಬೇರೆ ರಾಜ್ಯಗಳಿಂದ ಮಾಹಿತಿಯನ್ನು ತರಿಸಿಕೊಂಡು ಚರ್ಚೆ ಮಾಡಿರುತ್ತೇವೆ. ಬೇರೆ ರಾಜ್ಯದಲ್ಲಿ ಒಂದು ಎಕರೆಗೆ ಎಷ್ಟು ನೀವು ದರವನ್ನು ನಿಗದಿ ಮಾಡಿರುತ್ತಾರೆಂಬುದನ್ನು ನೋಡಿ ಮತ್ತು ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ದರವನ್ನು ನಿಗದಿ ಮಾಡಿದ್ದು, ಅದನ್ನು ಆಧಾರವಾಗಿಟ್ಟುಕೊಂಡು ಹನಿ ನೀರಾವರಿ ಮೇಲೆ ಸುಮಾರು ಶೇ. 22 ರಿಂದ ಶೇ 35 ರವರೆಗೆ ಅವರ ದರವನ್ನು ಕಡಿಮೆ ಮಾಡಿಸಿದ್ದೇವೆ. ಇದೆಲ್ಲವೂ ನಮಗೆ ಬಳುವಳಿಯಾಗಿ ಬಂದಿರುತ್ತದೆ. ಏಕೆ ಜಾಸ್ತಿಯಾಯಿತೆಂದು ಕೇಳಿದರೆ ನನ್ನ ಹತ್ತಿರ ಉತ್ತರವಿಲ್ಲ. ಏಕೆಂದರೆ ಹಿಂದೆ ಇದ್ದವರೆಲ್ಲಾ 30–35% ನಷ್ಟು ಜಾಸ್ತಿ ಮಾಡಿಟ್ಟು ಹೋಗಿದ್ದಾರೆ. ಅದನ್ನು ಇವತ್ತು ನಾವು ಮತ್ತು ನಮ್ಮ ಅಧಿಕಾರಿಗಳು ಅದನ್ನು ತೀವ್ರವಾಗಿ ತೆಗೆದುಕೊಂಡು ಅವರನ್ನು ಕರೆದು, ಕೂರಿಸಿ ಚರ್ಚೆ ಮಾಡಿರುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಸಾರ್, ನಿಮ್ಮ ಮೇಲೆ ವಿಶ್ವಾಸವಿದೆ. ಬಹಳ ಕಂಟ್ರೋಲ್ ಮಾಡಿದ್ದೀರಿ. ನೀವು ಇನ್ನೂ ಸ್ವಲ್ಪ ನಮ್ಮವರ ಸಲಹೆಯನ್ನು ತೆಗೆದುಕೊಳ್ಳಿ. ಆಗ ನೀವು ಮಾದರಿ ಸಚಿವರಾಗುತ್ತೀರಿ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಿಮ್ಮ ಸಲಹೆ ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ. ಇದು ಉದಾಹರಣೆಗೆ ಹೇಳಿರುವುದು. ನನ್ನ ಹತ್ತಿರ ಬಹಳ ವಿವರಗಳಿರುವುದರಿಂದ ನಾನು ಮಾತನಾಡುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. Drip and sprinkler irrigation ಮೇಲೆ ಶೇ. 22 ರಿಂದ ಶೇ. 35 ರವರೆಗೆ ಎಕರೆಗೆ ತಗಲುವಂತಹ, ಕಂಪನಿ ನಿಗದಿ ಮಾಡಿರುವಂತಹ ದರವನ್ನು ಕಡಿಮೆ ಮಾಡಿಸಿದ್ದೇವೆ. ಒಟ್ಟಾರೆ ಅವರಿಗೆ ಒತ್ತಾಯ ಮಾಡಿ ಕಡಿಮೆ ಮಾಡಿಸಿದ್ದೇವೆ. ಕಡಿಮೆ ಮಾಡಲಿಲ್ಲವೆಂದರೆ, ನಿಮ್ಮನ್ನು ದರಪಟ್ಟಿಯಲ್ಲಿ ಹಾಕುವುದಿಲ್ಲವೆಂಬ ನಿಬಂಧನೆಯನ್ನು ಹಾಕಿ ಕಡಿಮೆ ಮಾಡಿಸಿದ್ದೇವೆ. ಬೇರೆಯದಕ್ಕೂ ಕಡಿಮೆ ಮಾಡಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದಾದ ನಂತರ

ಒಂದನ್ನು ಮಾಡೋಣ. ವ್ಯವಸ್ಥೆಯು ಬಹಳ ಕೆಟ್ಟಿರುವುದರಿಂದ ಎಲ್ಲವನ್ನೂ ಒಮ್ಮೆಲೆಗೆ ಸರಿ ಮಾಡುವುದಕ್ಕೆ ಆಗುವುದಿಲ್ಲ. ಹಾಗೆಯೇ ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೂ ತರುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿರುವ ದರಪಟ್ಟಿಯಲ್ಲಿರುವಂತಹ ಬಹುತೇಕ ಸಲಕರಣೆಗಳು ಹೆಚ್ಚಿನ ದರಕ್ಕೆ ನಿಗದಿಯಾಗಿವೆ. ನಾನೇ, ನನಗೆ ಬೇಕಾದಂತಹವರನ್ನು ಮಾರುಕಟ್ಟೆಗೆ ಕಳುಹಿಸಿ ಡೀಸೆಲ್ ಪಂಪಿನ ದರವನ್ನು ತರಿಸಿಕೊಂಡೆ. ಮಾರುಕಟ್ಟೆಯಲ್ಲಿ ಹೇಳಿರುವ ದರಕ್ಕೂ ನಮ್ಮ ಹತ್ತಿರ ಇರುವ ದರಕ್ಕೂ ಬಹಳ ವ್ಯತ್ಯಾಸವಿದೆಯೆಂದು ಕಂಡು ಬಂತು. ಹಾಗಾಗಿ ಇಂದು ಆ ಕಂಪನಿಗೆ ನೋಟೀಸ್ ನೀಡಿದ್ದೇವೆ. ನೋಟೀಸಿಗೆ ಸಂಬಂಧಿಸಿದಂತೆ ಸಮರ್ಪಕವಾದ ಉತ್ತರ ನಮಗೆ ಬರಲಿಲ್ಲವೆಂದರೆ ಬರೀ ಕಪ್ಪು ಪಟ್ಟಿಗೆ ಹಾಕುವುದಲ್ಲ, ಮಾನ್ಯ ಶಿವಲಿಂಗೇಗೌಡರೇ ಕೇಳಿಸಿಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇದಕ್ಕೆಲ್ಲಾ ಉದಾಹರಣೆ ಯಾರೆಂದರೆ ನಿಮ್ಮ ಅಧಿಕಾರಿಗಳು. ಅವರ ಲಾಭ ಮತ್ತು ಕಮೀಷನ್ ಹಾಕಿ ದರವನ್ನು ಮಾಡುತ್ತಾರೆ. ಮಾನ್ಯ ಸಚಿವರು ಒಳ್ಳೆಯವರು. ಅಲ್ಲಿರುವವರೆಲ್ಲಾ ಹೆಗ್ಗಣಗಳು. ರೈತರ ದುಡ್ಡನ್ನು ಯಾರೂ ತಿನ್ನಬಾರದು. (ಗೊಂದಲ) ಯಾರ ದುಡ್ಡು ಯಾರು ಬೇಕಾದರೂ ಲೂಟಿ ಮಾಡಿಕೊಂಡು ಹೋಗಲಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ಅಲ್ಲಿರುವವರೆಲ್ಲಾ ನಮ್ಮ ನಿಮ್ಮ ಅಣ್ಣ ತಮ್ಮಂದಿರೇ, ಬೇರೆ ಯಾರೂ ಅಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರಲ್ಲಿ ಒಂದು ವಿನಂತಿ ಮಾಡುತ್ತೇನೆ. ತಾವು ಸಹಾಯಧನವನ್ನು ಒಳ್ಳೆಯ ಘನ ಉದ್ದೇಶದಿಂದ ರೈತರಿಗೆ ಕೊಡುತ್ತಿದ್ದೀರಿ, ಮಾರುಕಟ್ಟೆಯಲ್ಲಿ rate ಅನ್ನು ನೋಡಿದಾಗ ಒಂದೇ ರೀತಿಯಿರುತ್ತದೆ. ಅದಕ್ಕೆ ಕಡಿವಾಣ ಹಾಕಿ ನಿಜವಾದ ಸಹಾಯ ಧನದ ರೂಪದಲ್ಲಿ ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಅವರಿಗೆ ನಾವು ಸೂಚನೆ ಕೊಟ್ಟಿರುವುದರ ಜೊತೆಗೆ ಕಪ್ಪುಪಟ್ಟಿಗೆ ಹಾಕುವುದು ಅಷ್ಟೇ ಅಲ್ಲ, ನಮಗೆ ಇರುವಂಥ ಮಾಹಿತಿ ನಿಜ ಅನ್ನುವುದಾದರೆ ಅವರು ಇಲ್ಲಿಯವವರೆಗೂ ಎಷ್ಟು ಸರಬರಾಜು ಮಾಡಿದ್ದಾರೆಯೋ ಅಷ್ಟರ ಮೊತ್ತವನ್ನು ವಾಪಸ್ಸು ವಸೂಲಿ ಮಾಡುತ್ತೇವೆ. ಅಂದರೆ ನಾವು ಕೊಟ್ಟಿರುವ notice ಪ್ರಕಾರ ಇದು ಸರಿ, ನಮಗೆ ಹೆಚ್ಚಿನ ದರಕ್ಕೆ ಕೊಟ್ಟಿದ್ದಾರೆ, ಮಾರುಕಟ್ಟೆಯಲ್ಲಿ ಕಡಿಮೆಯಿರುವುದರ ಬಗ್ಗೆ ಅವರು ನಮಗೆ ಸಮಜಾಯಿಷಿ ಕೊಟ್ಟಿದ್ದಾರೆ. ಇಲ್ಲ, ನಮಗೆ ಇದನ್ನು ಅಲ್ಲಿ delivery ಕೊಡುವುದಕ್ಕೆ ಇಷ್ಟು ಖರ್ಚಾಗುತ್ತದೆ, ಇದರ ಜೊತೆಗೆ foot valve ಕೊಡಬೇಕು, ಅದಕ್ಕೆ ಇಷ್ಟು ಖರ್ಚಾಗುತ್ತದೆಂದು ಏನೇನೋ ಸಮಜಾಯಿಷಿ ಕೊಟ್ಟಿದ್ದಾರೆ. ಅದನ್ನೆಲ್ಲಾ ನಾವು ಪರೀಕ್ಷೆ ಮಾಡಿ ನೋಡುತ್ತೇವೆ. ಅದರಲ್ಲಿ ಸತ್ಯಾಂಶ ಅಲ್ಲ ಎಂದು ಗೊತ್ತಾದರೆ ಇಲ್ಲಿಯವರೆಗೂ ಅವರೇನು ಸರಬರಾಜು ಮಾಡಿದ್ದಾರೆ, ಹೆಚ್ಚಿಗೆ ದರ charge ಮಾಡಿದ್ದಾರೆ, ಅದನ್ನು ವಾಪಸ್ಸು ವಸೂಲಿ ಮಾಡುವ ಮಟ್ಟಕ್ಕೂ ಸಹ ನಾವು ಬಿಡುವುದಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಜಲಾನಯನದಲ್ಲಿ ಖರ್ಚು-ವೆಚ್ಚಗಳ ಬಗ್ಗೆ, ಕಳೆದ ವರ್ಷ ಪ್ರಗತಿ ಆಗಿಲ್ಲವೆಂದು ಸಹ ಅನೇಕ ಸದಸ್ಯರು ಮಾತನಾಡಿದರು. ಹೌದು, ನಿಜ ಆಗಿಲ್ಲ, ನಾನೂ ಒಪ್ಪಿಕೊಳ್ಳುತ್ತೇನೆ. ಅದರಲ್ಲಿ ಮತ್ತೊಂದು ಅಭಿಪ್ರಾಯ ಇಲ್ಲ. ನೀವು ವಿಲೀನ ಮಾಡಿದ್ದರಿಂದ ಖರ್ಚು ಕಡಿಮೆಯಾಯಿತು ಎಂದು ಕೆಲವರು ಹೇಳಿದರು. ಅದು ಸತ್ಯ ಅಲ್ಲ ಕಳೆದ ವರ್ಷ ಖರ್ಚು ಕಡಿಮೆಯಾಗುವುದಕ್ಕೆ ಕಾರಣ ಬೇರೆ ಇದೆ. ಜಲಾನಯನ ಕಾರ್ಯಕ್ರಮಕ್ಕೆ ಶೇಕಡಾ. 90% ರಷ್ಟು ಅನುದಾನ ಕೇಂದ್ರ ಸರ್ಕಾರದಿಂದ ಬರುತ್ತದೆ. ನಮ್ಮ ರಾಜ್ಯ ಸರ್ಕಾರದ ಅನುದಾನ ಕೇವಲ ಶೇಕಡಾ 10% ರಷ್ಟು ಮಾತ್ರ. 2012-13ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಜಲಾನಯನ ಕಾರ್ಯಕ್ರಮಗಳಿಗೆ ಕರ್ನಾಟಕಕ್ಕೆ 334 ಕೋಟಿ ರೂಪಾಯಿ ಅನುದಾನ ಕೊಟ್ಟಿತ್ತು. 2013-14ನೇ ಸಾಲಿನಲ್ಲಿ 586 ಕೋಟಿ ರೂಪಾಯಿಗಳನ್ನು ನಮಗೆ ಕೊಟ್ಟಿತ್ತು. ಆದರೆ, 2014-15ನೇ ಸಾಲಿನಲ್ಲಿ ಕೇವಲ 125 ಕೋಟಿ ರೂಪಾಯಿಗಳನ್ನು ಮಾತ್ರ

ನಮಗೆ ಕೊಟ್ಟಿತ್ತು. 125 ಕೋಟಿ ರೂಪಾಯಿಗಳನ್ನು ನಮಗೆ ಬಿಡುಗಡೆ ಮಾಡಿದರು. ಆ ಕಾರಣದಿಂದ ಕಳೆದ ವರ್ಷದಲ್ಲಿ ನಾವು ಜಲಾನಯನ ಇಲಾಖೆಯಡಿಯಲ್ಲಿ ಸಮರ್ಪಕವಾಗಿ ಸಂಪೂರ್ಣವಾಗಿ ಕಾಮಗಾರಿಗಳನ್ನು ಪೂರ್ಣ ಮಾಡುವುದಕ್ಕೆ ನಮಗೆ ಆಗಲಿಲ್ಲ. ಈ ವರ್ಷವೂ ಸಹ ನಾವು ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಪತ್ರವನ್ನು ಬರೆದಿದ್ದೇವೆ. ಅದಾದ ನಂತರ ನಾನು ವೈಯಕ್ತಿಕವಾಗಿ ಹೋಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರನ್ನು ಭೇಟಿ ಸಹ ಮಾಡಿ 326 ಕೋಟಿ ರೂಪಾಯಿಗಳಷ್ಟು ಅನುದಾನ ಕೊಡಿ ಎಂದು ನಾವು ಕೇಳಿದ್ದೆವು. ನಮ್ಮ ಹಂಚಿಕೆ ಪ್ರಕಾರವಾಗಿ 326 ಕೋಟಿ ರೂಪಾಯಿಗಳನ್ನು ನೀವು ನಮಗೆ ಕೊಡಬೇಕೆಂದು ಕೇಳಿದದ್ದೆವು.

ಶ್ರೀ ಬಸವರಾಜ ರಾಯರೆಡ್ಡಿ:– What about DDP Programme?

ಶ್ರೀ ಕೃಷ್ಣ ಬೈರೇಗೌಡ:– ಇದರಲ್ಲಿ ಎಲ್ಲವೂ merge ಆಗಿದೆ. ಈಗ ಅವೆಲ್ಲವೂ cut ಆಗಿ ಹೋಯಿತು.

ಶ್ರೀ ಬಸವರಾಜ ರಾಯರೆಡ್ಡಿ:– ಈಗೇನು continue ಆಗಿದೆಯೇ? ಇಲ್ಲವೇ?

ಶ್ರೀ ಕೃಷ್ಣ ಬೈರೇಗೌಡ:– ಇಲ್ಲ, ಬಹಳ ಕಡಿಮೆ. ಇದರ ಬಗ್ಗೆ ಹೇಳುತ್ತೇನೆ. ಅಕ್ಟೋಬರ್‌ನಲ್ಲಿ ಪತ್ರ ಬರೆದಿದ್ದೆವು. ತದನಂತರ ನಾನು ಹೋಗಿ ಭೇಟಿ ಮಾಡಿದೆನು. 326 ಕೋಟಿ ರೂಪಾಯಿಗಳನ್ನು ಕೇಳಿದ್ದಕ್ಕೆ ಕೊನೆಗೆ ಮಾರ್ಚ್ ತಿಂಗಳಿನಲ್ಲಿ 40 ಕೋಟಿ ರೂಪಾಯಿಗಳನ್ನು ಕೊಟ್ಟರು. ಹೀಗಾಗಿ ಕೇಂದರ ಸರ್ಕಾರ ಸ್ವಲ್ಪ ಈ ಕಾರ್ಯಕ್ರಮಗಳಿಗೆ ಅನುದಾನವನ್ನು ಕಡಿತ ಮಾಡಿದ್ದರಿಂದ ನಾವು ಜಲಾನಯನ ಯೋಜನೆಯಲ್ಲಿ ಸಂಪೂರ್ಣವಾದಂಥ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷವೂ ಸಹ ಅದೇ ಪರಿಸ್ಥಿತಿ ಮುಂದುವರೆಯಬಹುದು ಎನ್ನುವಂಥ ಆತಂಕ ನಮಗೆ ಕಾಡುತ್ತಿದೆ. ಆದ್ದರಿಂದ ಕೇಂದ್ರ ಪುರಸ್ಕೃತ ಯೋಜನೆಗಳ ಬಗ್ಗೆ ನಾನು ನಂತರ ಮಾತನಾಡುತ್ತೇನೆ.

ಇನ್ನು ಅನೇಕ ಸದಸ್ಯರು ಕೃಷಿ ಭಾಗ್ಯ ಯೋಜನೆಯ ಬಗ್ಗೆ ಮಾತನಾಡಿದರು. ಹೋದ ವರ್ಷ ಈ ಯೋಜನೆಯನ್ನು ನಾವು ಆರಂಭ ಮಾಡಿದ್ದೆವು. ಬಹುಶಃ ರಾಜ್ಯದಲ್ಲಿ ಮೊದಲ ಬಾರಿಗೆ ಮಳೆಯಾಶ್ರಿತ ಬೇಸಾಯಕ್ಕೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಮೊದಲ ಬಾರಿಗೆ ರೂಪಿಸಿದೆ. ಇದು ಮುಖ್ಯಮಂತ್ರಿಗಳ ಚಿಂತನೆಯ ಹಿನ್ನೆಲೆಯಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ, ಅದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಅದರಲ್ಲಿಯೂ ಇನ್ನೂ ತೀವ್ರ ಸಂಕಷ್ಟದಲ್ಲಿರುವವರು ಯಾರಪ್ಪ ಎಂದರೆ ಕೇವಲ ಮಳೆಯನ್ನು ಅವಲಂಬಿಸಿಕೊಂಡು ವ್ಯವಸಾಯ ಮಾಡುವವರ ಪರಿಸ್ಥಿತಿ ಬಹಳ ಕಷ್ಟವಿದೆ. ಮಳೆ ಬಂದರೆ ಉಂಟು, ಇಲ್ಲ ಎಂದರೆ ಇಲ್ಲ. ಮಳೆ ಬಂದರೆ ನಾನು ಹಾಕಿದ ಶ್ರಮಕ್ಕೆ ಏನಾದರೂ ಸಿಗುತ್ತದೆ, ಮಳೆ ಬರಲಿಲ್ಲವೆಂದರೆ ನಾನು ಹಾಕಿದ ಶ್ರಮ, ಬಂಡವಾಳ, ಬಿತ್ತನೆ ಬೀಜ, ಗೊಬ್ಬರ ಎಲ್ಲವೂ ವ್ಯರ್ಥವಾಗಿ ಬಿಡುತ್ತದೆ. ಹಾಗಾಗಿ, ಇದಕ್ಕೆ ಪ್ರತ್ಯೇಕ ಕಾರ್ಯಕ್ರಮವನ್ನು ರೂಪಿಸಬೇಕೆಂದು ಕೃಷಿ ಭಾಗ್ಯ ಯೋಜನೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ನಿರೀಕ್ಷಿತ ಮಟ್ಟಕ್ಕೆ ಪ್ರಗತಿ ಆಗಿಲ್ಲ, ಅದನ್ನು ಸಹ ನಾನು ಒಪ್ಪಿಕೊಳ್ಳುತ್ತೇನೆ. ಏಕೆ ಆಗಲಿಲ್ಲ ಎನ್ನುವುದನ್ನು ಒಂದೆರಡು ಮಾತಿನಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ರೈತರು ತಮ್ಮ ಜಮೀನಿನಲ್ಲಿ ತಾವೇ ಅಳವಡಿಸಿಕೊಳ್ಳಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಕೃಷಿಭಾಗ್ಯ ಯೋಜನೆಯನ್ನು ತಂದಿರುವುದು. ನಾವು ಯೋಜನೆ ಘೋಷಣೆ ಮಾಡಿದಾಗ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದವು. ನಾನು ಕೆಲವು ಕಡೆ ರೈತರು ಮಾತನಾಡುವಾಗ ಮತ್ತು ಬೇರೆ ಅಧಿಕಾರಿಗಳ ಮಾಹಿತಿ ಮತ್ತು ನನ್ನ ಸ್ನೇಹಿತರು ಹಾಗೂ ಇಲ್ಲಿ ಶಾಸಕರು ಕೊಟ್ಟಿರುವ ಮಾಹಿತಿ ಎಂದರೆ ಏನೋ ಅವರ account ಗೆ ಒಂದು ಲಕ್ಷ ಅಥವಾ ಒಂದೂವರೆ ಲಕ್ಷ ರೂಪಾಯಿಗಳ ಸಹಾಯಧನವನ್ನು ಹಾಕಿಬಿಡುತ್ತೀರಿ, ಅದಕ್ಕೆ ಅರ್ಜಿ ಹಾಕಿದವರು ಸುಮಾರು ಜನ ಇದ್ದರು ಎನ್ನುವಂಥ ಮಾಹಿತಿಯನ್ನು ಸಹ ಅನೇಕ ಜನ ಶಾಸಕರು ನನಗೆ ಹೇಳಿದರು. ಆದರೆ, ನಾವು ಆ ಯೋಜನೆ ಯಶಸ್ವಿಯಾಗಬೇಕೆಂದರೆ ಆ ರೀತಿ ಮಾಡಿದರೆ ಆಗುವುದಿಲ್ಲ. ಆರಂಭದಲ್ಲಿ ಲಾಟರಿ ಎತ್ತಿದೆವು, ಅದು ನಿಜ. ಆದರೆ ಅವತ್ತು ಅಷ್ಟು ಅರ್ಜಿಗಳು ನಮಗೆ

ಇದ್ದವು. ಆ ಅರ್ಜಿಗಳನ್ನು ಇತ್ಯರ್ಥ ಪಡಿಸುವಂತಹ ಬೇರೆ ಮಾರ್ಗ ಇರಲಿಲ್ಲ. ಅದಕ್ಕಾಗಿ ನಾವು ಲಾಟರಿ ಎತ್ತಿದೆವು. ಅದಾದ ಮೇಲೆ ರೈತರೇ ಇದನ್ನು ಅಳವಡಿಸಿಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶ ಆಗಿತ್ತು ಆದರೆ, ಯಾರು ಆಯ್ಕೆಯಾದರು? ಅದರಲ್ಲಿ ಅನೇಕ ಜನ ನಮ್ಮ ಮಾನದಂಡಗಳನ್ನು ನೋಡಿದಾಗ ಅವರಾಗಿ ಅವರು ಹಿಂದಕ್ಕೆ ಸರಿದು ಬಿಟ್ಟರು. ಅಳವಡಿಸಿಕೊಳ್ಳುವುದಕ್ಕೆ ಮುಂದೆ ಬರಲಿಲ್ಲ. ಹಾಗಾಗಿ ಸ್ವಲ್ಪ ತಡವಾಯಿತು. ಈ ವಿಚಾರದಲ್ಲಿ ನಾನು ಮಾನ್ಯ ಸವದಿಯವರ ಗಮನಕ್ಕೂ ತರುವುದೇನೆಂದರೆ ನಾವು ಬರೀ ಆ plastic lining ಮಾಡುವ ಕೆಲಸಕ್ಕೆ ಮಾತ್ರ ಟೆಂಡರ್ ಕರೆದಿದ್ದೇವೆ. ಬೇರೆ ಎಲ್ಲಾ ಘಟಕಗಳು ಸಹ ಹೊಂಡ ಮಾಡಿಕೊಳ್ಳುವುದಾಗಲಿ, ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಾಗಲಿ ಇವೆಲ್ಲವೂ ಸಹ ರೈತರ ಇಚ್ಛೆಗೆ ಬಿಟ್ಟಿದ್ದೇವೆ. Plastic lining ಮಾತ್ರ ಅದು ಸ್ವಲ್ಪ ತಾಂತ್ರಿಕ ಕೆಲಸವೆಂದು ಹೇಳಿ ಟೆಂಡರ್ ಕರೆದು ಅದರ ಮುಖಾಂತರ ಮಾಡಿದ್ದೇವೆ. ಈಗ ಇನ್ನೂ ಕೆಲವರಲ್ಲಿ ಅದರಲ್ಲಿ ಸೇರಿಸುವುದಕ್ಕೆ ಮತ್ತೊಂದು ಎರಡನೇ ಸುತ್ತಿಗೆ ಟೆಂಡರ್ ಕರೆಯುತ್ತಿದ್ದೇವೆ. ಅದರಲ್ಲಿ ಇನ್ನೂ ಹೆಚ್ಚಿನ ಜನ ನಮಗೆ ಬೇಕಾಗಿದೆ. ಏಕೆಂದರೆ, ಇರುವಂಥ 4 ಜನ ನಮಗೆ ಕೆಲಸ ಮಾಡುವುದಕ್ಕೆ ಸಾಕಾಗುತ್ತಿಲ್ಲ. ಇನ್ನೂ ಹೆಚ್ಚಿನ ಜನ ಬಂದರೆ ಅವರಿಗೆ ಇನ್ನೂ ಹೆಚ್ಚಿನ ಜನಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆ. ಅದಾದ ಮೇಲೆ ಲಾಟರಿ ಬದಲಿಗೆ ಈಗ ಬದಲಾವಣೆಯನ್ನು ತಂದು ಏನು ಮಾಡಿದ್ದೇವೆಂದರೆ ಯಾವ ರೈತರು ಈ ಕೃಷಿ ಭಾಗ್ಯ ಯೋಜನೆಯನ್ನು ಮಾಡಿಕೊಳ್ಳುತ್ತೇವೆಂದು ಮುಂದೆ ಬರುತ್ತಾರೆ, ಅವರಿಗೆ work order ಕೊಡುವ ರೀತಿ ಬದಲಾವಣೆಯನ್ನು ತಂದಿದ್ದೇವೆ. ಯಾರಿಗೆ ಆಸಕ್ತಿಯಿದೆ, ಅವರಿಗೆ ನಾವು ಉತ್ತೇಜನವನ್ನು ಕೊಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಸಚಿವರೆ, ನೀವು ಹೇಳುತ್ತಿರುವುದು ಸರಿ. ಆದರೆ ನಮಗೆ ಅನ್ಯಾಯವಾಗುತ್ತದೆ. ತಾವು ಸ್ವಲ್ಪ ನಾನು ಹೇಳುವುದನ್ನು ಸಮಾಧಾನವಾಗಿ ಕೇಳಿದರೆ ಹೇಳುತ್ತೇನೆ. ನಾವು ಮಳೆಯನ್ನೇ ಕಂಡಿಲ್ಲ. ನಮ್ಮಲ್ಲಿ ಹೊಂಡ ತುಂಬುವಂಥ ಪರಿಸ್ಥಿತಿಯಲ್ಲಿ

ನಾವು ಇಲ್ಲ. ನಮಗೆ ಎಷ್ಟು ಇಂಚು ಮಳೆಯಾಗುತ್ತದೆಯೆನ್ನುವುದನ್ನು ತಿಳಿದುಕೊಳ್ಳಿ. ಈಗ ನಿಮ್ಮ concept ಪ್ರಕಾರ ಮಳೆ ಆಶ್ರಿತವಾದಂಥ ಭೂಮಿಗೆ ಏನಾದರೂ ಅಪ್ಪಿ ತಪ್ಪಿ ಮಳೆ ಹೋದಂಥ ಕಾಲದಲ್ಲಿ ಆ ನೀರನ್ನು ಶೇಖರಣೆ ಮಾಡಿ, sprinkler set ನಲ್ಲಿ ಹೊಡೆದು ಬೆಳೆಯನ್ನು ಹಾಳಾಗದ ರೀತಿಯಲ್ಲಿ ಕಾಪಾಡಬೇಕೆನ್ನುವುದು ನಿಮ್ಮ ಮೂಲ ಉದ್ದೇಶ. ಆದರೆ, ನಮಗೆ ಮಳೆಯೇ ಬರುವುದಿಲ್ಲ. ಹೊಂಡವೇ ತುಂಬುವುದಿಲ್ಲ. ಈ ಯೋಜನೆಯಲ್ಲಿ ಒಂದು technical problem ಏನಿದೆ, ಈ ಬಗ್ಗೆ ನಿಮ್ಮ ವಿಜ್ಞಾನಿಗಳಿಗೆ ಹೇಳಿ, ಆ ಹೊಂಡ ತುಂಬಿದಾಗ, ಆ ಹೊಂಡದಲ್ಲಿರುವ ನೀರು ಮೇಲಕ್ಕೆ ಆವಿಯಾಗಿ ಹೋಗುವುದಕ್ಕೆ net ಹಾಕಿ cover ಮಾಡುತ್ತೇವೆಂದು ನೀವು ನಮ್ಮ ಬಳಿ ಬಂದಾಗ ಹೇಳಿದ್ದೀರಿ. ನೀರು ಹೊಂಡದಲ್ಲಿ ತುಂಬಿದರೆ ಆವಿಯಾಗಿಯೂ ಹೋಗುತ್ತದೆ. ಎರಡನೆಯದಾಗಿ, ಅಲ್ಲಿರುವಂಥ ನೀರು ಎಷ್ಟು ಪ್ರಾಂತ್ಯಕ್ಕೆ sprinkler set ನಲ್ಲಿ ಹೊಡೆದು ಆ ಬೆಳೆಯನ್ನು ನಾವು ಉಳಿಸಿಕೊಳ್ಳಬಹುದು ಎನ್ನುವುದು ಮೂಲಭೂತವಾದ ಉದ್ದೇಶ. ಅಲ್ಲಿ ಆ ರೀತಿ ಆಗುವುದಿಲ್ಲ. Pump set ನಲ್ಲಿ ಹೊಡೆದರೆ ಅರ್ಧ ಗಂಟೆಯಲ್ಲಿ ನೀರು ಖಾಲಿಯಾಗುತ್ತದೆ. ಯಾವ ಬೆಳೆಗೆ ನೀರು ಹೊಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆ ಎಲ್ಲಿ ಸತತವಾಗಿ ಮಳೆ ಬಂದು ಹೊಂಡಗಳಿಗೆ ನೀರು ತುಂಬುತ್ತದೆಯೋ ಅಲ್ಲಿ ಈ ಯೋಜನೆ success ಆಗುತ್ತದೆ. ನಮ್ಮ ಮಳೆಯನ್ನೇ ಆಶ್ರಯಿಸಿಕೊಂಡು, ಮಳೆಯೇ ಬರದೇ ಇರುವಂಥ ಕೋಲಾರ, ಅರಸೀಕೆರೆಯಲ್ಲಿ ಆಗುವುದಿಲ್ಲ. ಅದೇ ಹಾಸನದಲ್ಲಿ, ಬೇಲೂರಿನಲ್ಲಿ ಮಾಡಿ ಈ ಯೋಜನೆ success ಆಗುತ್ತದೆ. ನಮ್ಮ ಅರಸೀಕೆರೆಯಲ್ಲಿ ನಾವು ಮಳೆಯನ್ನೇ ಕಾಣುವುದಿಲ್ಲ. ನೀವು ನಮಗೆ ತೆಗೆದುಕೊಂಡು ಬಂದು ಆ scheme ಕೊಟ್ಟರೆ ನಮ್ಮ ಜನ ಹೇಗೆ ಮಾಡಿಕೊಳ್ಳುತ್ತಾರೆ? ಆದ್ದರಿಂದ ನನಗೆ ಬೇರೆ scheme ನ್ನು ಕೊಡಿ. ಇದನ್ನು ತೆಗೆದು ಹಾಕಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಆ ಕೆರೆ size ಹೆಚ್ಚು ಮಾಡಿ.

ಶ್ರೀ ಲಕ್ಷ್ಮಣ್ ಎಸ್. ಸವದಿ:- ಶಿವಲಿಂಗೇಗೌಡರೆ, ಮಾನ್ಯ ಕೃಷಿ ಸಚಿವರು ಈ ಕೃಷಿ ಭಾಗ್ಯದಲ್ಲಿರುವಂಥ ಕೃಷಿ ಹೊಂಡದ ಯೋಜನೆ ಬಗ್ಗೆ

ಸವಿಸ್ತಾರವಾಗಿ ನಮ್ಮ ಸದನಕ್ಕೆ ಹೇಳುತ್ತಿದ್ದಾರೆ. ನಾನು ಕೇಳಿರುವುದೇನೆಂದರೆ, ಇಡೀ ರಾಜ್ಯದಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡುವುದಕ್ಕೆ ಆ ರೈತರ account ಗಳಿಗೆ ಏನು ಹಣವನ್ನು ಕಳುಹಿಸಿಕೊಟ್ಟಿದ್ದಾರೆ, ಅಲ್ಲಿ ಪಾರದರ್ಶಕವಾಗಿ ಆಗಿದೆ ಎನ್ನುವುದನ್ನು ಸಹ ನಾನು ಒಪ್ಪುತ್ತೇನೆ. ಅದರಲ್ಲಿರುವಂಥ ನಮ್ಮ ಮೂಲಭೂತ ಪ್ರಶ್ನೆ ಬಗ್ಗೆ ಅವರು ಅರ್ಥ ಮಾಡಿಕೊಳ್ಳಬೇಕು. ಇಡೀ ರಾಜ್ಯದಲ್ಲಿ ಕೃಷಿ ಹೊಂಡಕ್ಕೆ plastic ಅನ್ನು ಸರಬರಾಜು ಮಾಡುವಂಥ ನಾಲ್ಕು ಜನ ಗುತ್ತಿಗೆದಾರರೇನಿದ್ದಾರೆ, ಆ ಗುತ್ತಿಗೆದಾರ ಕೊಟ್ಟಿರುವಂಥ ಬೆಲೆ, ಆ rate ಮಾರುಕಟ್ಟೆಯಲ್ಲಿ ತೆಗೆದುಕೊಳ್ಳುವುದಕ್ಕೆ ಹೋದರೆ ಶೇಕಡಾ 50% ರಷ್ಟು ಕಡಿಮೆಯಿದೆ. ಅದಕ್ಕೆ ನಾನು ಹೇಳುತ್ತಿರುವುದೇನೆಂದರೆ, ನಿಮ್ಮ ಮಾನದಂಡವನ್ನು ರೈತರಿಗೆ ಹಾಕಿ. ಇಂಥ dip ಆಗಿರುವಂಥದ್ದು, ಇಂಥ quality, thickness ಆಗಿ ಇರುವಂಥದ್ದನ್ನು ನೇರವಾಗಿ ರೈತರಿಗೆ ಕೊಡುವುದಕ್ಕೆ ನೀವು ವ್ಯವಸ್ಥೆ ಮಾಡಿದರೆ ಆ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ. ಆ ದುಡ್ಡು ಸರ್ಕಾರಕ್ಕೂ ಉಳಿಯುತ್ತದೆ. ಆ 4 ಜನ distributor ಗಳು double rate ಹಾಕಿದ್ದಾರೆ. ಇಡೀ ರಾಜ್ಯದಲ್ಲಿ ನಾಲ್ಕೇ ಜನ supply ಮಾಡುವುದು. ಬೆಳಗಾವಿ ವಿಭಾಗಕ್ಕೆ ಒಬ್ಬರು, ಬೆಂಗಳೂರು ಭಾಗಕ್ಕೆ ಒಬ್ಬರು. ಗುಲ್ಬರ್ಗಾ ಭಾಗಕ್ಕೆ ಒಬ್ಬರು. ಹೀಗೆ 4 division ಗಳಲ್ಲಿ 4 ಜನ ಇದರ tender ಹಾಕಿಕೊಂಡು ತೆಗೆದುಕೊಂಡಿದ್ದಾರೆ. ನಾನು ಆ ಗುತ್ತಿಗೆದಾರರ ಪರವಾಗಿ ಎಂದಲ್ಲ. ಇನ್ನೊಬ್ಬರು ಬರಲಿ, ಇನ್ನಷ್ಟು ಜನ ಹೆಚ್ಚು ಮಾಡಿ ಎಂದಲ್ಲ. ಒಟ್ಟಾರೆ ಗುತ್ತಿಗೆದಾರರು ಇರಬಾರದೆಂದು ನಮ್ಮ ಅಭಿಪ್ರಾಯ. ನೇರವಾಗಿ ರೈತರಿಗೆ ನೀವೇನು ಹಣ ಕಳುಹಿಸುತ್ತೀರಿ, ಆ ಖರೀದಿ ಮಾಡುವ ಹಕ್ಕನ್ನು ರೈತರಿಗೆ ಕೊಡಿ. ಬೇಕಾದರೆ ನಿಮ್ಮ ಮಾನದಂಡ fix ಮಾಡಿ. ಯಾವ ತರಹ ಆ plastic ಇರಬೇಕೆನ್ನುವುದಕ್ಕೆ ನೀವು ನಿಬಂಧನೆ ಹಾಕಿ. ಆದರೆ, ಮಧ್ಯವರ್ತಿಗಳನ್ನು ತೆಗೆದು ಹಾಕಿ ಎಂದು ನಮ್ಮ ಅಭಿಪ್ರಾಯ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಚಾರ ಮಾಡುತ್ತೇವೆ. ಇದು ಕೆಲವು ತಾಲ್ಲೂಕುಗಳಲ್ಲಿ ನಿಜವಾಗಿಯೂ

ಅನುಕೂಲವಾಗುತ್ತದೆಯೆ ಎಂಬ ಪ್ರಶ್ನೆ ಇದೆ. ನಮ್ಮ ಮನಸ್ಸಿನಲ್ಲಿಯೂ ಇದೆ. ಇಲ್ಲವೆಂದಲ್ಲ. ತೀವ್ರ ಬರಕ್ಕೆ ತುತ್ತಾಗಿರುವ ತಾಲ್ಲೂಕುಗಳಲ್ಲಿ ಎಷ್ಟರಮಟ್ಟಿಗೆ ಇದು ಪ್ರಯೋಜನವಾಗಬಹುದೆಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿಯೂ ಇದೆ. ಈ ವರ್ಷ ಪ್ರಾಯೋಗಿಕವಾಗಿ ಮೊದಲನೇ ವರ್ಷ. ಎಷ್ಟರಮಟ್ಟಿಗೆ ಆಗುತ್ತದೆ, ಇಲ್ಲ ಎಂದು ನೋಡೋಣ. ಅದಕ್ಕಾಗಿ ನಾವು ವಿಶ್ವವಿದ್ಯಾಲಯಗಳಿಂದ ಅಧ್ಯಯನ ಮಾಡಲಿಕ್ಕೂ ಸಹ ಹೇಳಿದ್ದೇವೆ. ಅದನ್ನು ನೋಡಿಕೊಂಡು ಅದರ ಆಧಾರದ ಮೇಲೆ ಮುಂದಿನ ವರ್ಷದಿಂದ ನಾವು ಮಾರ್ಪಾಟು ಮಾಡಬಹುದು ಹಾಗೂ ಈ ಅತೀ ಬರಪೀಡಿತ ತಾಲ್ಲೂಕುಗಳನ್ನಾಗಿ 23 ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದೇವೆ. ಯಾವುವು ಕಳೆದ 5 ವರ್ಷಗಳಿಂದ ಸತತವಾಗಿ ಬರಕ್ಕೆ ತುತ್ತಾಗಿವೆ, ಅಂತಹ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡು ಈ ವರ್ಷದಿಂದ ಆ ತಾಲ್ಲೂಕುಗಳಿಗೆ ವಿಶೇಷವಾದ ಕೃಷಿ ಭಾಗ್ಯ ಯೋಜನೆಯನ್ನು ನಾವು ರಚನೆ ಮಾಡುತ್ತಿದ್ದು, ಈಗಾಗಲೇ ಅದಕ್ಕೆ ಕೆಲವು ರೂಪರೇಷೆಗಳನ್ನು ತಯಾರು ಮಾಡಿದ್ದು, ಅದಕ್ಕೆ ಒಂದು ದಿನದ ಕಾರ್ಯಾಗಾರವನ್ನು ಮಾಡಿ ಇನ್ನೂ ಅನೇಕ ತಾಂತ್ರಿಕ ಪರಿಣಿತರನ್ನು ಕರೆಸಿ ಅವರ ಮಾಹಿತಿ ತೆಗೆದುಕೊಂಡು 23 ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ಇದರೊಳಗೆ ಇನ್ನೂ ಏನು ಮಾಡಲು ಸಾಧ್ಯ ಎನ್ನುವುದನ್ನು ಸಹ ನಾವು ವಿಚಾರ ಮಾಡುತ್ತಿದ್ದೇವೆ. ಈ ತಾಲ್ಲೂಕುಗಳಲ್ಲಿ . .

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ನಂಜುಂಡಪ್ಪ ವರದಿ. . .

ಶ್ರೀ ಕೃಷ್ಣ ಬೈರೇಗೌಡ:- ಇಲ್ಲ, ಇಲ್ಲ. ಇದು only ತೀವ್ರ ಬರಪೀಡಿತ ತಾಲ್ಲೂಕುಗಳಿಗೆ ಮಾಡುತ್ತಿರುವುದು. ಕೃಷಿ ಭಾಗ್ಯ ಯೋಜನೆ ಎಲ್ಲಿ ಅನುಕೂಲವಾಗುವುದಿಲ್ಲ, ಅಂತಹವರಿಗೆ ಪರ್ಯಾಯವಾಗಿ ಬೇರೆ ಯೋಜನೆಯನ್ನು ಮಾಡುತ್ತಿದ್ದೇವೆ. ಇದರಲ್ಲಿ ತೋಟಗಾರಿಕಾ ಇಲಾಖೆಯ ಕಡೆಯಿಂದ ನಾವು ಸಂರಕ್ಷಿತ ಬೆಳೆ ಬೆಳೆಯುವಂತಹದು. ಅಂದರೆ protective cultivation, poly house, green house ನಲ್ಲಿ ಬೆಳೆಯುತ್ತಾರಲ್ಲ, ಅದಕ್ಕೂ ಸಹ ತೋಟಗಾರಿಕಾ ಇಲಾಖೆಯ ಮುಖಾಂತರ ಕೃಷಿ ಯೋಜನೆಯಲ್ಲಿ ಅದನ್ನೂ ಸಹ ಮಾಡುತ್ತಿದ್ದೇವೆ. ಅಂದರೆ ಮುಂದೆ

ಹೋಗುತ್ತಾ, ಹೋಗುತ್ತಾ ಅದರಲ್ಲಿ ಶೇಕಡಾ 70 ರಷ್ಟು ನೀರು ಉಳಿತಾಯವಾಗುತ್ತದೆ. ಹಣ್ಣು ತರಕಾರಿಯನ್ನು ಈ poly house ನಲ್ಲಿ ಬೆಳೆದರೆ ಶೇಕಡಾ 70 ರಷ್ಟು ನೀರು ಉಳಿತಾಯವಾಗುತ್ತದೆ. ಕಡಿಮೆ ನೀರಿನಿಂದ ಬೆಳೆ ಬೆಳೆಯಬಹುದು. ಒಂದು ಎಕರೆಯವರೆಗೆ 50 ರಷ್ಟು ಸಹಾಯಧನದಲ್ಲಿ poly house, green house ಮಾಡುವುದಕ್ಕೆ ತೋಟಗಾರಿಕೆ ಇಲಾಖೆಯಿಂದಲೂ ಸಹ ಸುಮಾರು ಈ ಬಾರಿ poly house ಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಕೆಲವು ಕಡೆ ಬ್ಯಾಂಕ್‌ಗಳಿಂದ ಸಾಲ ಸಿಗದ ಕಾರಣ ನಿಧಾನವಾಗಿದೆ. ಆ ಸಮಸ್ಯೆಗಳನ್ನು ಸಹ ಪರಿಹಾರ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಾರೆ ಮಳೆ ಆಶ್ರಿತ ಒಣ ಬೇಸಾಯಕ್ಕೆ ಹೆಚ್ಚಿಗೆ ಗಮನ ಕೊಡಬೇಕೆಂಬುದು ನಮ್ಮ ಸರ್ಕಾರದ ಆದ್ಯತೆ. ಅದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ಒಣ ಬೇಸಾಯದ ಬಗ್ಗೆ ವಿಶೇಷ ಸಂಸ್ಥೆ ಇರಬೇಕೆಂದು Dry Land Agriculture Research Institute ಅನ್ನು ಸ್ಥಾಪನೆ ಮಾಡಬೇಕೆಂದು ಪ್ರಸ್ತಾಪಿಸಿದ್ದು ತಾವುಗಳೆಲ್ಲಾ ಬೇಡಿಕೆಗಳಿಗೆ ಮಂಜೂರಾತಿ ಕೊಟ್ಟರೆ ಈ ವರ್ಷ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗುತ್ತದೆ, ಏಕೆಂದರೆ ದೇಶದಲ್ಲಿ ಎರಡನೇ ಅತಿ ದೊಡ್ಡ ಒಣ ಬೇಸಾಯ ರಾಜ್ಯ ಕರ್ನಾಟಕ. ಬಹುಶಃ ಇನ್ನೂ ಹೊಸ ಮಾಹಿತಿ ಬಂದರೆ ರಾಜಸ್ಥಾನದಲ್ಲಿ ನರ್ಮದಾದಿಂದ ಒಂದು ನಾಲೆ ನಿರ್ಮಾಣವಾಗಿದೆ. ಅದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಕರ್ನಾಟಕ ದೇಶದಲ್ಲಿಯೇ ಅತಿ ದೊಡ್ಡ ಒಣ ಬೇಸಾಯ ರಾಜ್ಯ ಆದರೂ ಆಗಬಹುದು. ಇನ್ನೂ ಅದರ ಮಾಹಿತಿ ಸಿಕ್ಕಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:- ರಾಜಸ್ಥಾನ್ ನಮಗಿಂತ ಈಗಾಗಲೇ ಅವರಿಗೆ ಭೌಗೋಳಿಕ ಪ್ರದೇಶ ಜಾಸ್ತಿ ಇದೆ, ಒಣ ಪ್ರದೇಶದಿಂದ ಅವರು continue ಆಗಿ ಉಳಿಯುತ್ತಾರೆ, we will be second.

ಶ್ರೀ ಕೃಷ್ಣ ಬೈರೇಗೌಡ:- But ಅಲ್ಲಿ ಈಗ ನರ್ಮದಾ ಒಂದು ನಾಲೆ ಬಂದಿರುವುದರಿಂದ ಅವರಿಗೂ ನೀರಾವರಿ ಪ್ರದೇಶ ಜಾಸ್ತಿಯಾಗಿದೆ. ಆದರೆ ಅಲ್ಲಿ ಮರಳು ಭೂಮಿ ಜಾಸ್ತಿ ಇದೆ. ಆದರೂ ನಮಗೆ ಇದು ಆದ್ಯತಾ ವಲಯ. ಒಣ ಬೇಸಾಯದಲ್ಲಿ ಸುಧಾರಣೆ ಮಾಡಬೇಕು, ಒಣ ಬೇಸಾಯ

ಮಾಡುವ ರೈತರಿಗೆ ಅವರ ಸ್ವಂತ ಕಾಲ ಮೇಲೆ ನಿಲ್ಲುವ ಆಲೋಚನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಬೇಕೆನ್ನುವುದು ನಮಗೆ ಬಹಳ ಆದ್ಯತಾ ವಲಯವಾಗಿದೆ. ಆ ದಿಕ್ಕಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ಮಾಡುತ್ತೇವೆಂದು ಹೇಳಲು ಬಯಸುತ್ತೇನೆ. ಇನ್ನು ಬಹಳ ಪ್ರಮುಖವಾದ ವಿಚಾರ. ಸಾಕಷ್ಟು ಸದಸ್ಯರು ಬೇಡಿಕೆಗಳ ಮೇಲೆ ಮಾತನಾಡುವಾಗಷ್ಟೇ ಅಲ್ಲ, ಅನೇಕ ಸಂದರ್ಭಗಳಲ್ಲಿ ಮಾತನಾಡಿರುವ ವಿಚಾರ ಕೃಷಿ ಬೆಲೆ ಆಯೋಗದ ಬಗ್ಗೆ, ನಾನಾ ರೀತಿಯ ಟೀಕೆ-ಟಿಪ್ಪಣಿಗಳು ಸರ್ಕಾರದ ಉದ್ದೇಶದ ಬಗ್ಗೆ ಪ್ರಶ್ನೆಗಳು, ಇವೆಲ್ಲವೂ ಸಹ ನಾನೂ ಗಮನಿಸಿದ್ದೇನೆ. ಕೃಷಿ ಬೆಲೆ ಆಯೋಗವನ್ನು ಮಾಡುವ ಅವಶ್ಯಕತೆ ನಮಗೇನೂ ಇರಲಿಲ್ಲ. ಆದರೆ, ಅದರ ಬಗ್ಗೆ ಏನಾದರೂ ನಾವು ಅರ್ಥಪೂರ್ಣವಾದ ಕೆಲಸ ಮಾಡಬೇಕೆನ್ನುವ ಬದ್ಧತೆ ಇರುವುದರಿಂದ ಕೃಷಿ ಬೆಲೆ ಆಯೋಗವನ್ನು ಮಾಡುವ ಕೆಲಸಕ್ಕೆ ಕೈ ಹಾಕಿದ್ದೇವೆ. ಅದನ್ನು ನಿರ್ಲಕ್ಷ್ಯ ಮಾಡಬೇಕು, ಅದಕ್ಕೆ ಸರಿಯಾಗಿ ಮಾನ್ಯತೆ ಕೊಡಬಾರದು. ಹೀಗೆಲ್ಲಾ ನಮ್ಮ ಉದ್ದೇಶ ಇದ್ದಿದ್ದರೆ ಅದನ್ನು ಮಾಡುವುದಾದರೂ ಏಕೆ ಬೇಕಾಗಿತ್ತು?

ಶ್ರೀ ಡಿ.ಎನ್. ಜೀವರಾಜ್:- ಒಂದೇ ಒಂದು. ನೀವು ಕೃಷಿ ಬೆಲೆ ಆಯೋಗವನ್ನೇನೋ ನೇಮಕ ಮಾಡಿದಿರಿ. ಆದರೆ, ಈಗ palm ಗೆ ಎಣ್ಣೆ ಕಾಳು ಬೇಕೆಂದು ಹೇಳಿ ಹೆಚ್ಚು scope ಕೊಟ್ಟು palm ಗಿಡವನ್ನು ಹಾಕಿಸಿದಿರಿ. ಅಲ್ಲಿರುವ palm ಬೆಳೆದ ರೈತರಿಗೆ payment ಆಗದೆ ಎಷ್ಟು ದಿನವಾಗಿದೆ ಎಂದು ತಾವು ಸ್ವಲ್ಪ ಗಮನ ಹರಿಸಬೇಕು. ಈ ಕಡೆ ಬೆಲೆ ಆಯೋಗ ಮಾಡುವುದು ಸುಲಭ. ಆದರೆ ಆಯೋಗದ ಜೊತೆಯಲ್ಲಿ payment ಮಾಡಬೇಕಲ್ಲ? Payment ಮಾಡದಿದ್ದರೆ ಆ ರೈತರು ತಡೆದುಕೊಳ್ಳುವುದು ಹೇಗೆ? ನಮಗೆ ಕೃಷ್ಣ ಬೈರೇಗೌಡರ ಬಗ್ಗೆ ವಿಶೇಷ ಪ್ರೀತಿ ಎಂದರೆ ಅವರು ಎರಡು ತಲೆಮಾರಿನ ಕೃಷಿ ಸಚಿವರು. ಅವರ ತಂದೆಯೂ ಕೃಷಿ ಸಚಿವರು, ಮಗ ಕೃಷಿ ಸಚಿವರು. ಹಾಗಾಗಿ ರಕ್ತದಲ್ಲಿ ಅನುಭವದ ಜೊತೆಗೆ ಮಾಡಬೇಕೆನ್ನುವ ಉಮೇದು ಕೂಡಾ ಉಂಟು. ಗೌಡರೇನೋ

ಮಾಡಿಕೊಡುತ್ತಾರೆಂದು ನಿಮ್ಮ ಬಗ್ಗೆ ನಮಗೆಲ್ಲಾ ಭಾರಿ ಖುಷಿ ಇಲ್ಲಿ. ಹಾಗಾಗಿ payment ಮಾಡಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ಅವರು ಬೈರೇಗೌಡರು ಹಿಂದೆ ಕೃಷಿ ಸಚಿವರು ಇದ್ದರು. ಈಗ ಕೃಷ್ಣ ಬೈರೇಗೌಡರು ಕೃಷಿ ಸಚಿವರಾಗಿದ್ದಾರೆ. ಬೈರೇಗೌಡರು ಹೊಲದಲ್ಲಿ ದುಡಿಮೆ ಮಾಡಿ ಸ್ವತಃ ರೈತರಾಗಿ ಕೃಷಿ ಸಚಿವರಾಗಿದ್ದರು. ಇವರು ಅಮೇರಿಕಾದಲ್ಲಿ ಶಾಲೆ ಕಲಿತು ಬಂದು ಕೃಷಿ ಸಚಿವರಾಗಿದ್ದಾರೆ. ಅವರಿಗೆ, ಇವರಿಗೆ ಏಕೆ ತಗುಲಿ ಹಾಕುತ್ತಿದ್ದೀರಿ?

ಶ್ರೀ ಡಿ.ಎನ್. ಜೀವರಾಜ್:– ರಕ್ತದಲ್ಲಿದೆ ಎಂದು ಆಗಲೇ ಹೇಳಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಸವದಿ ಮಾತನಾಡುವುದು ತಪ್ಪು. ಅವರು ಅಮೇರಿಕಾದಲ್ಲಿ ಓದಿದರೂ ಕೂಡಾ ಅವರ ಕ್ರಿಯಾಶೀಲತೆ, ಮಾಡುವ ಕೆಲಸವನ್ನು ಮೆಚ್ಚಬೇಕು. ಸುಮ್ಮನೆ ಆರೋಪ ಮಾಡುವ ಕೆಲಸ ಮಾಡಬಾರದು.

ಶ್ರೀ ಡಿ.ಎನ್. ಜೀವರಾಜ್:– ನಾವು ಆರೋಪ ಮಾಡಿಲ್ಲ, ಅವರೂ ಆರೋಪ ಮಾಡಿಲ್ಲ. ಇವರಿಗೆ ಆ ಅನುಭವವೂ ಸೇರಿ ರಕ್ತದಲ್ಲಿದೆ ಎಂದು ಹೇಳುತ್ತಿರುವುದು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಇಷ್ಟು effective ಆಗಿ ಕೆಲಸ ಮಾಡುತ್ತಿದ್ದರೆ ತಪ್ಪಾ? ನೀವೂ ಅಧಿಕಾರದಲ್ಲಿದ್ದಿರಿ, ನೀವೆಲ್ಲಾ ಮಾಡಿದಿರಾ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಏನು ಹೇಳುತ್ತಿದ್ದೇನೆ. ಬೈರೇಗೌಡರು ಏನಿದರಲ್ಲ, ಆ ಸ್ಥಿತಿಗೆ ಇವರು ಬರಲು ಸಾಧ್ಯವಿಲ್ಲ. ಬೈರೇಗೌಡರ ಸ್ಥಾನಕ್ಕೆ ಬರಲು ಸಾಧ್ಯವಿಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಅದನ್ನು ಒಪ್ಪುತ್ತೇವೆ. (ಗೊಂದಲ). . ಅವರ ಸ್ಥಾನಕ್ಕೆ ಇವರು ಬರಲು ಹೇಗೆ ಸಾಧ್ಯವಿದೆ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಬೈರೇಗೌಡರು ಅಧಿಕಾರಿಗಳನ್ನು control ನಲ್ಲಿ ಇಟ್ಟಿದ್ದರು. ನೀವು ಅಧಿಕಾರಿಗಳಿಗೆ ಸ್ವಲ್ಪ ಮುಲಾಜು ತೋರಿಸುತ್ತಿದ್ದೀರಿ. ಬೈರೇಗೌಡರಿಗೂ, ನಿಮಗೂ ಇರುವ ವ್ಯತ್ಯಾಸ ಅಷ್ಟೆ. ಅವರು ಅಧಿಕಾರಿಗಳಿಗೆ ಚಾವಟಿಯಲ್ಲಿ ಹೊಡೆಯುತ್ತಿದ್ದರು. ನೀವು ಸ್ವಲ್ಪ ಬಹಳ ಮುಲಾಜು ತೋರಿಸುತ್ತಿದ್ದೀರಿ ಅಷ್ಟೇ. ಇಷ್ಟೇ ವ್ಯತ್ಯಾಸ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ನಿಮ್ಮ ಅಭಿಪ್ರಾಯ ನಾನು ಒಪ್ಪುತ್ತೇನೆ. (ಗೊಂದಲ) ಇವರು ಹೋಗಲಿಕ್ಕೆ ಆಗುವುದಿಲ್ಲ ಎಂಬ ನಿಮ್ಮ ಅಭಿಪ್ರಾಯವನ್ನು ನಾನೂ ಒಪ್ಪುತ್ತೇನೆ.

ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್:- ಕೃಷ್ಣ ಬೈರೇಗೌಡರು ಕೂಡಾ ಇಂಜಿನಿಯರಿಂಗ್ ಮಾಡಿ ಅಮೇರಿಕಾದಲ್ಲಿದ್ದರು. ಅದಾದ ಮೇಲೆ ಹೊಲದಲ್ಲಿ ಬಂದು ಗಂಡ-ಹೆಂಡತಿ ಇದ್ದು ಕೆಲಸ ಮಾಡಿದ್ದಾರೆ. ಹೌದಲ್ರಿ?

ಶ್ರೀ ಗೋವಿಂದ ಎಂ. ಕಾರಜೋಳ:- ಒಂದೇ ನಿಮಿಷ. ಕೃಷ್ಣ ಬೈರೇಗೌಡರು ಬೆಂಗಳೂರಿನಿಂದ ಬಂದಿದ್ದಾರೆ. ಅವರ ತಂದೆ ಕೋಲಾರ ಜಿಲ್ಲೆ ವೇಮಗಲ್ ತಾಲ್ಲೂಕಿನಿಂದ ಬಂದವರು. ವೇಮಗಲ್ ಮತ್ತು ಬೆಂಗಳೂರು city ಗೂ ವ್ಯತ್ಯಾಸವಿದೆ. ಆ ವ್ಯತ್ಸಾಸವನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ.ಎನ್. ಜೀವರಾಜ್:- ಅದೇನೇ ವ್ಯತ್ಯಾಸದ ಮಧ್ಯೆ ನಾನಿಷ್ಟು ಹೇಳಿದ ಮೇಲೆ ಒಂದು ಪದ ಏನೆಂದರೆ, ಕೃಷ್ಣ ಬೈರೇಗೌಡರು ಆ ಅನುಭವದ ಜೊತೆಗೆ ಕೃಷಿಯಲ್ಲಿ ಸ್ವಲ್ಪ ಮಟ್ಟಿಗೆ ಆ ಇಲಾಖೆಯಲ್ಲಿ reform ತಂದಿದ್ದಾರೆ. ತಂದಿದ್ದಾರೆ ಎಂದು ಹೇಳುತ್ತಾ ಇನ್ನಷ್ಟು ಸುಧಾರಣೆ ತನ್ನಿ ಎಂದು ಹೇಳುವುದು ನಮ್ಮ ಉದ್ದೇಶ.

ಶ್ರೀ ಬಸವರಾಜ ರಾಯರೆಡ್ಡಿ:- ಕಾರಜೋಳ ರವರೆ ವ್ಯತ್ಯಾಸ ಎಷ್ಟಿದೆ ಗೊತ್ತಾ? ಬೆಂಗಳೂರಿಗೂ, ವೇಮಗಲ್‌ಗೂ ವ್ಯತ್ಯಾಸ ಎಷ್ಟಿದೆ ಎಂದರೆ, ಬೈರೇಗೌಡರಿಗೂ, ಕೃಷ್ಣನಿಗೂ ಇರುವಷ್ಟು ವ್ಯತ್ಯಾಸವಿದೆ ಅಷ್ಟೆ.

(ಗೊಂದಲ)

ಶ್ರೀ ಅಪ್ಪಚ್ಚು ಎಂ. ಪಿ. (ರಂಜನ್):- ಮಾನ್ಯ ಅಧ್ಯಕ್ಷರೆ, ರೈತರಿಗೆ calcium oxide supply ಮಾಡಿದ್ದೀರಿ. ನಾಗಾರ್ಜುನ Chemicals ನಿಂದ calcium oxide supply ಮಾಡಿದ್ದೀರಿ. ನಮ್ಮ ಕೊಡಗಿಗೂ ಕೂಡಾ ಬಂದಿದೆ. ಬಂದಂತಹ ಸಂದರ್ಭದಲ್ಲಿ ನಾವು analyze ಮಾಡುವುದಕ್ಕೆ ಕೋರಮಂಗಲಕ್ಕೆ ಕಳುಹಿಸಿದ್ದೆವು. ನಿಮ್ಮ ಪ್ರಕಾರ 30% calcium ಇರಬೇಕಿತ್ತು. ಆದರೆ test ಮಾಡಿದಾಗ ಇದ್ದದ್ದು ಕೇವಲ 12%. ಅದೇ ರೀತಿ magnesium ಕೂಡಾ 15% ಇರಬೇಕಿತ್ತು, ಆದರೆ test ಮಾಡಿದಾಗ ಬಂದದ್ದು 2.5%. ತಾವು ಅದನ್ನು verify ಮಾಡಿ. ನಾವು ಗಲಾಟೆ ಮಾಡಿದ ನಂತರ ಕೆ.ಡಿ.ಪಿ. ಸಭೆಯಲ್ಲಿ ಆ ಸುಣ್ಣವನ್ನೇ ವಾಪಸ್ಸು ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರು. ನೀವು ದುಡ್ಡು ಕೊಡುವುದು ಬೇಡ, ಸುಣ್ಣವನ್ನು ಇಟ್ಟುಕೊಳ್ಳುವ ಪರಿಸ್ಥಿತಿ ಬಂದಿದೆ. ಆದುದರಿಂದ ಎಲ್ಲಿ ದುರುಪಯೋಗವಾಗಿದೆ, ಏನಾಗಿದೆ ಈ ರೀತಿ ರೈತರಿಗೆ ಕಳಪೆ calcium oxide ಕೊಟ್ಟು ಅನ್ಯಾಯ ಮಾಡಬಾರದು. ಅದನ್ನು ತಾವು enquiry ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:- ಇದಕ್ಕೆ serious ಆಗಿ case ಮಾಡಿ. ಎನ್.ಆರ್. ಪುರದಲ್ಲಿ 100 ಚೀಲ ಗೊಬ್ಬರ ತಂದು ಕೊಟ್ಟಿದ್ದಾರೆ ಮೊನ್ನೆ. ಗೊಬ್ಬರದಲ್ಲಿ ಪೂರ್ತಿ ಕಲ್ಲು. ಕಲ್ಲಿನ ಮೇಲೆ quoting ಇದೆ. ನಿಮ್ಮವರು ಕೇಸನ್ನೂ ಮಾಡಿದ್ದಾರೆ. ಆದರೆ ಅವರಿಗೆ ಶಿಕ್ಷೆ ಸ್ವಲ್ಪ tight ಮಾಡಿ. ಇಲ್ಲದಿದ್ದರೆ ರೈತರನ್ನು ಹರಾಜು ಹಾಕಿ ಬಿಡುತ್ತಾರೆ.

ಶ್ರೀ ಕೃಷ್ಣ ಬೈರೇಗೌಡ:- ಅಪ್ಪಚ್ಚು ರವರು ದಯವಿಟ್ಟು ಅದರ ಮಾಹಿತಿ ಕೊಟ್ಟರೆ ನನಗೆ ನಾನು verify ಮಾಡಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಒಂದು ನಿಮಿಷ yield ಆಗಿ. ಮಾನ್ಯ ಅಧ್ಯಕ್ಷರೆ, ಬೈರೇಗೌಡರು ಕೃಷಿ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾನು ಎಂ.ಎಲ್.ಎ. ಆಗಿದ್ದೆ. ನನ್ನನ್ನು ಅವರ ಕಾರಿನಲ್ಲಿಯೇ ಕರೆದುಕೊಂಡು ಹೋದರು. ಬಿಜಾಪುರ tour ಹೋದರು. ಐಬಿಗೆ ಹೋದ ಮೇಲೆ ಮುಖ ತೊಳೆದುಕೊಂಡು ಟೀ ಕುಡಿದ ಮೇಲೆ ನನಗೆ ಅರ್ಧಗಂಟೆ ಕೆಲಸವಿದೆ ನೀನು

ಇಲ್ಲೇ ಇರು ಎಂದರು. ಎಲ್ಲ ಹಾಗಾದರೆ ಬಿಜಾಪುರದಲ್ಲಿ ನನ್ನ ಮನೆ ಇದೆ, ಮನೆಗೆ ಹೋಗಿ ಬರುತ್ತೇನೆಂದು ಹೇಳಿದೆ. ಹೇಳಿದ ಮೇಲೆ ಅರ್ಧಗಂಟೆ ಬಿಟ್ಟು ಬನ್ನಿ ಎಂದರು. ನಾನು ನಮ್ಮ ಮನೆಗೆ ಹೋಗಿ, ನಾನು ಟಿಫನ್ ಮಾಡಿ ವಾಪಸ್ ಐಬಿಗೆ ಬರಬೇಕೆಂದಾಗ ಬೈರೇಗೌಡರು ನಮ್ಮ ಊರಿಗೆ ಬಂದಿದ್ದಾರೆ, ಗ್ರಾಮ ಸೇವಕರನ್ನು ಸಸ್ಪೆಂಡ್ ಮಾಡಿದರೆಂದು ನಮ್ಮ ಊರಿನಿಂದ ಫೋನ್ ಬಂತು. ಅಂದರೆ ನನ್ನ ಸ್ವಂತ ಊರಿಗೆ ಹೋಗಬೇಕಾದರೆ ನನಗೆ ಹೇಳದೆ ಅಷ್ಟು ಗೌಪ್ಯವಾಗಿಟ್ಟರು. ಆಮೇಲೆ ಬಂದ ಮೇಲೆ ಸರ್, ಎಲ್ಲಿಗೆ ಹೋಗಿದ್ದೀರಿ ಎಂದು ಕೇಳಿದೆ, ನಿಮ್ಮ ಊರಿಗೆ ಹೋಗಿದ್ದೆನಲ್ಲ ಎಂದರು, ಏಕೆ ಸರ್, ನನಗೆ ಹೇಳಲಿಲ್ಲ ಎಂದೆ, ನಿನಗೆ ಹೇಳಿದ್ದರೆ ನಿಮ್ಮ ಊರಿಗೆ ಹೋಗಿ ಅವನನ್ನು ಸಸ್ಪೆಂಡ್ ಮಾಡುವುದಕ್ಕೆ ಆಗುತ್ತಿತ್ತಾ? ಅದಕ್ಕಾಗಿ ನಿನ್ನನ್ನು ಬಿಟ್ಟು ಹೋದೆ ಎಂದರು.

ಛೇರ್ಮನ್:- ಅವರ ತಂದೆಯವರು ಹಳೆಯ ಪದ್ಧತಿ ಮಾಡಿದರು, ಇವರು refined ಆಗಿ ಅದಕ್ಕಿಂತ ಜೋರಾಗಿ effect ಆಗುವಂತೆ ಮಾಡುತ್ತಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ:- ಅಧ್ಯಕ್ಷರೆ, ಧನ್ಯವಾದಗಳು, ಈಗ ಸವದಿಯವರು ಹೇಳಿದರು, ಬಹುಶಃ ಸವದಿಯವರಿಗೆ ಯಾವಾಗಲೂ ಸ್ವಲ್ಪ ಮಾಹಿತಿ ಕೊರತೆ ಜಾಸ್ತಿ ಇದೆ. ಏಕೆಂದರೆ, ಬಹುಶಃ ಅವರು ನನ್ನ ಹಿನ್ನೆಲೆಯನ್ನು ತಿಳಿದುಕೊಂಡಿಲ್ಲ. ನಾವು ಬೇರೆಯವರ ತರಹ ನಮ್ಮದೆ ತುತ್ತೂರಿ ಊದುವ ನಮಗೆ ಅಭ್ಯಾಸವಿಲ್ಲ. ನಾವು ಕೃಷಿ ಮಾಡಿ ಅಮೇರಿಕಾಗೆ ಹೋದರೂ ವಾಪಸ್ ಬಂದು ಕೃಷಿ ಮಾಡಿದವನು ನಾನು. ಅದನ್ನು ನಾವು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ, ಕೆಲವರಿಗೆ ನಾವು ಮಣ್ಣಿನ ಮಕ್ಕಳೆಂದು ಹೇಳಿಕೊಳ್ಳುವುದೇ ಒಂದು ಉದ್ಯೋಗ, ನಮಗೆ ಆ ರೀತಿ ಏನೂ ಇಲ್ಲ. ಕೆಲಸದಲ್ಲಿ ನಮ್ಮ ಬದ್ಧತೆಯನ್ನು ತೋರಿಸಬೇಕೆನ್ನುವುದು ಅಷ್ಟೆ. ಕಾಲ ಬದಲಾಗುತ್ತದೆ, 15-20 ವರ್ಷಗಳ ಹಿಂದೆ ಇದ್ದಂಥ ವ್ಯವಸ್ಥೆ ಇವತ್ತು ಇದೆಯಾ? ತಾವು 1972ನೇ ಇಸವಿಯಿಂದಲೂ ಇದ್ದೀರಿ, ನೀವು 1972 ರಲ್ಲಿ ಪ್ರವೇಶ ಮಾಡಿದಾಗ ವ್ಯವಸ್ಥೆ ಹೇಗಿತ್ತು? ಶಾಸಕಾಂಗ ಹೇಗಿತ್ತು ಹೇಳಿ,

ಇನ್ನೊಬ್ಬರ ಬಗ್ಗೆ ಮಾತನಾಡುವ ಶಾಸಕಾಂಗ ಹಾಗೆ ಉಳಿದಿದೆಯಾ ಪ್ರಮಾಣಿಕವಾಗಿ ಹೇಳಿ?

ಅಧ್ಯಕ್ಷರು:– ಬಹಳ ಬದಲಾವಣೆಯಾಗಿದೆ.

ಶ್ರೀ ಕೃಷ್ಣ ಬೈರೇಗೌಡ:– ನಾವೆಲ್ಲಾ ಕೆಟ್ಟು ಇನ್ನೊಬ್ಬರು ಮಾತ್ರ ಸರಿಯಾಗಿರಬೇಕೆಂದು ಹೇಳಿದರೆ ಇದು ನಮ್ಮ ಅಪೇಕ್ಷೆನೊ ಉಪೇಕ್ಷೆನೊ ಗೊತ್ತಿಲ್ಲ. ಇರಲಿ, ಪ್ರಾಮಾಣಿಕವಾಗಿ ಕೆಲಸ ಮಾಡಬೇಕು, ಬದ್ಧತೆ ಇಟ್ಟುಕೊಂಡು ಕೆಲಸ ಮಾಡಬೇಕು ಎಂಬುದು ನಮ್ಮ ಉದ್ದೇಶ. ಮಾನ್ಯ ಕಾರಜೋಳ ಸಾಹೇಬರಿಗೆ ಹೇಳಬಯಸುವುದೇನೆಂದರೆ, ಶಿಕಾರಿಪುರದಲ್ಲಿ ಹೋಗಿ ಅಲ್ಲಿಯೂ ಸಹ ಹೀಗೆ inspection ಮಾಡಿ, ಶಿಕಾರಿಪುರದಲ್ಲಿ ಮೂವರನ್ನು ಸಸ್ಪೆಂಡ್ ಮಾಡಿ ಬಂದಿದ್ದೇನೆಂದು ತಮ್ಮ ಮಾಹಿತಿಗೆ ಹೇಳುತ್ತಿದ್ದೇನಷ್ಟೆ. ನಾವು ಯಾರಿಗೂ ಅಂಜುವಂಥ ಪ್ರಸಂಗವಿಲ್ಲ.

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಸಚಿವರು ಶಿಕಾರಿಪುರವನ್ನು ವಿಶೇಷವಾಗಿ ತೆಗೆದುಕೊಳ್ಳುತ್ತಿದ್ದೀರಿ ಏಕೆ?

ಶ್ರೀ ಕೃಷ್ಣ ಬೈರೇಗೌಡ:– ದೊಡ್ಡವರ ಕ್ಷೇತ್ರವಲ್ಲವೇ? ದೊಡ್ಡವರ ಕ್ಷೇತ್ರವೆನ್ನುವುದನ್ನು ಒಪ್ಪುತ್ತೀರೊ ಇಲ್ಲವೋ?

ಶ್ರೀ ಬಿ.ವೈ. ರಾಘವೇಂದ್ರ:– ಸರಿ ಸ್ವಾಮಿ.

ಶ್ರೀ ಕೃಷ್ಣ ಬೈರೇಗೌಡ:– ಅಲ್ಲಿಯೂ ಸಹ, ಅವತ್ತು ಅಲ್ಲಿ ದೊಡ್ಡ ಮಾನ್ಯ ಶಾಸಕರು ಇರಲಿಲ್ಲ, ಅಲ್ಲಿ ಹೋಗಿ ಸ್ಥಳ ತನಿಖೆ ಮಾಡಿ, ಅಲ್ಲಿಯೂ ಸಹ ನಾವೇನು ಬಿಟ್ಟಿಲ್ಲ, ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಬಂದಿದ್ದೇವೆ. ಹಾಗಾಗಿ ನಮ್ಮ ಕೈಲಾದ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ, ನಮ್ಮ ತಂದೆಯವರ ಮಟ್ಟಿಗೆ ಬರುತ್ತೇನೆಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಅವರ ಹಿನ್ನೆಲೆ ಬೇರೆ, ಅವರ ಹೋರಾಟ ಬೇರೆ, ಅವರ ಅನುಭವಗಳು ಬೇರೆ, ಅದರ ಹಿನ್ನೆಲೆಯಲ್ಲಿ, ಅದರ ಆಧಾರದ ಮೇಲೆ ಇಲ್ಲಿ ನಾವು ಬಂದಿರುವವರು.

ಶ್ರೀ ಬಿ.ವೈ. ರಾಘವೇಂದ್ರ:- ಶಿಕಾರಿಪುರವನ್ನು ತೆಗೆದುಕೊಂಡಿದ್ದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ, ಮೊನ್ನೆ ಮೆಕ್ಕೆ ಜೋಳ ನಮ್ಮ ಕೃಷಿ ಇಲಾಖೆಯಿಂದ ಸಬ್ಸಿಡಿಯಲ್ಲಿ supply ಆಯಿತು, ಅದಕ್ಕಿಂತ ಕಡಿಮೆ ಬೆಲೆಯಲ್ಲಿ private sector ನಲ್ಲಿ ಸಿಕ್ಕಿದೆ, ಅದು ₹ 200, ₹ 300 ರೇಟ್ ನಲ್ಲಿ. ಮೊನ್ನೆ KDP meeting ನಲ್ಲೂ ಚರ್ಚೆ ಮಾಡಿ resolution ಮಾಡಿದ್ದೇವೆ, ಹೊರಗಡೆ ನೀವು ಕೊಡುವ ಸಬ್ಸಿಡಿ ರೇಟ್ ಗಿಂತ ಕಡಿಮೆಗೆ ಸಿಗುತ್ತಿದೆ.

ಶ್ರೀ ಕೃಷ್ಣ ಬೈರೇಗೌಡ:- ತಾವು ಹೇಳಿದ್ದನ್ನು ಭಾಗಶಃ ಒಪ್ಪುತ್ತೇನೆ, ಈ ರೀತಿ ವ್ಯತ್ಯಾಸವಿದೆ ಸರಿ ಮಾಡುತ್ತಿದ್ದೇವೆ ಎಂದು ಆಗಲೂ ಒಪ್ಪಿಕೊಂಡಿದ್ದೇವೆ.

ಶ್ರೀ ಡಿ.ಎನ್. ಜೀವರಾಜ್:- Palm ಬಗ್ಗೆ ಕೇಳಿದ್ದು ಮೂಲ ಪ್ರಶ್ನೆ ಹಾಗೆ ಉಳಿಯಿತು.

ಶ್ರೀ ಕೃಷ್ಣ ಬೈರೇಗೌಡ:- ಆಮೇಲೆ ಅಪ್ಪಚ್ಚು ರಂಜನ್ ಅವರು ದಯವಿಟ್ಟು ತಮ್ಮಲ್ಲಿರುವ ಮಾಹಿತಿಯನ್ನು ಕೊಟ್ಟರೆ, ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್:- ನಿಮ್ಮ ಪ್ರಕಾರ 30 ಇರಬೇಕಾಗಿತ್ತು ಇರುವುದು ಕೇವಲ 12%, ಸಮಯ ವ್ಯರ್ಥ ಮಾಡುವುದು ಬೇಡ, ಮಾಹಿತಿ ಕೊಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಎಲ್ಲರ ಗಮನಕ್ಕೆ ತರಬಯಸುತ್ತೇನೆ, ಅದೇನು ಸರ್ಟಿಫಿಕೇಟ್ ಕೊಡುತ್ತೀರೊ ಗೊತ್ತಿಲ್ಲ, ಹಾಸನದಲ್ಲಿ ಇದೇ ರೀತಿ ಪ್ರಕರಣವಾದ ಸಂದರ್ಭದಲ್ಲಿ, ತಮಿಳುನಾಡಿಗೆ ಹೋಗಿ ಅಲ್ಲಿ ಅವರ ಕಾರ್ಖಾನೆಯನ್ನು ಬಂದ್ ಮಾಡಿ, ಅಲ್ಲಿ ಅವರನ್ನು ಅರೆಸ್ಟ್ ಮಾಡಿ ತಂದು ಇಲ್ಲಿನ ಜೈಲಿಗೆ ಹಾಕಿದ್ದೇವೆ. ಯಾವುದೂ ನಿರ್ದಾಕ್ಷಿಣ್ಯವಿಲ್ಲ, ಸ್ವಲ್ಪ ಹೆಚ್ಚಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೇನು ಹಿಂಜರಿಕೆ ಇಲ್ಲ. ಅವಕಾಶ ಸಿಕ್ಕಾಗ ಖಂಡಿತವಾಗಿ ನಾವು ಮಾಡುತ್ತೇವೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಆ Co-

operative society M.D ಮೇಲೆ ಕೇಸ್ ಹಾಕಿಸಿದೆ, ಅಲ್ಲಿ ನಮ್ಮ ಪಾರ್ಟಿ ಲೀಡರ್ಸ್ ಎಲ್ಲಾ ಬಂದರು, ನಾನು ಹೇಳಿದೆ, ರೈತರ ಹಿತ ಕಾಪಾಡುವ ಸಹಕಾರಿ ಸಂಸ್ಥೆಯ ಎಂ.ಡಿ ಯಾಗಿರುವವನು ರೈತರ ಹಿತವನ್ನು ಕೊಲ್ಲುವಂಥ ಕೆಲಸ ಮಾಡಿದರೆ ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ, case ಅನ್ನು withdraw ಮಾಡಿ ಎಂದರು, ಅದಕ್ಕೆ ನಾನಂತೂ ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದೆ. ಅವರಿಗೂ ಅರೆಸ್ಟ್ ಮಾಡಿಸಿದೆವು, ಬಹುಶಃ ಅಲ್ಲಿನ ಸಂಘದ ಅಧ್ಯಕ್ಷರ ಮೇಲೂ ಕೇಸ್ ಹಾಕಿಸಿದೆವು. ಯಾವ ಸಂಘದಿಂದ ಕಳಪೆ ಗೊಬ್ಬರ ಮಾರಾಟವಾಗಿತ್ತು, ಆ ಸಂಘದ ಅಧ್ಯಕ್ಷರ ಮೇಲೂ ಸಹ ಕೇಸ್ ದಾಖಲು ಮಾಡಬೇಕೆಂದು ನಾನು ಡೈರೆಕ್ಷನ್ ಕೊಟ್ಟಿದ್ದೆ. ತಮಿಳುನಾಡಿನಲ್ಲಿ ತಯಾರಾಗುತ್ತಿತ್ತು, ಅಲ್ಲಿಗೆ ಹೋಗಿ ಅವರನ್ನು ಅರೆಸ್ಟ್ ಮಾಡಿಕೊಂಡು ಬಂದು ಇಲ್ಲಿ ಜೈಲಿಗೆ ಹಾಕಿದ್ದೇವೆ, ಒಂದೆರಡು ಉದಾಹರಣೆ ಕೊಟ್ಟೆ ಅಷ್ಟೆ. ದಯವಿಟ್ಟು ಅದನ್ನು ಕೊಡಿ, ಪರಿಶೀಲಿಸುತ್ತೇನೆ. ತಾಳೆ ಎಣ್ಣೆಯದು ತರಿಸಿಕೊಂಡಿದ್ದೇನೆ, ಖಂಡಿತವಾಗಿಯೂ, ಸುಮಾರು 9,222 ರೂಪಾಯಿ ಒಂದು ಟನ್‌ಗೆ ರೇಟ್ ನಿಗದಿಯಾಗಿರುವುದು. ಪ್ರತಿ ತಿಂಗಳು 30ನೇ ತಾರೀಖು ಕೊಡಬೇಕೆನ್ನುವುದು ಇದೆ, ಅದನ್ನು ಪಾಲನೆ ಮಾಡಲಿಲ್ಲವೆಂದರೆ, ನಾನು ಸ್ವಲ್ಪ ಅಧಿಕಾರಿಗಳ ಮೂಲಕ ಅವರಿಗೆ ಒತ್ತಾಯಿಸಿ, ಅವರಿಗೆ ಪಾವತಿಸುವಂತೆ ಮಾಡುತ್ತೇವೆಂದು ನಾನು ತೋಟಗಾರಿಕೆ ಸಚಿವರ ಪರವಾಗಿ ತಮಗೆ ಹೇಳಬಯಸುತ್ತೇನೆ. ಇನ್ನು ನಾನು ಆಗಲೇ ಪ್ರಸ್ತಾಪ ಮಾಡಿದ್ದು, ಕೃಷಿ ಬೆಲೆ ಆಯೋಗದ ಬಗ್ಗೆ. ನಮಗೆ ಅದರ ಬಗ್ಗೆ ಬದ್ಧತೆ ಇಲ್ಲದೆ ಹೋಗಿದ್ದರೆ, ಇದನ್ನು ರಚನೆ ಮಾಡುವ ಪ್ರಯತ್ನಕ್ಕೆ ನಾವು ಹೋಗುತ್ತಿರಲಿಲ್ಲ, ಇದು ಕಠಿಣ ಸಾಧ್ಯವಾದ ಕೆಲಸವೆಂದು ನಮಗೆ ಗೊತ್ತಿದೆ. ಆದರೂ ಕೃಷಿ ಬೆಲೆ ಆಯೋಗವೆಂದ ಕೂಡಲೆ ಎಲ್ಲರ ಚಿತ್ತ ಯಾವ ಕಡೆ ಇದೆ ಎಂದರೆ, ಯಾವುದೊ ಬೆಳೆಯುವ ಬೆಳೆಗೆ ಒಂದು ರೇಟ್ ನಿಗದಿ ಮಾಡಿಬಿಡಿ ಎನ್ನುವಷ್ಟೇ ಚಿತ್ತವಿದ್ದ ಹಾಗೆ ಕಾಣುತ್ತದೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಇವತ್ತು ಮಾರುಕಟ್ಟೆಯಲ್ಲಿ ಸ್ವಾತಂತ್ರ್ಯವಿದೆ. ನಾವು ನಿಗದಿ ಮಾಡಿದ ಕೂಡಲೇ ಯಾರು ಆ ದರಕ್ಕೆ ಖರೀದಿ ಮಾಡುತ್ತಾರೆ, ಯಾರು ಖರೀದಿ ಮಾಡುವುದಕ್ಕೆ ತಯಾರಿದ್ದಾರಾ? ಅವುಗಳನ್ನೆಲ್ಲಾ ನಾವು

ಯೋಚನೆ ಮಾಡದೆ ಕೇವಲ ದರವನ್ನು ನಿಗದಿ ಮಾಡಿಬಿಟ್ಟರೆ, ಕೊಂಡುಕೊಳ್ಳುವವರಾದರೂ ಯಾರು? ಅಂಥ ವ್ಯವಸ್ಥೆ ಇವತ್ತು ಇದೆ. ಇದನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದು ಒಂದು ಕಡೆ ಇರಲಿ, ಆದರೂ ಸಹ ನಮ್ಮ ಮೂಲ ಉದ್ದೇಶ, ಕೃಷಿ ಬೆಲೆ ಆಯೋಗವೆಂದು ಹೆಸರು ಇಟ್ಟಿದ್ದರೂ ಸಹ ನಮ್ಮ ಮೂಲ ಉದ್ದೇಶ ರೈತರಿಗೆ ಬರುವ ಆದಾಯದಲ್ಲಿ ಸುಧಾರಣೆ ತರಬೇಕು ಎನ್ನುವುದು ನಮ್ಮ ಉದ್ದೇಶ. ಹಾಗಾದರೆ ನೀವು, ರೈತರ ಆದಾಯ ಆಯೋಗವೆಂದು ಹೆಸರು ಇರಬೇಕಾಗಿತ್ತು ಎಂದು ಹೇಳಬಹುದು, ಹೆಸರು ಏನಾದರೂ ಇರಲಿ. ಆದರೆ ನಮ್ಮ ಉದ್ದೇಶ, ರೈತರ ಆದಾಯವನ್ನು ಸುಧಾರಣೆ ಮಾಡಬೇಕು. ರೈತರ ಆದಾಯ ಸುಧಾರಣೆಯಾಗಬೇಕೆಂದರೆ, ನಾನಾ ಅವಕಾಶಗಳಿದ್ದಾವೆ. ಒಂದು, ಬೆಲೆ ಮುಖಾಂತರ, ಮತ್ತೊಂದು ರೈತರಿಗೆ ತಗಲುವ ಖರ್ಚುಗಳನ್ನು ನಾವು ಕಡಿಮೆ ಮಾಡಿದರೆ, ಆದಾಯ ತಾನು ತಾನಾಗೆ ಸುಧಾರಣೆಯಾಗುತ್ತದೆ, ಮೂರನೆಯದು, ಇಳುವರಿ, ಇಳುವರಿ ಹೆಚ್ಚಾದರೆ ಅದಾಯ ಜಾಸ್ತಿಯಾಗುತ್ತದೆ, ಇವೆರಡು ಸಹ ನಮ್ಮ ವ್ಯಾಪ್ತಿಯಲ್ಲಿ ಬರುತ್ತವೆ. ನಾನು ದರವನ್ನು ನಿಗದಿ ಮಾಡಿದ ಕೂಡಲೇ ಎಲ್ಲರೂ ಬಂದು ಆ ದರಕ್ಕೆ ಖರೀದಿ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಕೃಷಿ ಬೆಳೆಗಳಿಗೆ ತಗಲುತ್ತಿರುವ ವೆಚ್ಚಗಳೇನಿವೆ, ಅವು ಅವಶ್ಯಕತೆಗಿಂತ ಜಾಸ್ತಿ ಇದ್ದಾವೆ, ಏನರ್ಥವೆಂದು ತಾವು ಕೇಳಬಹುದು, ಒಂದು ನಿಮಿಷ ತಾಳ್ಮೆಯಿಂದ ಇದ್ದರೆ ಹೇಳುತ್ತೇನೆ. ಅದೇ ರೀತಿ ನಾವು ತೆಗೆಯುವ ಇಳುವರಿ ಏನಿದೆ, ಬೇರೆ ದೇಶಗಳಿಗೆ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಲಿಕೆ ಮಾಡಿದರೆ, ಅವರು ನೂರರಷ್ಟು ಇದ್ದರೆ, ನಾವು ಇಳುವರಿಯಲ್ಲಿ ಇನ್ನು 40 ರಲ್ಲಿ ಇದ್ದೇವೆ. ಆದುದರಿಂದ ಇಳುವರಿಯಲ್ಲಿ ಸುಧಾರಣೆ ತರುವುದರ ಮೂಲಕ ಆದಾಯ ವೃದ್ಧಿಯನ್ನು ನಾವು ಮಾಡಬೇಕಾಗುತ್ತದೆ. ಉದಾಹರಣೆಗೆ ನಾವು ಕೃಷಿ ಬೆಲೆ ಆಯೋಗದಿಂದ ಕೆಲವು ಅಧ್ಯಯನವನ್ನು ಕೈಗೆತ್ತಿಕೊಂಡಿದ್ದೇವೆ, ಇದು ಕೆಲವರಿಗೆ ಸರಿ ಕಾಣುತ್ತದೆಯೋ ಇಲ್ಲವೊ, ಆದರೆ ನಾವು ಮಾಡುತ್ತಿರುವ ಗಂಭೀರ ಪ್ರಯತ್ನವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಉದಾಹರಣೆಗೆ, ದಕ್ಷಿಣ ಕರ್ನಾಟಕದ ಭಾಗದಲ್ಲಿ ರಾಗಿ ಬೆಳೆಯುತ್ತಾರೆ. ಈಗ

ರಾಗಿ ಬೆಳೆಯುವುದಕ್ಕೆ ಬಹುತೇಕವಾಗಿ ಕೂಲಿ ಕಾರ್ಮಿಕರನ್ನು ಅವಲಂಬಿಸಿ ರಾಗಿ ಬೆಳೆಯುತ್ತಾರೆ, ಅದರಲ್ಲಿ ಯಾಂತ್ರೀಕರಣ ಬಹಳ ಕಡಿಮೆ ಇದೆ. ಕಟಾವು ಮಾಡುವುದು ಬಿತ್ತನೆ ಮಾಡುವುದು ಎಲ್ಲವೂ ಸಹ ನಾವು ಮನುಷ್ಯರ ಆಧಾರದ ಮೇಲೆ ಮಾಡುತ್ತಿದ್ದೇವೆ. ಇವತ್ತು ಕೂಲಿ ಕಾರ್ಮಿಕರು ಸಿಗುವುದೂ ಇಲ್ಲ. ಸಿಕ್ಕಿದರೆ ಬಹಳ ದುಬಾರಿ ದರ. ಆ ಖರ್ಚು ವೆಚ್ಚಗಳನ್ನು ಭರಿಸುವಷ್ಟು ಹೊತ್ತಿಗೆ ರಾಗಿಯಲ್ಲಿ ಬರುವ ಆದಾಯ ಎಲ್ಲ ಅಲ್ಲಿಗೆ ಸರಿ ಹೋಗುತ್ತದೆ. ಅಥವಾ ಇನ್ನು ಕೈಯಿಂದ ಸ್ವಲ್ಪ ಬೀಳುತ್ತದೆ. ಏನೋ ನಾವು ರೈತರು ನಾವು ಒಕ್ಕಲುತನ ಮಾಡುತ್ತೇವೆಂದು ಹೇಳುವುದಕ್ಕೆ ರಾಗಿ ಬೆಳೆಯಬೇಕು. ಆ ಪರಿಸ್ಥಿತಿ ಆಗಿದೆ. ನಾವು ಅದು ಕಟಾವು ಮಾಡಬೇಕೆಂದು ಹೇಳಿದರೆ ರೈತರು ಹೋಗಿ ಆ ಕಟಾವು ಮಾಡುವ ಕೂಲಿ ಕಾರ್ಮಿಕರ ಮನೆಗೆ ಹೋಗಿ ಐದು ದಿನ ಕಾಯಬೇಕಾಗುತ್ತದೆ. ಕೊನೆಗೆ ಹೋಗಿ ಅವರನ್ನು ಕರೆದುಕೊಂಡು ಬಂದು ಹೊಲ ಕೊಯ್ಯಿಸಬೇಕಾಗುತ್ತದೆ. ಈ ರೀತಿ ಎಲ್ಲ ಸಮಸ್ಯೆಗಳು ಇವೆ. ನಾವು ಒಂದು ಅಧ್ಯಯನವನ್ನು ಕೈಗೆತ್ತಿಕೊಂಡೆವು. ಸ್ವಲ್ಪ ಮಟ್ಟಿಗೆ ಯಾಂತ್ರೀಕರಣ ಮಾಡಿದರೆ ಎಷ್ಟರ ಮಟ್ಟಿಗೆ ಖರ್ಚು ವೆಚ್ಚಗಳು ಉಳಿತಾಯ ಆಗಬಹುದು ಎಂದು. ನಾವು ಬೆಂಗಳೂರು ಸುತ್ತ ಮುತ್ತ ಕೆಲವು ಕಡೆ ಅಧ್ಯಯನ ಮಾಡಿಸಿದಾಗ ಬರೀ ರಆಗಿ ಕಟಾವು ಮಾಡುವುದಕ್ಕೆ ಒಂದು ಎಕರೆಗೆ 5000 ರೂಪಾಯಿ ಖರ್ಚು ಬರುತ್ತಿದೆ. ಒಕ್ಕಣೆ ಮಾಡುವುದಕ್ಕೆ ಇನ್ನೊಂದು ಎರಡು ಮೂರು ಸಾವಿರ ರೂಪಾಯಿ ಖರ್ಚು ಬರುತ್ತದೆ. ಈ ಕಟಾವು ಮಾಡುವುದು, ಒಕ್ಕಣೆ ಮಾಡುವುದು, ಎರಡನ್ನೂ ಮಾತ್ರ ನಾವು ಯಾಂತ್ರೀಕರಣ ಮಾಡಿದರೆ ಒಂದು ಕ್ವಿಂಟಾಲ್‌ಗೆ ತಗಲತಕ್ಕಂತಹ ಖರ್ಚು 1,609 ರೂಪಾಯಿ. Manual ಆಗಿ ಮಾಡಿದರೆ 1,956 ರೂಪಾಯಿ. ಅಂದರೆ ಒಂದು ಕ್ವಿಂಟಾಲ್ ಮೇಲೆ 300 ರೂಪಾಯಿ ವ್ಯತ್ಯಾಸವಾಯಿತು. ಸ್ವಲ್ಪ ಮಟ್ಟಿಗೆ ಯಾಂತ್ರೀಕರಣ ಮಾಡುವುದರಿಂದ. ಪೂರ್ಣ ಪ್ರಮಾಣದಲ್ಲಿ ಯಾಂತ್ರೀಕರಣ ಮಾಡಿದರೆ ಇನ್ನೂ ಕಡಿಮೆಯಾಗುತ್ತದೆ. ಈಗ ಇದು ಆದಾಯ ವೃದ್ಧಿ ಆಯಿತೋ ಇಲ್ಲವೋ? ಹಾಗಾಗಿ ಇಂತಹ ಕ್ರಮಗಳನ್ನು ಸಹ ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ಯಾಂತ್ರೀಕರಣ ಹಾಗೂ ಇತರ ಮೂಲಗಳ ಮುಖಾಂತರ ಅವರಿಗೆ ತಗಲತಕ್ಕಂತಹ ಖರ್ಚುಗಳನ್ನು ಕಡಿಮೆ

ಮಾಡಿ ಆದಾಯವನ್ನು ಸುಧಾರಣೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದೇ ರೀತಿ ಭತ್ತದ್ದು...

ಶ್ರೀ ಕೆ.ಎಂ. ಶಿವಲಿಂಗೇಗೌಡ:- ರಾಗಿ ಹಾಗಲ್ಲ. ಯಾಂತ್ರೀಕರಣದಿಂದ ಆಗುವುದಿಲ್ಲ. ನಾವೆಲ್ಲ ಟೆಸ್ಟ್ ಮಾಡಿ ನೋಡಿದ್ದೇವೆ. ನಾವು ರಾಗಿಯೇ ಪೂರ್ಣ ಬೆಳೆಯುವುದು. ಅದನ್ನು ಕೈಬಿಡಿ. ಅದನ್ನು ಯಾವ ಕಾರಣದಿಂದಲೂ ಯಾಂತ್ರೀಕರಣದಿಂದ ಮಾಡುವುದಕ್ಕೆ ಹೋದರೆ ಆ ರಾಗಿಗಿಂತ ದನದ ಮೇವು ಸಿಗುತ್ತದಲ್ಲ, ಅದು ಮುಖ್ಯ ನಮಗೆ. ಆ ಮೇವು ಸಫಲತೆ ಬರುವುದಿಲ್ಲ. ಮೇವೆಲ್ಲ ಹಾಳಾಗಿ ಹೋಗುತ್ತದೆ. ಆದ್ದರಿಂದ ಅದು ಸಾಧ್ಯವಾಗುವುದಿಲ್ಲ.

ಶ್ರೀ ಕೃಷ್ಣ ಬೈರೇಗೌಡ:- ಮೇವು ಸೇರಿಸಿಯೇ ಹೇಳುತ್ತಿರುವುದು. ತಮ್ಮ ಭಾಗದಲ್ಲಿ ಮಾಡಿ ತೋರಿಸುತ್ತೇವೆ. ತಾವು ಒಪ್ಪಲಿಲ್ಲವೆಂದರೆ ಅವತ್ತು ಬೇರೆ ವಿಚಾರ ಮಾಡೋಣ. ಹಾಗೆಯೇ ಭತ್ತವೂ ಸಹ ಕೆಲವು ಕಡೆ ನಾಟಿ ಮಾಡುವುದು ಕಟಾವು ಮಾಡುವುದು, ಯಾಂತ್ರೀಕರಣ ಮಾಡಿಕೊಂಡಿದ್ದಾರೆ. ಆದರೆ ಇನ್ನು ಅನೇಕ ರೈತರು ಎಲ್ಲವನ್ನು ಸಹ ಕೈಯಾರೆ ಭತ್ತ ನಾಟಿ ಮಾಡುವುದು, ಕಟಾವು ಮಾಡುವುದು ಕೈಯಾರೆ ಮಾಡುತ್ತಿದ್ದಾರೆ. ಅದರಲ್ಲಿಯೂ ಸಹ ನಾವು ಪ್ರಯೋಗ ಮಾಡಿದಾಗ ಯಾಂತ್ರೀಕರಣದ ಮುಖಾಂತರ transplanter ಇವುಗಳನ್ನೆಲ್ಲ ಉಪಯೋಗ ಮಾಡಿ ಮಾಡಿದರೆ ಒಂದು ಕ್ವಿಂಟಾಲ್‌ಗೆ ಸುಮಾರು 1113 ರೂಪಾಯಿ ಖರ್ಚು ಬರುತ್ತದೆ. ಆದರೆ ಅದನ್ನೇ manual ಆಗಿ ಮಾಡಿದರೆ 1400 ರೂಪಾಯಿ ಖರ್ಚು ಬರುತ್ತದೆ. ಇಂತಹ ಅಧ್ಯಯನಗಳನ್ನು ಸಹ ನಾವು ಕೈಗೆತ್ತಿಕೊಂಡು ಅವರ ಸಲಹೆ ಆಧಾರದ ಮೇಲೆ ತಂತ್ರಜ್ಞಾನವನ್ನು ರೈತರಿಗೆ ತಲುಪಿಸಿ ಅದರ ಮುಖಾಂತರ ಆದಾಯವನ್ನು ಸುಧಾರಣೆ ಮಾಡತಕ್ಕಂತಹ ಪ್ರಯತ್ನವನ್ನು ನಾವು ಕೃಷಿ ಬೆಲೆ ಆಯೋಗದ ಮುಖಾಂತರ ಮಾಡುತ್ತಿದ್ದೇವೆ. ಹಾಗೆಯೇ ವಿಮೆ ಬಗ್ಗೆ ಸಹ ಬಹಳ ಚರ್ಚೆ ಆಯಿತು. ನಾವು ಕೃಷಿ ಬೆಲೆ ಆಯೋಗದಲ್ಲಿ ವಿಮೆಯನ್ನು ಯಾವ ರೀತಿ ಸುಧಾರಣೆ ಮಾಡುವುದು ಎನ್ನುವಂತಹ ಅಧ್ಯಯನಗಳನ್ನು ಸಹ ಅವರ ಮುಖಾಂತರ ನಾವು ಮಾಡಿಸುತ್ತಿದ್ದೇವೆ.

ಹಾಗೂ ಅದರ ಜೊತೆಗೆ cost of cultivation ಅವರ ಕಡೆಯಿಂದ ನಾವು ಅಧ್ಯಯನ ಮಾಡಿಸುತ್ತಿದ್ದೇವೆ. ಅದರ ಜೊತೆಗೆ ಇವೆಲ್ಲವನ್ನು ಸಹ ನಾವು ಅಧ್ಯಯನ ಮಾಡಿಸುತ್ತಿದ್ದೇವೆ. ಮಿನಿಮಮ್ ಸಪೋರ್ಟ್ ಪ್ರೈಸ್ ಎಂದು ನಾವು ಘೋಷಣೆ ಮಾಡುತ್ತೇವೆ. ಅದನ್ನು ಸಮರ್ಪಕವಾಗಿ ಹೇಗೆ implement ಮಾಡುವುದು? ಇಂತಹದ್ದನ್ನು ಸಹ ನಾವು ಕೃಷಿ ಬೆಲೆ ಆಯೋಗದ ಮುಖಾಂತರ ಮಾಡುತ್ತಿದ್ದೇವೆ. ಕೃಷಿ ಬೆಲೆ ಆಯೋಗ ಎಂದು ಹೇಳಿದರೆ ಕೇವಲ ಒಂದು ಬೆಲೆಯನ್ನು ನಿಗದಿ ಮಾಡಲಿಕ್ಕೆ ಘೋಷಣೆ ಮಾಡಲಿಕ್ಕೆ ಸೀಮಿತವಾಗಿಲ್ಲ. ನಾನಾ ಮಾರ್ಗಗಳ ಮುಖಾಂತರ ರೈತರಿಗೆ ಬರತಕ್ಕಂತಹ ಆದಾಯವನ್ನು ಸುಧಾರಣೆ ಮಾಡಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶ. ಆ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ವಿಮೆ ಬಗ್ಗೆ ಹೇಳಿದಿರಿ. ಕಬ್ಬು ಹಾಗೂ ಬಾಳೆ ಬೆಳೆಗಳ ಬಗ್ಗೆ ಹೇಳಬೇಕೆಂದರೆ, ಪ್ರಕೃತಿಯಿಂದ ಗಾಳಿ ಮಳೆಯಿಂದ ಬಾಳೆ ಗಿಡ ಬಿದ್ದು ಹಾನಿಯಾಗುತ್ತದೆ, short circuit ಆಗಿ ಕಬ್ಬು ಬೆಳೆ ಸುಡುತ್ತದೆ. ಅವರಿಗೆ ಪರಿಹಾರ ಸಿಗುವಂತೆ ತಾವು ಚಿಂತನೆ ಮಾಡಿ. ಏಕೆಂದರೆ ಬಹಳ ಅವಶ್ಯಕತೆ ಇದೆ. ಬೇರೆ insurance company ಯವರು ಇದಕ್ಕೆ ಮುಂದೆ ಬರುವುದಿಲ್ಲ. ಇಲಾಖೆಯಿಂದ ಇದರ ಬಗ್ಗೆ ಬಹಳ ಮಹತ್ವದ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಕೃಷ್ಣ ಬೈರೇಗೌಡ:- ವಿಮೆ ಬಗ್ಗೆ ನಮಗೆ ಸಮಾಧಾನ ಇಲ್ಲ, ಅದರ ಬಗ್ಗೆ ಮತ್ತೆ ಬರುತ್ತೇನೆ. ಆ ವಿಮೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಾವು ಏನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನುವುದನ್ನು ಸಹ ನಾನು ಹೇಳುತ್ತೇನೆ. ನಮ್ಮ ಕೃಷಿ ಬೆಲೆ ಆಯೋಗದವರು ಅವರ ಪ್ರಯತ್ನ ಅವರು ಮಾಡುತ್ತಿದ್ದಾರೆ. ಆದರೆ ಸುಮಾರು 17 ಕೃಷಿ ಉತ್ಪನ್ನಗಳಿಗೆ cost of cultivation ವೆಚ್ಚವನ್ನು ಲೆಕ್ಕ ಹಾಕತಕ್ಕಂತಹ ಜವಾಬ್ದಾರಿಯನ್ನು ನಾವು ಕೃಷಿ ಬೆಲೆ ಆಯೋಗಕ್ಕೆ ಕೊಟ್ಟಿದ್ದೇವೆ. ಅವರು ಹಾಲಿ ಈಗ ರೈತರ ಜಮೀನಿನಲ್ಲಿ ಅವುಗಳ ಖರ್ಚು ವೆಚ್ಚಗಳನ್ನು ಲೆಕ್ಕ ಹಾಕುತ್ತಿದ್ದಾರೆ. ಅದರ ಜೊತೆಗೆ ಮಿನಿಮಮ್ ಸಪೋರ್ಟ್ ಪ್ರೈಸ್ ಕನಿಷ್ಠ

ಬೆಂಬಲ ಬೆಲೆ ಯೋಜನೆ ಕೇಂದ್ರ ಸರ್ಕಾರದಿಂದ ಅನುಷ್ಠಾನವಾಗುತ್ತಿರತಕ್ಕಂಥದ್ದು ಹೋದ ವರ್ಷ ಮೆಕ್ಕೆ ಜೋಳಕ್ಕೆ ಸಂಬಂಧಪಟ್ಟ ಹಾಗೆ ಸಾಕಷ್ಟು ಗೊಂದಲ ನಿರ್ಮಾಣವಾಗಿತ್ತು. ಕೇಂದ್ರ ಸರ್ಕಾರ ಸಹಕಾರ ಕೊಡಲಿಲ್ಲ. ಅದರ ಮೇಲೆ ಮತ್ತೊಂದು ಏನಾಗಿದೆ, ಕಳೆದ ಎರಡು ವರ್ಷ ಮತ್ತು ಅದಕ್ಕೆ ಪೂರ್ವ ಹೋಲಿಕೆ ಮಾಡಿದರೆ 2007–08 ರಿಂದ 2013–14 ರವರೆಗೆ ಕನಿಷ್ಠ ಬೆಂಬಲ ಬೆಲೆ ವಾರ್ಷಿಕವಾಗಿ ಶೇಕಡ 15 ರಷ್ಟು ಜಾಸ್ತಿಯಾಗುತ್ತಿತ್ತು. ಉದಾಹರಣೆಗೆ ಭತ್ತ ತೆಗೆದುಕೊಂಡರೆ 2008–09 ರಲ್ಲಿ 175 ರೂಪಾಯಿ ಜಾಸ್ತಿ ಮಾಡಿದರು. 2009–10 ರಲ್ಲಿ 150 ರೂಪಾಯಿ ಜಾಸ್ತಿ ಮಾಡಿದರು. ಹಾಗೆಯೇ ಜೋವಾರ್‌ಗೆ 240 ರೂಪಾಯಿ, 100 ರೂಪಾಯಿ, 500 ರೂಪಾಯಿ ವರ್ಷಕ್ಕೆ ಇಷ್ಟೆಲ್ಲ ಜಾಸ್ತಿಯಾಗುತ್ತಿತ್ತು. 2007–08 ರಿಂದ 2013–14ರವರೆಗೆ. ಆದರೆ 2014–15, 2015–16ರಲ್ಲಿ ನಮಗೆ ತೊಂದರೆಯಾಗಿರುವುದು ಏನೆಂದರೆ, ಕನಿಷ್ಠ ಬೆಂಬಲ ಬೆಲೆ ವರ್ಷದಿಂದ ವರ್ಷಕ್ಕೆ ಜಾಸ್ತಿ ಮಾಡುತ್ತಾರೆ, ಅದು ಕೇವಲ 3% ಸರಾಸರಿ ಇದೆ. ಅದಕ್ಕೆ ಹಿಂದೆ ಏಳೆಂಟು ವರ್ಷ 15% ಇತ್ತು. Minimum support price ಪ್ರತಿವರ್ಷ 15% ಜಾಸ್ತಿಯಾಗುತ್ತಿತ್ತು. ಸುಮಾರು 13 ಬೆಳೆಗಳನ್ನು ನಾವು ಸರಾಸರಿ ನೋಡಿದಾಗ 15% ಜಾಸ್ತಿಯಾಗುತ್ತಿದ್ದುದು, ಮೋದಿಯವರ ಸರ್ಕಾರ ಬಂದ ಮೇಲೆ ಏಕೋ ಗೊತ್ತಿಲ್ಲ, ಬರೀ 3% ಮಾತ್ರ ಜಾಸ್ತಿಯಾಗುತ್ತಿರುವುದು, ನಮ್ಮ ಪ್ರಯತ್ನಗಳಿಗೆ ಎಲ್ಲೋ ಒಂದು ಕಡೆಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಿದೆ ಎನ್ನುವುದನ್ನು ನಾನು ಇಲ್ಲಿ ಗುರುತಿಸುವುದಕ್ಕೆ ಬಯಸುತ್ತೇನೆ. ಆದರೂ ಸಹ ಆ ದಿಕ್ಕಿನಲ್ಲಿ ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತೇವೆ. ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ, ನೀವು ಕೃಷಿಯಲ್ಲಿ ಬಂಡವಾಳ ಹೂಡಬೇಕು ಎನ್ನುವಂಥದ್ದಕ್ಕೆ ಹೆಚ್ಚಿನ ಒತ್ತು ಕೊಟ್ಟು ಮಾತನಾಡಿದರು. ಕೃಷಿಯಲ್ಲಿ ಬಂಡವಾಳ ಹೂಡುವುದು ಒಂದು ಪ್ರಮುಖ ಎಂದು ಹೇಳಿದರೆ ಬೃಹತ್ ನೀರಾವರಿ, ಮಧ್ಯಮ ನೀರಾವರಿ ಹಾಗೂ ಸಣ್ಣ ನೀರಾವರಿ ಇಲಾಖೆಗಳ ಮುಖಾಂತರ ಹೂಡತಕ್ಕಂತಹ ಒಂದು ಬಂಡವಾಳ, ಹಾಗೆಯೇ ಬೇರೆ ಬೇರೆ ಇಲಾಖೆಗಳು ಬೇರೆ ಬೇರೆ ರೀತಿಯಲ್ಲಿ ಬಂಡವಾಳ ಹೂಡುತ್ತವೆ. ನೀವು ಕೃಷಿಯಲ್ಲಿಯೂ ಮಾಡಬೇಕೆಂದು ಹೇಳಿದ್ದಾರೆ, ಹಾಗಾಗಿ

ನಾವೂ ಕಳೆದ ವರ್ಷ ಏನು ಕೃಷಿ ಯಂತ್ರ ಧಾರೆಯನ್ನು ಆರಂಭ ಮಾಡಿದ್ದೇವೆ, ಯಂತ್ರೋಪಕರಣಗಳನ್ನು ಹೋಬಳಿ ಮಟ್ಟದಲ್ಲಿ ಕೊಟ್ಟು ಅದನ್ನು ರೈತರಿಗೆ ಸಿಗುವಂತೆ ಮಾಡುವುದು ಅದು ಒಂದು ರೀತಿಯ ಬಂಡವಾಳ. ಅದರ ಜೊತೆಗೆ ಈ ವರ್ಷ ಸಹಕಾರ ಇಲಾಖೆಯವರ ಮುಖಾಂತರವಾಗಿ ಸುಮಾರು 650 ಕೋಟಿ ರೂಪಾಯಿ ವೆಚ್ಚದಲ್ಲಿ ನಬಾರ್ಡ್‌ನ ಸಹಕಾರದೊಂದಿಗೆ ಗೋದಾಮುಗಳ ನಿರ್ಮಾಣವನ್ನು ಸಹ ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ರಾಜ್ಯದಲ್ಲಿ ಗೋದಾಮುಗಳ ಅವಶ್ಯಕತೆ ಬಹಳ ಇದೆ, ವೈಜ್ಞಾನಿಕವಾದ ಗೋದಾಮುಗಳು ಬೇಕೆಂದು ಹೇಳಿ ಸಹಕಾರ ಇಲಾಖೆ Karnataka Ware Housing Corporation ಮುಖಾಂತರವಾಗಿ 650 ಕೋಟಿ ರೂಪಾಯಿ ವೆಚ್ಚದಲ್ಲಿ ಗೋದಾಮುಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಹಾಗೆಯೇ ಕೃಷಿ ಯಂತ್ರಧಾರೆ ಯೋಜನೆ ಈ ವರ್ಷ ಮುಂದುವರೆಸಿದ್ದೇವೆ. ಇನ್ನೂ ಸುಮಾರು 270 ಹೋಬಳಿಗಳಲ್ಲಿ ತೆಗೆಯಬೇಕೆಂದು ಸುಮಾರು 75 ಕೋಟಿ ರೂಪಾಯಿ ಯಂತ್ರೋಪಕರಣಕ್ಕೆ ಬಂಡವಾಳ ಹೂಡತಕ್ಕಂಥದ್ದು ಕೃಷಿ ಭಾಗ್ಯ ಯೋಜನೆಯೂ ಒಂದು ರೀತಿ ಬಂಡವಾಳ ಹೂಡತಕ್ಕಂತಹ ಕಾರ್ಯಕ್ರಮವೇ. ಏಕೆಂದರೆ ಒಂದು ಬಾರಿ ನಾವು ಅದನ್ನು ಮಾಡಿದರೆ ಸುಮಾರು ಐದು ವರ್ಷ ಅದು ಅನುಕೂಲವಾಗುತ್ತದೆ. ಹಾಗೆಯೇ ಆಹಾರ ಸಂಸ್ಕರಣೆ ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ ಅದು ಬಹಳ ಪ್ರಮುಖವಾದ ಬಂಡವಾಳ ಹೂಡತಕ್ಕಂತಹ ವಲಯ. ಅದು ನಮಗೆ ನಿರೀಕ್ಷಿತ ಮಟ್ಟದಲ್ಲಿ ಆಹಾರ ಸಂಸ್ಕರಣೆಗೆ ಬಂಡವಾಳ ಬರುತ್ತಿಲ್ಲ. ಹಾಗಾಗಿ ಅದರ ಬಗ್ಗೆ ನಮ್ಮ ಹಿಂದಿನ ನೀತಿ ಏನಿದೆ, ಆಹಾರ ಸಂಸ್ಕರಣೆ ಬಗ್ಗೆ ನೀತಿಯನ್ನು ಪರಿಷ್ಕರಣೆ ಮಾಡಿ ಹೊಸ ನೀತಿಯನ್ನು ಈ ವರ್ಷ ಜಾರಿ ಮಾಡಬೇಕು, ಹೆಚ್ಚಿನ ಖಾಸಗಿ ಬಂಡವಾಳವನ್ನು ಆಹಾರ ಸಂಸ್ಕರಣೆಯಲ್ಲಿ ಆಕರ್ಷಣೆ ಮಾಡಬೇಕೆನ್ನುವಂತಹ ಉದ್ದೇಶವನ್ನು ಸಹಾ ಈ ವರ್ಷ ಇಟ್ಟುಕೊಂಡಿದ್ದೇವೆ. ಇನ್ನು ಉಳಿದ ಹಾಗೆ ನಾವು ಮಾತನಾಡುವುದಾದರೆ, ಈ ವರ್ಷ ಸ್ವಲ್ಪ ಸಂಕ್ಷಿಪ್ತವಾಗಿ ಇಲ್ಲಿಯವರೆಗೆ ಆಗಿರತಕ್ಕಂತಹ ಬಿತ್ತನೆ

ಪರಿಸ್ಥಿತಿಯನ್ನು ನಾನು ಸಂಕ್ಷಿಪ್ತವಾಗಿ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಮಾನ್ಯ ಮಂತ್ರಿಗಳೆ, if you don't' mind ಆಹಾರ ಸಂಸ್ಕರಣೆ ಬಗ್ಗೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ನಮ್ಮಲ್ಲೇನು ತೊಗರಿ, ಹೆಸರು, ಕಡೆಲ ಇದೆಲ್ಲಾ ಏನು ಈ ಕಡೆ ಬೆಳೆಯುತ್ತಾರೆ, ನೀವೇಕೆ small, small ಇದಕ್ಕೆ ಅವರಿಗೆ minimum rate ನಲ್ಲಿ ಲ್ಯಾಂಡ್ ಕೊಡಿ. ಅವರಿಗೆ ಕರೆಂಟ್ 24 ಗಂಟೆ ಕೊಡಿ. ಪುಕ್ಸಟ್ಟೆ ಕೊಡುವುದು ಬೇಡ. ಕೊನೆ ಪಕ್ಷ ಲ್ಯಾಂಡ್ ಮಿನಿಮಮ್ ರೇಟ್‌ನಲ್ಲಿ ನೀವು ಐದು ಲಕ್ಷಕ್ಕೆ ಖರೀದಿ ಮಾಡುತ್ತೀರಾ? ಐದು ಲಕ್ಷಕ್ಕೆ ಒಂದೊಂದು ಎಕರೆ ನಿಮ್ಮಿಂದ ಪ್ರಾರಂಭವಾಗಲಿ. ಅಂದರೆ rural youths ಗೆ ಸ್ವಲ್ಪ ಅನುಕೂಲವಾಗುತ್ತದೆ. You can think on it. ಇದು ಬಹಳ important ಇದೆ.

ಶ್ರೀ ಕೃಷ್ಣ ಬೈರೇಗೌಡ:- ಖಂಡಿತ. ನಮ್ಮ ಕರ್ನಾಟಕದಲ್ಲಿ Integrated Agri business Development Policy 2011 ರಲ್ಲಿ ಇತ್ತು. ಈಗ ಐದು ವರ್ಷ ಆಗಿದೆ. ಸಾಲದ್ದಕ್ಕೆ ಕೈಗಾರಿಕೆಯವರು ಹೊಸ ಕೈಗಾರಿಕಾ ನೀತಿಯನ್ನು ರಾಜ್ಯದಲ್ಲಿ ಜಾರಿ ಮಾಡಿದ್ದಾರೆ. ಇವೆರಡಕ್ಕೂ ಸೇರಿಸಿ ಹೊಸ ನೀತಿ Agri business Policy ಹೊಸ ನೀತಿಯನ್ನು ಮಾಡುವಂತಹ ಸಂದರ್ಭದಲ್ಲಿ ಈ ವರ್ಷ ಆಗಸ್ಟ್ ಅಷ್ಟು ಹೊತ್ತಿಗೆ ಕರಡು ನೀತಿಯನ್ನು ತಯಾರು ಮಾಡಬೇಕು ಎನ್ನುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ. ಮಾಡುವಂತಹ ಸಂದರ್ಭದಲ್ಲಿ ಇಂತಹ ವಿಚಾರಗಳ ಬಗ್ಗೆಯೂ ಸಹ ಹೆಚ್ಚಿಗೆ ಗಮನ ಕೊಡುತ್ತೇವೆ. ಆದಷ್ಟು ಈ ವರ್ಷ ಹೊಸ ಕೃಷಿ ಆಹಾರ ಸಂಸ್ಕರಣೆ ಬಂಡವಾಳ ನೀತಿಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಈ ವರ್ಷದ ಬಿತ್ತನೆ ಬಗ್ಗೆ ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಜೂನ್ ಕೊನೆಯ ತಿಂಗಳವರೆಗೆ ವಾಡಿಕೆ ಬಿತ್ತನೆ 21 ಲಕ್ಷ ಹೆಕ್ಟೇರ್‌ನಷ್ಟು ವಾಡಿಕೆ ಬಿತ್ತನೆಯಾಗುತ್ತಿತ್ತು. ಈ ವರ್ಷ ಸ್ವಲ್ಪ ಮುಂಗಾರು ಆರಂಭದಲ್ಲಿ ಚೆನ್ನಾಗಿ ಆಗಿದೆ. ಆಗಿರುವುದರಿಂದ ಗುರಿಗಿಂತ ಮೀರಿ ಸುಮಾರು 25 ಲಕ್ಷ 33 ಸಾವಿರ ಹೆಕ್ಟೇರ್‌ನಲ್ಲಿ ಈಗಾಗಲೇ ಬಿತ್ತನೆ ಆಗಿದೆ. ಇಲ್ಲಿಯವರೆಗೆ ಏನು

ನಿರೀಕ್ಷೆ ಇತ್ತು, ನಿರೀಕ್ಷೆಗಿಂತ ಶೇಕಡ 20 ರಷ್ಟು ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ನೀವು ಇಡೀ ರಾಜ್ಯದ ಸರಾಸರಿ ಹೇಳುತ್ತಿದ್ದೀರಿ. ನಮ್ಮ ಭಾಗದಲ್ಲಿ ಅಷ್ಟು ಆಗಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ ಮಳೆಯೇ ಬಂದಿಲ್ಲ.

ಶ್ರೀ ಕೃಷ್ಣ ಬೈರೇಗೌಡ:– ಹೇಳುತ್ತಿದ್ದೇನೆ. ನಾನು ಅದಕ್ಕೇ ಈಗ ಬರುತ್ತಿದ್ದೇನೆ. ಈಗ ಈ ವರ್ಷ ಇಲ್ಲಿಯವರೆವಿಗೂ ಆಗಿರುವ ಮಳೆಯ ಪ್ರಕಾರ ಬಾಂಬೆ ಕರ್ನಾಟಕ ಭಾಗ, ಮಲೆನಾಡು, ಕರಾವಳಿ ಮತ್ತು ದಕ್ಷಿಣ ಭಾಗದಲ್ಲಿ ಸ್ವಲ್ಪ ಸಮರ್ಪಕವಾಗಿ ಮಳೆಯಾಗಿದೆ. ಆದರೆ ನಮ್ಮ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಮಳೆ ಕೊರತೆ ತೀವ್ರವಾಗಿ ಕಾಡುತ್ತಿದ್ದು ಅಲ್ಲಿ ಬಿತ್ತನೆ ಪ್ರಮಾಣ ಕಡಿಮೆಯಿದೆ. ಆದರೆ ಈ ಭಾಗದಲ್ಲಿ ಸ್ವಲ್ಪ ನಿರೀಕ್ಷೆಗಿಂತ ಹೆಚ್ಚು ಬಿತ್ತನೆಯಾಗಿದೆ. ಬಿತ್ತನೆ ಹೆಚ್ಚಿಗೆ ಆಗಿದ್ದರೂ ಸಹ ಈಗ ಮಳೆ ಹಿಂದೆ ಸರಿದಿದೆ. ಈಗ ಬಿತ್ತನೆಯಾಗಿರುವಂಥ ಬೆಳೆಗಳು ಏನು ಆಗುತ್ತದೋ ಎನ್ನುವ ಬಗ್ಗೆ ಇನ್ನೂ ಖಾತರಿಯಿಲ್ಲ. ಏನಾದರೂ ಮುಂದಿನ 15 ದಿನಗಳೊಳಗೆ ಮಳೆಯಾದರೆ ಇರುವಂಥ ಬೆಳೆ ಚೆನ್ನಾಗಿ ಆದರೆ ಈ ವರ್ಷ ನಮಗೆ ಒಳ್ಳೆಯ ಬೆಳೆಗಳು ನಮ್ಮ ಕೈಗೆ ಬರುತ್ತವೆ. ಆದರೆ ಈಗ ಮಳೆ ಹಿಂದಕ್ಕೆ ಸರಿದಿರುವುದರಿಂದ ಅದರ ಬಗ್ಗೆ ನಾವು ಈಗ watch ಮಾಡುತ್ತಿದ್ದೇವೆ. ನೋಡೋಣ, ಪರ್ಯಾಯವಾಗಿ contingency plan ಅನ್ನು ಕೂಡ ನಾವು ತಯಾರು ಮಾಡಿಕಂಡಿದ್ದೇವೆ. ಅದಕ್ಕೆ dry spell ಆಗಿ ಪರ್ಯಾಯ ಬೆಳೆಗಳನ್ನು ತೆಗೆದುಕೊಳ್ಳಬೇಕಾದಂಥ ಸಂದರ್ಭದಲ್ಲಿ ಹೋಬಳಿ ಮಟ್ಟದಲ್ಲಿ ಪರ್ಯಾಯ ಯೋಜನೆಯನ್ನು ಸಹ ನಾವು ಮಾಡಿಕೊಂಡಿದ್ದೇವೆ. ಅಂಥ ಸಂದರ್ಭದಲ್ಲಿ ಅದನ್ನು ನಾವು ಚಾಲನೆ ಮಾಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಈ ವರ್ಷ ಸಾವಯವ ಕೃಷಿಯಲ್ಲಿ ನಾವು ಪ್ರತಿಯೊಂದು ಹೋಬಳಿಯಲ್ಲಿಯೂ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಂಡು ಸಾವಯವ ಕೃಷಿಗೆ ಪ್ರೋತ್ಸಾಹ ಕೊಡತಕ್ಕಂಥದ್ದನ್ನು ಆರಂಭ ಮಾಡಿದ್ದೇವೆ. ಮುಂದುವರೆದ ಭಾಗವಾಗಿ ಸಾವಯವ ಕೃಷಿಯ

ಗ್ರಾಮಗಳೇನಿವೆ, ಅಲ್ಲಿ ಕೃಷಿಕರೇನಿದ್ದಾರೆ, ಅವರಿಗೆ ಮಾರುಕಟ್ಟೆಯನ್ನು ನಾವು ಕೊಡಬೇಕು. ಮಾರುಕಟ್ಟೆ ಕೊಡದೇ ಹೋದರೆ ಕೇವಲ ಸಾವಯವ ಕೃಷಿ ಪದಾರ್ಥಗಳನ್ನು ಬೆಳೆಯಿರಿ ಎಂದು ಹೇಳಿಬಿಟ್ಟರೆ ಅದರಿಂದ ಪ್ರಯೋಜನವಾಗುವುದಿಲ್ಲ. ಹೀಗಾಗಿ ಈ ವರ್ಷ ಅವುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದಕ್ಕೆ ನಾವು ಇದನ್ನು ಆದ್ಯತೆಯನ್ನಾಗಿ ತೆಗೆದುಕೊಂಡಿದ್ದೇವೆ. ಸಾವಯವ ಕೃಷಿಕರ ಒಕ್ಕೂಟವನ್ನು ರಚನೆ ಮಾಡಿ ಆ ಒಕ್ಕೂಟದ ಮುಖಾಂತರ ಅವರಿಗೆ ಬೇಕಾದಂಥ ಬಂಡವಾಳವನ್ನು ಸರ್ಕಾರ ಹೂಡಿ ಅವರಿಗೆ ನಗರ ಪ್ರದೇಶದಲ್ಲಿ ಮಾರುಕಟ್ಟೆಗಳ ಜೊತೆಗೆ ಸಂಪರ್ಕವನ್ನು ಕಲ್ಪಿಸಿಕೊಡತಕ್ಕಂಥ, ಅಂದರೆ ಏನು ಬೆಳೆಗಾರರ ಒಕ್ಕೂಟ, ಅದರಲ್ಲಿ ಸಾವಯವ ಬೆಳೆಗಾರರ ಒಕ್ಕೂಟಗಳನ್ನು ರಚನೆ ಮಾಡಿ ಅವರಿಗೆ ಮಾರುಕಟ್ಟೆ ಸಂಬಂಧವನ್ನು ಒದಗಿಸಿಕೊಡುವುದಕ್ಕೆ ಈ ವರ್ಷ ಸುಮಾರು 40 ಕೋಟಿ ರೂ. ಗಳ ಪ್ರಸ್ತಾವನೆಯನ್ನು ಮಾಡಿಕೊಂಡಿದ್ದೇವೆ.

ಶ್ರೀ ಜೆ.ಟಿ. ಪಾಟೀಲ್:- ಬೈರೇಗೌಡರೆ, ಅತ್ಯಂತ ಒಳ್ಳೆಯ ವಿಚಾರವನ್ನು ತಾವು ಈಗ ಹೇಳಿದಿರಿ. ಪ್ರಬಲವಾಗಿ ಇದು implement ಆಗುವಂತೆ ತಾವು ನೋಡಿಕೊಳ್ಳಿ.

ಶ್ರೀ ಕೃಷ್ಣ ಬೈರೇಗೌಡ:- ಅವರಿಗೆ ಹೆಚ್ಚಿಗೆ ಮಾರುಕಟ್ಟೆಯ ಸಂಪರ್ಕವನ್ನು ನಾವು ಕಲ್ಪಿಸಿಕೊಡಲಿಲ್ಲವೆಂದರೆ ಏನೇ ನಾವು ಸಾವಯವ ಕೃಷಿಗೆ ಉತ್ತೇಜನವನ್ನು ಕೊಟ್ಟರೂ ಕೂಡ ಮಾರುಕಟ್ಟೆ ಸಿಗಲಿಲ್ಲವೆಂದರೆ ಇದನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಕಾರಣಕ್ಕಾಗಿ ಮಾರುಕಟ್ಟೆ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಅವರ ಒಕ್ಕೂಟ ರಚನೆ, ಅದಕ್ಕೆ ಬೇಕಾದಂಥ cold chain facilities, market facilitie, ಇಂಥದ್ದನ್ನು ಮಾಡುವುದಕ್ಕೆ ಸುಮಾರು 40 ಕೋಟಿ ರೂ. ಗಳ ಪ್ರಸ್ತಾವನೆಯನ್ನು ಈ ವರ್ಷ ಇಟ್ಟುಕೊಂಡಿದ್ದೇವೆ. ತೋಟಗಾರಿಕೆ ಇಲಾಖೆಯ ಮುಖಾಂತರವಾಗಿ ಬೆಳೆಗಾರರ ಒಕ್ಕೂಟ, ಅಂದರೆ Farmer Producer Organizations ಎಂದು 58 F.P.O. ಗಳನ್ನು ರಚನೆ ಮಾಡತಕ್ಕಂಥದ್ದನ್ನು ತೋಟಗಾರಿಕಾ ಇಲಾಖೆಯ ಮುಖಾಂತರ ಮಾಡುತ್ತಿದ್ದೇವೆ. ಅದರಲ್ಲಿ ಒಂದೊಂದು F.P.O. ನಲ್ಲಿ

ಸುಮಾರು ಒಂದು ಸಾವಿರ ಸದಸ್ಯರು ಇರತಕ್ಕಂಥ ಕಂಪನಿಗಳನ್ನು ರಚನೆ ಮಾಡುತ್ತೇವೆ. ಅದರಲ್ಲಿ Farmer Interest Groups ಸಹ ಇರುತ್ತವೆ. ಒಟ್ಟಾರೆ ಅವುಗಳಿಗೆ ಬೇಕಾದಂಥ ಬಂಡವಾಳವಾಗಲಿ, ಅವರಿಗೆ ಬೇಕಾದಂಥ ತರಬೇತಿ, ಅಂದರೆ management training ಹಾಗೂ cold chain facility ಇಂಥ ಎಲ್ಲಾ ಸೌಲಭ್ಯಗಳನ್ನು ಸರ್ಕಾರದ ವತಿಯಿಂದ ಅವರಿಗೆ ಕೊಟ್ಟು ರೈತರಿಗೆ bargaining power ಬರಬೇಕು, ಅದು ಯಾವಾಗ ಬರುತ್ತದೆಂದರೆ ರೈತರು ಸಂಘಟಿತರಾದರೆ ಮಾತ್ರ ಬರುತ್ತದೆ. ಒಬ್ಬೊಬ್ಬ ರೈತ ಹೋಗಿ ಮಾರುಕಟ್ಟೆಯಲ್ಲಿ ಚೌಕಾಸಿ ಮಾಡಿದರೆ ಅವನಿಗೆ ಅಷ್ಟೊಂದು ಮಾನ್ಯತೆ ಸಿಗುವುದಿಲ್ಲ. ಹೀಗಾಗಿ ಅವರ ಒಕ್ಕೂಟಗಳನ್ನು ರಚನೆ ಮಾಡಿ ಅವರಿಗೆ ಶಕ್ತಿಯನ್ನು ತುಂಬಿ ಅದರ ಮುಖಾಂತರವಾಗಿ ಮಾಡಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶ. ಅವರಿಗೆ ಕೇವಲ ಮಾರುಕಟ್ಟೆ ಲಿಂಕೇಜ್‌ಗಳನ್ನು ಕೊಡುವುದಷ್ಟೇ ಅಲ್ಲ, ರಸಗೊಬ್ಬರಗಳನ್ನು ಮಾರತಕ್ಕಂಥ ಲೈಸೆನ್ಸ್‌ನ್ನು ಅವರಿಗೆ ಕೊಡುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡುತ್ತಾ ಅವರ ಬಿತ್ತನೆ ಬೀಜವನ್ನು ಅವರೇ ತಯಾರು ಮಾಡತಕ್ಕಂಥ ವ್ಯವಸ್ಥೆಯನ್ನು ಜಾರಿ ಮಾಡಬೇಕೆಂದರು. ಅದಕ್ಕೆ ಪೂರಕವಗಿ ಅವರಿಗೆ ಬೇಕಾದಂಥ ಬಿತ್ತನೆ ಬೀಜವನ್ನು ಅವರೇ ತಯಾರು ಮಾಡಿಕೊಳ್ಳತಕ್ಕಂಥ ಸಾಮರ್ಥ್ಯ, ಅದಕ್ಕೆ ಬೇಕಾದಂಥ ಬಂಡವಾಳ ಮತ್ತು ತರಬೇತಿ, ಇವುಗಳನ್ನು ಸಹ ಬೆಳೆಗಾರರ ಒಕ್ಕೂಟಗಳಿಗೆ ಕೊಡತಕ್ಕಂಥದ್ದು. ಇದರ ಜೊತೆಗೆ F.P.O. ಗಳಿಗೆ APMC license ಅನ್ನು ಸಹ ಅವರಿಗೆ ನಾವೇ ಕೊಡುತ್ತೇವೆ. ಅವರಿಗೆ working capital arrangement ಆಗಿ 50 ಲಕ್ಷ ರೂ. ಗಳನ್ನು ಪ್ರತಿ ಬೆಳೆಗಾರರ ಒಕ್ಕೂಟಕ್ಕೆ ಕೊಡುತ್ತೇವೆ. ಇದರೊಂದಿಗೆ 90% subsidy, ಯಾವುದರ ಮೇಲೆಂದರೆ ಗೋದಾಮು ಮೇಲೆ, refer van ಮೇಲೆ, cold storage, procurement centers, ಅವರಿಗೆ ಬೇಕಾದಂಥ mechanical equipment ಇಂಥದ್ದರ ಮೇಲೆ ಸುಮಾರು 90% ಅವರಿಗೆ ಸಹಾಯಧನವನ್ನು ಕೊಡತ್ತಕ್ಕಂಥದ್ದನ್ನು ಇದರ ಮುಖಾಂತರವಾಗಿ ರೈತರ ಒಕ್ಕೂಟಗಳನ್ನು ರಚನೆ ಮಾಡಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅವರಿಗೆ ಶಕ್ತಿಯನ್ನು ತುಂಬತಕ್ಕಂಥ ಕೆಲಸವನ್ನು ಈ ವರ್ಷ ತೋಟಗಾರಿಕಾ ಇಲಾಖೆಯ ಮುಖಾಂತರ ನಾವು

ಹಮ್ಮಿಕೊಳ್ಳುತ್ತಿದ್ದೇವೆ. ಅಷ್ಟೇ ಅಲ್ಲ, ಇವತ್ತು organized retail ಇದೆ, ಬೆಂಗಳೂರಿನಲ್ಲಿ, ನಗರ ಪ್ರದೇಶಗಳಲ್ಲಿ ರಿಲಯನ್ಸ್ ಆಗಬಹುದು, ಗೋದ್ರೇಜ್ ಆಗಬಹುದು, ಹೀಗೆ ಅನೇಕ retail ಗಳಿವೆ. ಅವರ ಜೊತೆಗೆ ಇವರಿಗೆ ಸಂಪರ್ಕವನ್ನು ಕೂಡ ಮಾಡಿಸಿಕೊಡುತ್ತೇವೆ. ಹೀಗಾಗಿ ಆ corporate chain ಜೊತೆಗೆ ಇವರಿಗೆ ಸಂಪರ್ಕವನ್ನು ಬೆಳೆಸಿಕೊಟ್ಟು ರೈತರು ಬೆಳೆದ ಪದಾರ್ಥಗಳಿಗೆ ಮಾರುಕಟ್ಟೆ ಸಿಗುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. FPO ಗಳನ್ನು ಮಾಡುವುದು, ಇದರ ಜೊತೆಗೆ ಅವರಿಗೆ ಮಾರುಕಟ್ಟೆ ಒದಗಿಸಲು public private partnership ನಲ್ಲಿ Integrated Horticulture Development program ಗೆ ಸುಮಾರು 10 ಕೋಟಿ ರೂ. ಗಳನ್ನು, ಅದಕ್ಕೂ ಸಹ ತೋಟಗಾರಿಕಾ ಇಲಾಖೆಯಲ್ಲಿ ಕಾದಿರಿಸಿಕೊಂಡಿದ್ದೇವೆ. ಇನ್ನೊಂದೂ ವಿಷಯವೆಂದರೆ ಈ ವರ್ಷ ನಾವು ಕೃಷಿ ಇಲಾಖೆಯಲ್ಲಿ ಮಣ್ಣಿನ ಆರೋಗ್ಯದ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಜೆ.ಟಿ. ಪಾಟೀಲ್‌ರವರು ಮಾತನಡುವಾಗ ಮಣ್ಣಿನ ಆರೋಗ್ಯದ ಬಗ್ಗೆ ಹೇಳಿದರು. ಅವರ ಕ್ಷೇತ್ರದಲ್ಲಿ ಸುಮಾರು ಸಾವಿರ ರೈತರಿಗೆ ಅವರೇ ಮಣ್ಣಿನ ಆರೋಗ್ಯದ ಕಾರ್ಡನ್ನು ಕೊಟ್ಟಿದ್ದೇವೆಂದು ಹೇಳಿದರು. ಈ ಕಾರ್ಯಕ್ರಮವನ್ನು ನಾವು ಹೋದ ವರ್ಷವೇ ಕೈಗೆತ್ತಿಕೊಂಡೆವು. ನಾವು ಸಹ ರಾಜ್ಯದ ಎಲ್ಲಾ ರೈತರಿಗೆ ಮುಂದಿನ ಮೂರು ವರ್ಷದೊಳಗೆ ಮಣ್ಣು ಆರೋಗ್ಯ ಕಾರ್ಡ್‌ನ್ನು ನಮ್ಮ ಕಡೆಯಿಂದಲೇ ಕೊಡಬೇಕು ಎನ್ನತಕ್ಕಂಥದ್ದು ನಮ್ಮ ಸರ್ಕಾರದ ಉದ್ದೇಶವಾಗಿದೆ. ನಾವೇ soil tet ಮಾಡಿ soil analysis ಮಾಡಿ ಮಣ್ಣಿನ sample ತೆಗೆದುಕೊಂಡು ಪರೀಕ್ಷೆ ಮಾಡಿ,,

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- Soil health card ಎಂದು ಕೊಡಬೇಕು.

ಶ್ರೀ ಕೃಷ್ಣ ಬೈರೇಗೌಡ:- ಹೌದು, ಅದನ್ನೇ ಕೊಡಬೇಕೆಂದಿರುವುದು. ಇದನ್ನು ನಾವು ಈ ವರ್ಷ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರೂ ಕೂಡ ಕಳೆದ ವರ್ಷವೇ ಆ ಕಾರ್ಯಕ್ರಮಕ್ಕೆ ನಾವು ಕೈಹಾಕಿದ್ದೆವು. ಅದಕ್ಕೆ ಟೆಂಡರ್‌ನ್ನು ಕರೆದಿದ್ದೆವವು. ಟೆಂಡರ್‌ನಲ್ಲಿ ಬಹಳ ದುಬಾರಿ ದರಗಳು ಬಂದಿದ್ದರಿಂದ ಟೆಂಡರ್‌ನ್ನು ರದ್ದು ಮಾಡಿ ಈಗ ನಾವು ಮತ್ತೆ ಜಿಲ್ಲಾವಾರು

ಟೆಂಡರ್‌ನ್ನು ಕರೆದಿದ್ದೇವೆ. So, ಅದು ಬಹುಶಃ ನಮಗೆ ಕೇಂದ್ರ ಸರ್ಕಾರ ನಮ್ಮ ಅಂದಾಜಿನ ಪ್ರಕಾರ ಟೆಂಡರ್ ಬಂದರೆ ಇನ್ನು ಕೆಲವೇ ತಿಂಗಳಲ್ಲಿ ಈ ಕೆಲಸವನ್ನು ಆರಂಭ ಮಾಡುತ್ತೇವೆ. ರಾಜ್ಯದ ಎಲ್ಲಾ ಭಾಗಗಳಲ್ಲಿ ಮಣ್ಣಿನ ಒಂದು sample ಅನ್ನು ತೆಗೆದುಕೊಂಡು ನಾವೇ ...

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಬೈರೇಗೌಡರೆ, ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಕೆಲವರು ಈ ಪಿಡಬ್ಲ್ಯೂಡಿ, ಕೆಲವು building contractor ಆಂಧ್ರದಿಂದ ಬಂದು ಸ್ಥಳೀಯರಿಂದ ಕೆಲಸ ಮಾಡಿಸುತ್ತಿದ್ದಾರೆ. ಇದು ಈ ಸಂದರ್ಭದಲ್ಲಿ ಆ ರೀತಿ ಆಗಲಾರದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು. ಸ್ಥಳೀಯವಾಗಿಯೇ ಏನು instruments, infrastructure ಇದೆಯೋ ಅದನ್ನು ನೋಡಿಕೊಂಡು ಅಂಥವರಿಗೆ ಆ ಜಿಲ್ಲೆಯೊಳಗೆ ಕೊಟ್ಟರೆ ಇನ್ನು ಹೆಚ್ಚು ನಿಮ್ಮ ಈ ಕಾರ್ಯಕ್ರಮ ಯಶಸ್ವಿಯಾಗಬಹುದು ಮತ್ತು ಅದರ ಮೇಲೆ ಕೂಡ control ಇರಬೇಕು.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಛೇರ್ಮನ್‌ರವರೆ, ಈ ವರ್ಷ ಈ ಕಾರ್ಯಕ್ರಮವನ್ನು ಬಹಳ ಪ್ರಮುಖವಾಗಿ ನಾವು ತೆಗೆದುಕೊಂಡಿದ್ದೇವೆ. ಈಗಾಗಲೇ ಇದು ಅನುಷ್ಠಾನವಾಗಬೇಕಾಗಿತ್ತು, ಪ್ರಾರಂಭದಲ್ಲಿ ಸ್ವಲ್ಪ ತಡವಾಗಿದೆ. ಈ ವರ್ಷ ಇದನ್ನು ಅನುಷ್ಠಾನ ಮಾಡಿ ಮುಂದಿನ ಮೂರು ವರ್ಷದೊಳಗೆ ರಾಜ್ಯದ ಎಲ್ಲಾ ರೈತರಿಗೆ ಮಣ್ಣು ಆರೋಗ್ಯ ಚೀಟಿ, soil health card ಅನ್ನು ನಮ್ಮ ಕಡೆಯಿಂದಲೇ ವಿತರಣೆ ಮಾಡತಕ್ಕಂಥ ಕಾರ್ಯಕ್ರಮವಿದಾಗಿದೆ. ಇದಕ್ಕೆ ಈ ವರ್ಷದ ಆಯವ್ಯಯದಲ್ಲಿ ಸುಮಾರು 35 ಕೋಟಿ ರೂ. ಗಳನ್ನು ನಾವು ಪ್ರಸ್ತಾಪಿಸಿಕೊಂಡಿದ್ದೇವೆ.

(ಈ ಹಂತದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಸಭಾಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಮಾನ್ಯ ಅಧ್ಯಕ್ಷರೆ, ಹೀಗೆಯೆ ಮುಂದುವರೆದು ಈ ವರ್ಷ ನಾವು ಕೈಗೆತ್ತಿಕೊಂಡಿರುವ ಮತ್ತೊಂದು ಪ್ರಮುಖ ಕಾರ್ಯಕ್ರಮವೆಂದರೆ ಕೃಷಿ

ಅಭಿಯಾನ. ಅನೇಕ ಶಾಸಕರು ಮಾತನಾಡುತ್ತಾ ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅನೇಕ ಮಾನ್ಯ ಸದಸ್ಯರುಗಳ ಅಭಿಪ್ರಾಯವಿದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಅನೇಕ ಸಭೆ ಸಮಾರಂಭಗಳಲ್ಲಿ ಹೇಳಿದ್ದು, ಈ ಕೃಷಿ ಸಂಬಂಧಿತ ಇಲಾಖೆಗಳೇನಿವೆ, ಅವು ರೈತರ ಹತ್ತಿರ ಇರುವುದಕ್ಕಿಂತ ಕಛೇರಿಗಳಿಗೆ ಸೀಮಿತವಾಗಿಬಿಟ್ಟಿವೆ ಎನ್ನುವಂಥದ್ದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು. ಆ ಕಾರಣದಿಂದ ಇದನ್ನು ಬದಲಾವಣೆ ಮಾಡಿ ಕೃಷಿ ಸಂಬಂಧಿತ ಇಲಾಖೆಗಳ ರೈತರ ಹತ್ತಿರವಿರಬೇಕು. ಇವು ಮೂಲವಾಗಿ ವಿಸ್ತರಣಾ ಚಟುವಟಿಕೆಗಳನ್ನು ಮಾಡುವುದಕ್ಕೆ ಸೃಷ್ಟಿಯಾಗಿದ್ದು. ಆದರೆ ಇತ್ತೀಚಿನ ವರ್ಷಗಳಲ್ಲಿ ಬರಿ ಬಿತ್ತನೆ ಬೀಜ, ಗೊಬ್ಬರ ಮಾರಾಟ ಮಾಡುವುದಕ್ಕೆ ಅಷ್ಟೆ ಸೀಮಿತವಾಗಿರತಕ್ಕಂಥಾದ್ದು ಸಮಂಜಸವಲ್ಲ ಎಂದು ನಾವು ತೀರ್ಮಾನವನ್ನು ಮಾಡಿ, ಈ ಕೃಷಿ ಇಲಾಖೆಗಳನ್ನು ಮತ್ತೆ ವಿಸ್ತರಣೆಯ ಕಡೆಗೆ ತೆಗೆದುಕೊಂಡು ಹೋಗಬೇಕು ಎನ್ನುವಂತಹ ತೀರ್ಮಾನವನ್ನು ಮಾಡಿ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ನಾವು ಚಾಲನೆ ಕೊಟ್ಟಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ವಿಸ್ತರಣೆ ಏನೇನು ಮಾಡುತ್ತೀರೆಂದು ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ನೀವು ಕೇಳಿಸಿಕೊಂಡರೆ ಹೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಾವು ಅದಕ್ಕೆ ಕುಳಿತುಕೊಂಡಿದ್ದೇವೆ, ಕೇಳಿಸಿಕೊಳ್ಳುತ್ತೇವೆ.

ಶ್ರೀ ಕೃಷ್ಣ ಬೈರೇಗೌಡ:- ಈ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ನಾವು ಮೊದಲನೆ ವರ್ಷ ಹೋಬಳಿ ಮಟ್ಟದಲ್ಲಿ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಸ್ತರಿಸಬೇಕೆಂದು ಯೋಜನೆ ಇದ್ದು, ಇಲ್ಲಿ ಮಾಡಿದ ಕಾರ್ಯಕ್ರಮ ಹೇಗೆ ಆಗುತ್ತದೆ ಎಂದು ನೋಡಿಕೊಂಡು ಹಳ್ಳಿ ಮಟ್ಟಕ್ಕೂ ವಿಸ್ತರಣೆ ಮಾಡಬೇಕೆಂದು ನಮ್ಮ ಉದ್ದೇಶ ಇದೆ. ಅದರ ಬಗ್ಗೆ ನೋಡೋಣ. ಆದರೆ ಪಂಚಾಯಿತಿ ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಕೃಷಿ

ಇಲಾಖೆ, ತೋಟಗಾರಿಕೆ, ಪಶುಸಂಗೋಪನೆ, ಸಹಕಾರ ಇಲಾಖೆ, ರೇಷ್ಮೆ ಇಲಾಖೆ, ಈ ಎಲ್ಲಾ ಇಲಾಖೆಗಳು ಕೂಡಿಕೊಂಡು ಪ್ರತಿ ಹೋಬಳಿ ಮಟ್ಟದಲ್ಲಿ ರೈತರ ಜೊತೆಗೆ ಸಂಪರ್ಕ ಸಭೆಗಳನ್ನು ಮಾಡಬೇಕು. ಇದನ್ನು ಮಾಡುವುದು ಏಕೆಂದರೆ ಅನೇಕ ತಂತ್ರಜ್ಞಾನಗಳು ನಮ್ಮ ಕೃಷಿ ವಿಶ್ವವಿದ್ಯಾಲಯದಲ್ಲಿವೆ ಹಾಗೂ ಕೃಷಿ ಇಲಾಖೆಯೊಳಗಡೆ ಇವೆ. ಈ ಎಲ್ಲಾ ತಂತ್ರಜ್ಞಾನಗಳು ರೈತರಿಗೆ ತಲುಪಿಯೇ ಇಲ್ಲ. ಈ ಅಭಿಯಾನದ ಮೂಲ ಉದ್ದೇಶ ಈ ತಂತ್ರಜ್ಞಾನಗಳು ರೈತರಿಗೆ ವರ್ಗಾವಣೆಯಾಗಬೇಕು. ಇದರಲ್ಲಿ ವಿಶ್ವವಿದ್ಯಾಲಯದವರನ್ನು ಸಹ ಕಡ್ಡಾಯವಾಗಿ ಭಾಗವಹಿಸುವಂತೆ ನಾವು ಮಾಡಿದ್ದೇವೆ. ಪ್ರತಿ ಹೋಬಳಿ ಮಟ್ಟಕ್ಕೆ, ಪಂಚಾಯಿತಿ ಮಟ್ಟಕ್ಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸಹ ಬರಬೇಕು, ಈ ಎಲ್ಲಾ ಇಲಾಖೆ ಅಧಿಕಾರಿಗಳು ಕೂಡಿಕೊಂಡು ಅಲ್ಲಿ ಹೋಗಿ ರೈತರ ಜೊತೆಗೆ ಸಂವಾದ ಕಾರ್ಯಕ್ರಮ ಮಾಡಬೇಕು, ಇಲಾಖೆಯ ಕಾರ್ಯಕ್ರಮಗಳನ್ನು ರೈತರಿಗೆ ತಿಳಿಸಬೇಕು. ಸಬ್ಸಿಡಿ ಪ್ರೋಗ್ರಾಂಗಳು ಎಲ್ಲೋ ಆಫೀಸ್ ಒಳಗಡೆ ತೀರ್ಮಾನವಾಗುವುದಲ್ಲ. ಅದು ಜನಗಳಿಗೂ ಗೊತ್ತಾಗಬೇಕು ಹಾಗೂ ಅಲ್ಲಿ ತಂತ್ರಜ್ಞಾನದ ಬಗ್ಗೆ ಸಹ ಚರ್ಚೆಯಾಗಬೇಕು. ಅದರ ಮುಖಾಂತರ ವಿಸ್ತರಣಾ ಚಟುವಟಿಕೆಯಾಗಬೇಕೆನ್ನುವುದು ಇದರ ಉದ್ದೇಶವಾಗಿದೆ. ಈ ವರ್ಷ ಇದರ ಆರಂಭವನ್ನು ಮಾಡಿದ್ದೇವೆ. ಅದನ್ನು ಇನ್ನಷ್ಟು ಸುಧಾರಣೆ ಮಾಡಿ, ಇನ್ನಷ್ಟು ಸಮರ್ಪಕವಾಗಿ ವಿಸ್ತರಣೆಯ ಕಡೆಗೆ ಹೋಗತಕ್ಕಂಥ ದಿಕ್ಕಿನಲ್ಲಿ ಮಾಡಬೇಕಾಗಿದೆ. ನಮ್ಮ ಅಧಿಕಾರಿಗಳಿಗೆ ಏನಾಗಿದೆ ಎಂದರೆ ನೀವು extension ಮಾಡಬೇಕೆಂದರೆ ಹೌದು ಸಾರ್ ಎಂದು ಹೇಳುತ್ತಾರೆ. ಒಂದು ಕಾರ್ಯಕ್ರಮ ಕೊಡುವವರೆಗೂ ಅವರಿಗೂ ಸಹ ಆ ಕಡೆಗೆ ಹೋಗುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ಸ್ಪಷ್ಟ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ. ಇದನ್ನು ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರು ಸಂದರ್ಭದಲ್ಲಿ ಕಡ್ಡಾಯವಾಗಿ ನಮ್ಮ ಮತ್ತು ಎಲ್ಲಾ ಇಲಾಖೆಗಳ ಸಹಕಾರದಿಂದ ಈ ಕಾರ್ಯಕ್ರಮವನ್ನು ಈ ವರ್ಷದಿಂದ ಕೈಗೆತ್ತಿಕೊಂಡಿದ್ದೇವೆ. "ಇಲಾಖೆಗಳ ನಡಿಗೆ, ರೈತರ ಬಳಿಗೆ" ಎನ್ನುವ ರೀತಿಯಲ್ಲಿ ನಮ್ಮ ಸರ್ಕಾರದ ಉದ್ದೇಶ ಆಗಿದೆ. ಕೃಷಿ ಸಂಬಂಧಿತ ಇಲಾಖೆಗಳು ಕಛೇರಿಯಲ್ಲಿ ಕುಳಿತು ಕೆಲಸ ಮಾಡುವುದಲ್ಲ. ರೈತರ ಹತ್ತಿರ

ಹೋಗಿ ಕೆಲಸ ಮಾಡಬೇಕೆನ್ನುವುದನ್ನು ಈ ವರ್ಷದಿಂದ ಆರಂಭ ಮಾಡಿದ್ದೇವೆ. ಇದರಲ್ಲಿ ವಿಶ್ವವಿದ್ಯಾಲಯಗಳನ್ನು ಕೂಡ ತೊಡಗಿಸಿಕೊಂಡಿದ್ದೇವೆ. ಇದರಲ್ಲಿ ಕೆಲವು ಶಾಸಕರು ಭಾಗವಹಿಸಿದ್ದಾರೆ. ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕೆನ್ನುವ ಬಗ್ಗೆ ನಿಮ್ಮ ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಿದ್ದು, ನಾವು ಸದಾಕಾಲ ನಮ್ಮ ಮನಸ್ಸನ್ನು ತೆರೆದಿರುತ್ತೇವೆ. ಇದು ಇನ್ನೂ ಸುಧಾರಣೆಯಾಗಬೇಕೆನ್ನುವುದು ಗೊತ್ತಿದೆ. ಆದರೆ ನಾವು ಅದಕ್ಕೆ ತಯಾರಿದ್ದೇವೆ ಎಂದು ತಮ್ಮ ಮುಖಾಂತರ ಎಲ್ಲರಿಗೂ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಸಭೆ ಇತ್ತು, ಅದಕ್ಕೆ ನಾನು ಹೋಗಿದ್ದೆ. ಅಲ್ಲಿ ಏನು ಮಾಡಿದರು ಎಂದರೆ ಒಂದು ಟ್ಯಾಬ್ಲೊ ಕರೆದುಕೊಂಡು ಬಂದಿದ್ದರು. ಒಂದು ರಥ ಬಿಟ್ಟರು. ಅಲ್ಲಿ ಯಾರೂ ಕೂಡ ನಿಜವಾದ ರೈತರು ಬಂದಿರಲಿಲ್ಲ. ನಿಮ್ಮ ಅನುವುಗಾರರು ಕಳಸ ಹೊತ್ತಿದ್ದರು. ಇದು ಒಂದು ರೀತಿ ಜೋಕ್ ಆಗುತ್ತದೆ. ಕೃಷಿ ಇಲಾಖೆಯಲ್ಲಿ ಮಹತ್ತರವಾದಂತಹ ವಿಚಾರಗಳು ಸವಲತ್ತುಗಳು ರೈತ ಸಮುದಾಯಕ್ಕೆ ಸಿಗುತ್ತದೆ ಎಂದರೆ ಸಾಕು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಉದಾಹರಣೆಗೆ ಆಧಾರ್ ಕಾರ್ಡು ಕೊಡುತ್ತೇವೆಂದರೆ ರಾತ್ರಿ ನಾಲ್ಕು ಗಂಟೆಗೆ ಬಂದು ಕ್ಯೂ ನಿಂತುಕೊಂಡು ಅಲ್ಲಿಯೇ ಮಲಗಿಕೊಂಡು ಕಾಯುತ್ತಿರುತ್ತಾರೆ. ಯಾವಾಗಲೂ ರೈತರು ಉಪಯುಕ್ತತೆಯನ್ನು ಬಯಸುತ್ತಾರೆ. ನೀವು ಸಬ್ಸಿಡಿಯಲ್ಲಿ ರಾಗಿ ಕೊಡುತ್ತೇವೆ, ಎಷ್ಟು ಹೆಕ್ಟೇರ್‌ಗೆ ಕೊಡುತ್ತೇವೆಂದು ಹೇಳುತ್ತೀರಿ. ನಮಗೆ ಬೇಕಾಗಿರುವಂತೆ 1/4% ಅಥವಾ 10% ಕೊಡುವುದಿಲ್ಲ. ನಾವು ಏನು ಮಾಡುತ್ತೇವೆಂದರೆ ಈ ಊರಿನವರಿಗೆ ಕೊಟ್ಟರೆ ಆ ಊರಿನವರಿಗೆ against, ಆ ಊರಿನವರಿಗೆ ಕೊಟ್ಟರೆ ಈ ಊರಿನವರಿಗೆ against ಆಗಬೇಕು, ಒಂದೇ ಊರಿನಲ್ಲಿ ಎರಡು ಭಾಗವಾದರೆ ನಾವು ಹೋದಾಗ ಮಾತನಾಡಿಸುವುದಿಲ್ಲ, ಮರ್ಯಾದೆ ಕೊಡುವುದಿಲ್ಲವೆಂದು ಹೇಳಿ, ಆ ಕಾರ್ಯಕ್ರಮಗಳಿಗೆ involvement ಆಗುವುದಕ್ಕೆ ಹೋಗುವುದಿಲ್ಲ. ಆಗ ಎಲ್ಲೋ ಒಂದು ಕಡೆ ಸವಲತ್ತುಗಳು ಕಡಿಮೆಯಾದಾಗ ರೈತರು ಕೃಷಿ

ಇಲಾಖೆಯನ್ನು ಮರೆಯುತ್ತಾರೆ. ನೀವು ಈಗ ತರಬೇಕು ಎಂದು ಹೊರಟಿದ್ದೀರಿ, ನೀವು ರೈತರಿಗೆ ಸವಲತ್ತುಗಳನ್ನು ಹೆಚ್ಚಿನ ಮಟ್ಟದಲ್ಲಿ, ಆಧುನಿಕವಾಗಿ, ಅತೀ ಅವಶ್ಯಕವಾಗಿ, ದಿನ ನಿತ್ಯ ಜೀವನದಲ್ಲಿ ಅವತ್ತಿನ ವ್ಯವಸ್ಥೆಗೆ ತಕ್ಕದಾದಂಥ ಅಥವಾ ಪೂರ್ವ ಯೋಜಿತವಾದಂತಹ ಗುರಿ ಮುಟ್ಟುವಂತಹ ಯೋಜನೆಗಳು ಏನಿವೆ, ನಾವು ಇದನ್ನು ಮಾಡಿದರೆ ಮುಂದಿನ ಐದು ವರ್ಷದಲ್ಲಿ ಒಂದು ಗುರಿ ಇದೆ ಎನ್ನುವಂತಹ ಭಾವನೆ ಮೂಡುವಂತಹ ಕಾರ್ಯಕ್ರಮಗಳನ್ನು ನೀವು ಅನುಷ್ಠಾನಕ್ಕೆ ತಂದರೆ ನಿಜವಾಗಲೂ ರೈತರ ವ್ಯವಸಾಯದ ಕಡೆಗೆ ಬರುತ್ತಾರೆ. ಅವರು ವ್ಯವಸಾಯ ಬಿಟ್ಟು ಇನ್ನೇನು ಮಾಡುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯನ್ನು ಇಟ್ಟುಕೊಂಡು ಕಾರ್ಯಕ್ರಮವನ್ನು ಮಾಡಿ. ನಿನ್ನೆ ನಾನು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವುದಕ್ಕೆ ಹೋಗಿದ್ದೆ. ಈ ರೀತಿ ತಮಟೆ ಬಡಿದುಕೊಂಡು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಅದನ್ನು ನೋಡಿ ನನಗೆ ಬೇಜಾರಾಯಿತು. ನಮ್ಮ ಸಲಹೆ ಏನೆಂದರೆ ಸವಲತ್ತುಗಳನ್ನು ಕೊಡಿ, ಹೆಚ್ಚಿಗೆ ಬಂಡವಾಳ ಹೂಡಿ. ರೈತರುಗಳಿಗೆ ಏನು ಅವಶ್ಯಕತೆ ಇದೆ, ಅದನ್ನು ಕೊಡಿ.

ಶ್ರೀ ಸಿ. ಪುಟ್ಟರಂಗಶೆಟ್ಟಿ:- ನಮ್ಮ ಕಡೆ ನಿನ್ನೆ ಬಂದಿದ್ದಾಗ ನಾನು ಭಾಗವಹಿಸಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಿಮ್ಮ ಕಡೆ ಬಂದಿರಬಹುದು ನಾನು ಇಲ್ಲವೆಂದು ಹೇಳಿದೆನಾ?

ಶ್ರೀ ಸಿ. ಪುಟ್ಟರಂಗಶೆಟ್ಟಿ:- ನಮ್ಮ ಕಡೆ ಬಹಳ ಚೆನ್ನಾಗಿ ಆಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ರೈತರಿಗೆ ಏನು ಕೊಟ್ಟು ಕಳುಹಿಸಿದೆ.

(ಗೊಂದಲ)

ಶ್ರೀ ಕೆ. ಗೋಪಾಲ್ ಪೂಜಾರಿ:- ನಮ್ಮಲ್ಲಿ ಮಾಡಿದ್ದೇವೆ. ಹೋಬಳಿ ಮಟ್ಟದಲ್ಲಿ success ಆಗಿದೆ, ಪಂಚಾಯತ್ ಮಟ್ಟದಲ್ಲಿ success ಆಗಿದೆ. ಇದು ಒಳ್ಳೆಯ ಕಾರ್ಯಕ್ರಮ, ಈ ಕಾರ್ಯಕ್ರಮವನ್ನು ಮುಂದುವರೆಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಾನು ಆ ಕಾರ್ಯಕ್ರಮವನ್ನು ಮುಂದುವರೆಸಬೇಡಿ ಎಂದು ಹೇಳುತ್ತಿಲ್ಲ.

ಅಧ್ಯಕ್ಷರು:- ನೀವು ಹೇಳಿದಿರಲ್ಲ, ಬಿಡಿ ಸಚಿವರು ಮಾತನಾಡಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಾವು ನ್ಯೂನತೆಗಳನ್ನು ಹೇಳಿದ್ದೇವೆ. ರೈತರಿಗೆ ಆಶಾಭಾವನೆ ಮೂಡುವಂತಹ ಕಾರ್ಯಕ್ರಮಗಳು ಬೇಕು, ಅದನ್ನು ಅದರಲ್ಲಿ ಅವಳವಡಿಸಿ ಎನ್ನುವುದು ನಮ್ಮ ಮನವಿ. ಜನ ಬರುವುದಿಲ್ಲ, ಅವರು ಬರುವುದಿಲ್ಲ ಎನ್ನುವುದಲ್ಲ, ನಮ್ಮ ತಾಲ್ಲೂಕಿನಲ್ಲಿ ಬಂದಿದ್ದನ್ನು ನಾನು ಹೇಳಿದೆ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೆ, ನಾನು ಒಂದು clarification ಕೇಳಬಹುದೇ?

ಅಧ್ಯಕ್ಷರು:- ಸಚಿವರು ಹೇಳುವುದನ್ನು ಮುಗಿಸಲಿ, ಆಮೇಲೆ ಕೇಳಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಕೃಷ್ಣ ಬೈರೇಗೌಡರೆ, ನಾನು ಒಂದು clarification ಕೇಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಕೃಷಿ ಅಭಿಯಾನದಲ್ಲಿ ಅನೇಕ ಸಂದರ್ಭದಲ್ಲಿ ಅನೇಕ ಸದಸ್ಯರು ವ್ಯಾಖ್ಯಾನ ಮಾಡಿರುವುದೇನೆಂದರೆ ಕೃಷಿ ಮತ್ತು ಸಂಬಂಧಿತ ಎಲ್ಲಾ ಇಲಾಖೆಗಳು ಸಹ ರೈತರಿಂದ ದೂರವಾಗಿದ್ದಾರೆ, ಹೊಲದಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಕಛೇರಿಗಳಲ್ಲಿ ಕುಳಿತಿದ್ದಾರೆ, ಇವರಿಗೆ ಕಛೇರಿಗಳನ್ನು ಬಿಡಿಸಿ ರೈತರ ಹತ್ತಿರ ಕಳುಹಿಸಿ ಎಂದು ಎಲ್ಲರೂ ಅನೇಕ ಸಾರಿ ಹೇಳಿದ್ದಾರೆ. ಆ ಕಾರಣದಿಂದ ಈ ಯೋಜನೆಗಳನ್ನು ನಾವು ರೂಪಿಸಿಕೊಂಡಿದ್ದೇವೆ. ಬೇರೆ ಉದ್ದೇಶಕ್ಕೆ ಬೇರೆ ಕಾರ್ಯಕ್ರಮಗಳು ಇವೆ. ಅದರ ಬಗ್ಗೆ ಕೂಡ ಮುಂದೆ ಮಾತನಾಡುವಾಗ ಹೇಳುತ್ತೇನೆ. ಈ ಕಾರ್ಯಕ್ರಮ ಮುಖ್ಯವಾಗಿ ವಿಸ್ತರಣೆ ಚಟುವಟಿಕೆ ಕಡೆಗೆ ಆದ್ಯತೆ ಕೊಡುತ್ತೇವೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಮಾನ್ಯ ಅಧ್ಯಕ್ಷರೆ, ಒಂದೇ ಒಂದು clarification ಕೇಳುತ್ತೇನೆ.

ಅಧ್ಯಕ್ಷರು:- ಆಮೇಲೆ ಕೇಳುವಿರಂತೆ, ಸುಮ್ಮನಿರಿ.

ಶ್ರೀ ಕೃಷ್ಣ ಬೈರೇಗೌಡ:- ಹಾಗಾಗಿ ಇಲಾಖೆಗಳು ರೈತರ ಸಮೀಪ ಹೋಗಿ ಹತ್ತಿರದಿಂದ ಕೆಲಸ ಮಾಡಬೇಕೆನ್ನುವ ಉದ್ದೇಶ ಇದೆ. ಇದು ಇನ್ನೂ ಆರಂಭಿಕ ಹೆಜ್ಜೆ. ಇದನ್ನು ಇನ್ನೂ ಸುಧಾರಣೆ ಮಾಡಬೇಕು, ಖಂಡಿತ ಮಾಡೋಣ. ಇನ್ನು ಹನಿ ನೀರಾವರಿಗೆ ಪ್ರತ್ಯೇಕ ನೀತಿಯನ್ನು ತರಬೇಕೆಂದು ಘೋಷಣೆ ಮಾಡಿದ್ದೆವೆ. ಅದಕ್ಕೆ ಒಂದು ಕಾರ್ಯಾಗಾರವನ್ನು ಮಾಡಿ ಅಪರ ಮುಖ್ಯ ಕಾರ್ಯದರ್ಶಿಗಳು, ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಇನ್ನು ಸ್ವಲ್ಪ ದಿನದಲ್ಲಿ ಒಂದು ನೀತಿಯನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಹನಿ ನೀರಾವರಿಯ ಬಗ್ಗೆ ಮಾತನಾಡುತ್ತ, ಸಣ್ಣ ನೀರಾವರಿ ಇಲಾಖೆಯವರು ಒಂದು ರೀತಿ ಮಾಡುತ್ತಾರೆ, ಬೃಹತ್ ನೀರಾವರಿ ಇಲಾಖೆಯವರು ಇನ್ನೊಂದು ರೀತಿ ಮಾಡುತ್ತಾರೆ, ಕೃಷಿ ಇಲಾಖೆಯವರು ಒಂದು ರೀತಿ ಮಾಡುತ್ತಾರೆ, ಒಬ್ಬೊಬ್ಬರದು ಒಂದೊಂದು ರೀತಿ ಇದೆ, ನಿಮ್ಮಲ್ಲಿಯೆ ಸಮನ್ವಯ ಇಲ್ಲ ಎನ್ನುವ ರೀತಿ ಉಲ್ಲೇಖವಾಯಿತು. ಇನ್ನೊಂದು ವಿಚಾರ ಏನು ಹೇಳಿದರು ಎಂದರೆ ಹನಿ ನೀರಾವರಿ ಸೌಲಭ್ಯವನ್ನು ಬರಿ ಐದು ಎಕರೆಗೆ ಕೊಡುತ್ತಿದ್ದೀರಿ, ಹತ್ತು ಎಕರೆಗೆ ಏಕೆ ಕೊಡುತ್ತಿಲ್ಲ, ಕೊಡಬೇಕೇ, ಬೇಡವೇ, ಇದು ಬಹಳ ಪ್ರಮುಖವಾದಂತಹ ಕಾರ್ಯಕ್ರಮ ಹೌದಾ ಅಲ್ಲವೇ, ಹೀಗೆಲ್ಲಾ ಪ್ರಶ್ನೆಗಳು ಬಂದಿವೆ.

ಶ್ರೀ ವೈ.ಎಸ್.ವಿ. ದತ್ತಾ:- ಸಬ್ಸಿಡಿ ಏಕೆ ಆಗುತ್ತಿಲ್ಲ?

ಶ್ರೀ ಕೃಷ್ಣ ಬೈರೇಗೌಡ:- ಸಬ್ಸಿಡಿ ಸಾಕಷ್ಟು ಕೊಟ್ಟಿದ್ದೇವೆ, ಅದರ ವಿಚಾರ ಹೇಳುತ್ತೇನೆ. ಬೃಹತ್ ನೀರಾವರಿ, ಸಣ್ಣ ನೀರಾವರಿ, ತೋಟಗಾರಿಕೆ, ರೇಷ್ಮೆ, ಕೃಷಿ ಎಲ್ಲರೂ ಸೇರಿಕೊಂಡು ಒಂದು ಸಮಗ್ರವಾದಂತಹ ಹನಿ ನೀರಾವರಿಯ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವಂತಹ ಉದ್ದೇಶವನ್ನು

ಇಟ್ಟುಕೊಂಡಿದ್ದು, ಇನ್ನೇನು ಒಂದೆರಡು ತಿಂಗಳೊಳಗಡೆ ಹನಿ ನೀರಾವರಿಯ ಬಗ್ಗೆ ಒಂದು ಪ್ರತ್ಯೇಕವಾದ ನೀತಿಯನ್ನು ತೆಗೆದುಕೊಂಡು ಬಂದು ಅದರ ಮುಖಾಂತರ ಅನುಷ್ಠಾನ ಮಾಡುತ್ತೇವೆ. ಅಲ್ಲಿಯವರೆಗೂ ಅದನ್ನು ನಿಲ್ಲಿಸುವುದಕ್ಕೆ ಹೋಗುವುದಿಲ್ಲ, ಮಾಡುತ್ತಿರುತ್ತೇವೆ. ಅದರ ಬಗ್ಗೆ ಒಂದು ನೀತಿಯನ್ನು ತೆಗೆದುಕೊಂಡು ಬಂದು ಹೆಚ್ಚಿನ ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಸಿಗಬೇಕೆನ್ನುವುದು ನಮ್ಮ ಉದ್ದೇಶ. ಆ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ಅನೇಕ ಸದಸ್ಯರುಗಳು ಕಬ್ಬಿನ ಸಮಸ್ಯೆ ಬಗ್ಗೆ ಮಾತನಾಡಿದ್ದಾರೆ. ನಾನು ಕಬ್ಬಿನ ಸಮಸ್ಯೆ ಬಗ್ಗೆ ಮಾತನಾಡುವುದಿಲ್ಲ. ಅದಕ್ಕೆ ಪರಿಹಾರ ಎಲ್ಲಿದೆ ಎಂದರೆ ಕಬ್ಬಿನ ಪರ್ಯಾಯ ಬೆಳೆಗಳಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಗಂಭೀರವಾಗಿ ಹೇಳಿದ್ದಾರೆ. ಈ ವರ್ಷದ ಆಯವ್ಯಯದಲ್ಲಿ ನಾವು ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಅನುದಾನವನ್ನು ಕಾದಿರಿಸಿಕೊಂಡಿದ್ದೇವೆ. ಕಬ್ಬಿಗೆ ಪರ್ಯಾಯ ಬೆಳೆಗಳ ಬಗ್ಗೆ ರೈತರಿಗೆ ಪರಿಚಯ ಮಾಡಿಕೊಡತಕ್ಕಂಥ ಕಾರ್ಯಕ್ರಮವನ್ನು ಸಹ ಈ ವರ್ಷ ಮಾಡುತ್ತಿದ್ದೇವೆ. ಅದರಲ್ಲಿ ಬೀಟ್ ಶುಗರ್, ಬಾರ್ಲಿ ಆಗಬಹುದು, ಅದು ಆರ್ಥಿಕ ದೃಷ್ಟಿಯಿಂದ ಸಹ ಸರಿ ಹೋಗಬೇಕು, ಭೌಗೋಳಿಕ ದೃಷ್ಟಿಯಿಂದ ಸರಿ ಹೋಗಬೇಕು, ಅಂತಹ ಪರ್ಯಾಯ ಬೆಳೆಗಳನ್ನು ಪ್ರೋತ್ಸಾಹ ಮಾಡುವುದಕ್ಕೆ ನಾವು ಈ ವರ್ಷದ ಆಯವ್ಯಯದಲ್ಲಿ ಅನುದಾನವನ್ನು ಇಟ್ಟುಕೊಂಡಿದ್ದೇವೆ. ರಾಜ್ಯದಲ್ಲಿ "ಭೂ ಚೇತನ" ಕಾರ್ಯಕ್ರಮ ನಡೆದಿದೆ, ಇದು ಮುಂದುವರೆದು ಕಳೆದ ವರ್ಷದಿಂದ "ಭೂ ಸಂವೃದ್ಧಿ" ಎನ್ನುವ ಕಾರ್ಯಕ್ರಮವನ್ನು ಆರಂಭ ಮಾಡಿದ್ದೇವೆ. ಅಂತರರಾಷ್ಟ್ರೀಯದ ಎಲ್ಲಾ ಒಳ್ಳೆಯ ಸಂಸ್ಥೆಗಳನ್ನು ತೆಗೆದುಕೊಂಡು ಹೊಸ ಹೊಸ ತಂತ್ರಜ್ಞಾನವನ್ನು ರೈತರಿಗೆ ತಲುಪಿಸಬೇಕೆಂಬ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಭೂ ಸಂವೃದ್ಧಿ ಕಾರ್ಯಕ್ರಮ ಚಾಲನೆಯಲ್ಲಿದೆ. ಆ ವಿಷಯವಾಗಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾತನಾಡುತ್ತಾ ಇದಕ್ಕೆ ಬರೀ ಏಳೂವರೆ ಕೋಟಿ ರೂ. ಗಳಷ್ಟೇ ಇಟ್ಟಿರುವುದೆಂದು ಹೇಳಿದರು. ಬಹುಶಃ ಅವರು ಒಂದು ಕಡೆ ನೋಡಿದ್ದಾರೆ, RKVY ನಲ್ಲಿ ನೋಡಿದರೆ ಅವರಿಗೆ ಇದರ ಸಂಪೂರ್ಣ

ಚಿತ್ರಣ ಕಾಣುತ್ತಿತ್ತು. ಅದು ಏಳೂವರೆ ಕೋಟಿ ರೂ. ಗಳಲ್ಲ, ಮೂವತ್ತೆರಡೂವರೆ ಕೋಟಿ ರೂ. ಗಳನ್ನು ಇಟ್ಟಿರುವಂಥದ್ದು, ಅದು RKVY ನಲ್ಲಿ ಇಪ್ಪತ್ತೈದು ಕೋಟಿ ರೂ. ಗಳನ್ನು ಇಟ್ಟುಕೊಂಡಿದ್ದೇವೆ, ನಮ್ಮ ಅನುದಾನದಲ್ಲಿ ಏಳೂವರೆ ಕೋಟಿ ರೂ. ಗಳನ್ನು ಇಟ್ಟುಕೊಂಡಿದ್ದೇವೆ. ಮತ್ತೆ ಅನೇಕ ಸದಸ್ಯರು ಮಾತನಾಡುತ್ತಾ, ನಾವು ಇಷ್ಟೆಲ್ಲಾ ಕೆಲಸದ ವಿಸ್ತರಣಾ ಚಟುವಟಿಕೆಯನ್ನು ತೀವ್ರ ಮಾಡಬೇಕೆಂದರೆ, ನಿಮ್ಮಲ್ಲಿ ಸಿಬ್ಬಂದಿ ಕೊರತೆ ಇದೆ, ಹೇಗೆ ಮಾಡುತ್ತೀರಾ? ಎಂದು ಹೇಳಿದರು. ಈಗಾಗಲೇ ನಾವು ಈ ವರ್ಷ ಸುಮಾರು 350 ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಹಣಕಾಸು ಇಲಾಖೆಯಿಂದ ಅನುಮತಿ ಸಿಕ್ಕಿದೆ. ಇನ್ನು 400 ಸಿಬ್ಬಂದಿಗಳೆಂದರೆ ಒಟ್ಟು 800 ಸಿಬ್ಬಂದಿಗಳನ್ನು ಈ ವರ್ಷ ನೇಮಕ ಮಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿದ್ದೇವೆ. ನಾವು ಅದಕ್ಕೆ ಬೇಕಾದಂಥ ವಿಶೇಷ ನೇಮಕಾತಿ ನಿಯಮವನ್ನು ಸಹ ರಚನೆ ಮಾಡಿಕೊಂಡಿದ್ದೇವೆ. ಒಟ್ಟಾರೆ ಇನ್ನು ಒಂದು ತಿಂಗಳಲ್ಲಿ ಇವೆಲ್ಲಾ ಇತ್ಯರ್ಥವಾದರೆ, ಸುಮಾರು 800 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವಂಥ ಪ್ರಕ್ರಿಯೆಯನ್ನು ಸಹ ಈ ವರ್ಷದಲ್ಲಿ ಮಾಡುತ್ತೇವೆ. ಅದರಿಂದ ವಿಸ್ತರಣೆ ಚಟುವಟಿಕೆಯನ್ನು ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆಂಬುದನ್ನು ಸಹ ಇಲ್ಲಿ ಹೇಳಬಯಸುತ್ತೇನೆ. ಇನ್ನು ಕೆಲವು ಸದಸ್ಯರು ಮಾತನಾಡುತ್ತಾ, ಇವತ್ತಿನ ದಿನಮಾನದಲ್ಲಿ ನಿಮ್ಮ ಇಲಾಖೆಯ ಪ್ರಸ್ತುತತೆ ಏನು? ಇವತ್ತಿನ ದಿನಮಾನದಲ್ಲಿ ಬೇರೆಯದಕ್ಕೆ ಹೋಲಿಕೆ ಮಾಡಿದರೆ ರೈತರ ಪರಿಸ್ಥಿತಿ ಹೇಗಿದೆ? ಏನು ಮಾಡಬೇಕು? ಇದರ ಬಗ್ಗೆ ಒಂದು ವ್ಯಾಪಕವಾದಂಥ ಚರ್ಚೆ ಆಗಬೇಕು. ಕೆಲವರು ಇವತ್ತಿನ ದಿನಮಾನಕ್ಕೆ ಅನುಗುಣವಾದಂಥ ಚರ್ಚೆಯಾಗಬೇಕೆಂದು ಮಾತನಾಡಿದರು. ನಾವು ಸಹ ಅದನ್ನು ಸಂಪೂರ್ಣವಾಗಿ ಒಪ್ಪುತ್ತೇವೆ. ನಾವು ಈಗಾಗಲೇ ಆಯವ್ಯಯದಲ್ಲಿ ಘೋಷಣೆ ಮಾಡಿದ್ದೇವೆ. ನಾವು ಈ ವರ್ಷ vision group ರಚನೆ ಮಾಡುತ್ತೇವೆ. ಈ vision group ನಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ಸಂಬಂಧಪಟ್ಟ ಪರಿಣಿತರನ್ನು ತೆಗೆದುಕೊಂಡು ಈ ವಿಷಯವಾಗಿ ಅವರ ಮುಖಾಂತರ ಒಂದು ವ್ಯಾಪಕವಾದ ಚರ್ಚೆ ಮಾಡುತ್ತೇವೆ. ಅದರಿಂದ ಏನಾದರೂ ಬದಲಾವಣೆ ತರಬೇಕೆ? ಎಂಬ ಬಗ್ಗೆ

ಯೋಚನೆ ಮಾಡಬೇಕು. ನಮ್ಮೆಲ್ಲರ ಸೌಭಾಗ್ಯಕ್ಕೆ ನಾವು ಮತ್ತು ನಮ್ಮ ಎಲ್ಲಾ ಅಧಿಕಾರಿಗಳು ಹೋಗಿ ಎಂ.ಎಸ್. ಸ್ವಾಮಿನಾಥನ್‌ರವರನ್ನು ಮನವಿ ಮಾಡಿದೆವು. ತಾವು ದೇಶ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡಿರುವಂಥವರು, ರಾಜ್ಯಮಟ್ಟದ ಒಂದು vision group ನಿಮ್ಮನ್ನು ಕೇಳುವುದಕ್ಕೆ ನಮಗೂ ಸ್ವಲ್ಪ ಮುಜುಗರವಾಗುತ್ತದೆ. ಆದದರೂ ನಾವು ನಿಮ್ಮನ್ನು ಬಿಟ್ಟು ಬೇರೆಯವರ ಬಗ್ಗೆ ಯೋಚನೆ ಮಾಡುವುದಕ್ಕೆ ಆಗಲಿಲ್ಲ. ಹಾಗಾಗಿ ಅವರ ಮಟ್ಟಕ್ಕೆ ಇದು ಒಂದು ಸಣ್ಣ ಜವಾಬ್ದಾರಿ ಆದರೂ ಸಹ ನಮ್ಮ ಮನವಿಗೆ ಓಗೊಟ್ಟು, ನಮ್ಮ ಮಾನ್ಯ ಮುಖ್ಯಮಂತ್ರಿಯವರ ಮನವಿಗೆ ಓಗೊಟ್ಟು, ಅವರು ನಮ್ಮ ರಾಜ್ಯದ vision group ನ ಅಧ್ಯಕ್ಷರಾಗಿ ಕೆಲಸ ಮಾಡಬೇಕೆಂದು ಮನವಿ ಮಾಡಿದಾಗ, ಮಾನ್ಯ ಎಂ.ಎಸ್. ಸ್ವಾಮಿನಾಥನ್‌ರವರು ಒಪ್ಪಿಕೊಂಡು ಕರ್ನಾಟಕದ ಅಗ್ರಿಕಲ್ಚರ್ ವಿಜನ್ ಗ್ರೂಪಿಗೆ ಅದಕ್ಕೆ ಚೇರ್ಮನ್ ಆಗಿ ಕೆಲಸ ಮಾಡುತ್ತೇವೆಂದು, ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಹಾಗಾಗಿ ಅವರ ನೇತೃತ್ವದಲ್ಲಿ ಒಂದು vision group ಅನ್ನು set up ಮಾಡಿ, ಅದರ ಮುಖಾಂತರ ಕೃಷಿ ಮತ್ತು ಎಲ್ಲಾ ಸಂಬಂಧಿತ ಎಲ್ಲಾ ಇಲಾಖೆಗಳ ಬಗ್ಗೆ ಇವತ್ತಿನ ದಿನಮಾನದಲ್ಲಿ ಸರ್ಕಾರದ ಜವಾಬ್ದಾರಿ ರೈತರು ಏನು ಮಾಡಬೇಕು? ಇದರ ಬಗ್ಗೆ ಒಂದು ವಿಸ್ತೃತವಾದಂಥ ಚರ್ಚೆ ಅದರ ಆಧಾರದ ಮೇಲೆ .. ..

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅದಕ್ಕೆ ರೈತರನ್ನು ಹಾಕಬೇಕು.

ಶ್ರೀ ಕೃಷ್ಣ ಬೈರೇಗೌಡ:- ಆ ಸಮಿತಿಯಲ್ಲಿ ಖಂಡಿತವಾಗಿಯೂ ರೈತರು ಇರುತ್ತಾರೆ. ಮತ್ತೆ ಕೆಲವು ಸದಸ್ಯರು ಮಾತನಾಡುತ್ತಾ, ವಿಶ್ವವಿದ್ಯಾಲಯಗಳಲ್ಲೂ ಇದೆಲ್ಲಾ ಆಗಬೇಕೆಂದು ಹೇಳಿದ್ದಾರೆ. ಕೆಲವರು ವಿಶ್ವವಿದ್ಯಾಲಯಗಳ ಬಗ್ಗೆ ಖಾರವಾದಂಥ ಮಾತುಗಳನ್ನು ಆಡಿದ್ದಾರೆ. ನಮ್ಮ ದೇಶದ ಕೃಷಿ ಅಭಿವೃದ್ಧಿಗೆ ವಿಶ್ವವಿದ್ಯಾಲಯಗಳು ಕೊಡುಗೆಯನ್ನು ಕೊಟ್ಟಿದೆ, ಇಲ್ಲವೆಂದು ಅಲ್ಲ. ಆದರೆ ಇವತ್ತಿನ ದಿನಮಾನಗಳಲ್ಲಿ ಇನ್ನೂ ಉತ್ತಮವಾದಂಥ ಕೆಲಸ ಮಾಡಬೇಕೆಂಬ ಅಪೇಕ್ಷೆ, ಹಾಗಾಗಿ vision group ನಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಸೇರಿಸಿಕೊಂಡು, ಅದರಲ್ಲೇ ಒಂದು sub

group ಅನ್ನು ಮಾಡಿ, ಕೃಷಿ ವಿಶ್ವವಿದ್ಯಾಲಯಗಳ ಬಗ್ಗೆಯೂ ಸಹ, ಅವುಗಳಲ್ಲಿ ಮುಂದೆ ಯಾವ ರೀತಿಯ ಬದಲಾವಣೆಗಳನ್ನು ಮಾಡಬೇಕೆಂಬ ಬಗ್ಗೆ, ಆ exercise ಅನ್ನು ನಾವು ಈ ವರ್ಷ ಮಾಡುತ್ತೇವೆ. ಇನ್ನು ಉಳಿದ ಹಾಗೆ ರಾಗಿ ಮತ್ತು ಜೋಳದ ಬಗ್ಗೆ ಸ್ವಲ್ಪ ಬೆಲೆ ಕೊಡುತ್ತೀರೆಂದು ಹೇಳಿದರು. ನಾವು ಕೃಷಿ ಬೆಲೆ ಆಯೋಗದವರ ಶಿಫಾರಸ್ಸಿನ ಮೇಲೆ ರಾಗಿ ಮತ್ತು ಜೋವಾರ್‌ಗೆ ಕಳೆದ ವರ್ಷ ಒಂದು ವಿಶೇಷವಾದ package ಅನ್ನು ಘೋಷಣೆ ಮಾಡಿದ್ದೇವೆ. ಅದು 20,000 ಹೆಕ್ಟೇರ್‌ಗೆ ಇತ್ತು, ಈ ವರ್ಷ ಅದನ್ನು 40,000 ಹೆಕ್ಟೇರ್ ಮಾಡಬೇಕೆಂಬ ಉದ್ದೇಶದಿಂದ ಅದಕ್ಕೆ ವಿಶೇಷ ಪ್ಯಾಕೇಜ್ ಮಾಡುವಂಥದ್ದು, ಏಕೆಂದರೆ, ರಾಗಿ ಮತ್ತು ಜೋಳ ನಮ್ಮ ರಾಜ್ಯದ staple crop, ಅದಕ್ಕೆ ಪ್ರೋತ್ಸಾಹ ಕೊಡಬೇಕೆಂದು ವಿಶೇಷ ಪ್ಯಾಕೇಜ್ ಅನ್ನು ಘೋಷಣೆ ಮಾಡಿದ್ದೇವೆ. ಮತ್ತೆ ರಾಗಿ ಮತ್ತು ಜೋಳವನ್ನು ಎಷ್ಟೇ ಉತ್ಪಾದನೆ ಮಾಡಿಕೊಟ್ಟರೂ, ಅದನ್ನು ಸರ್ಕಾರವೇ ಖರೀದಿ ಮಾಡುತ್ತಿದೆ. MSP 1,550 ರೂ. ಗಳಿಗೆ ನಿಗದಿಯಾಗಿರುವುದು, ಆದರೆ ನಾವು ರೈತರಿಂದ ರಾಗಿ 2,000 ರೂ. ಗಳಿಗೆ ಖರೀದಿ ಮಾಡುವುದು ಮತ್ತು ಜೋಳ 2,200 ಮತ್ತು 2,300 ರೂ. ಗಳಿಗೆ ಖರೀದಿ ಮಾಡುವುದಕ್ಕೆ ತಯಾರಿದ್ದೇವೆ. ಹಾಗಾಗಿ ಈ ಬೆಳೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಈ ವರ್ಷದ ಆಯವ್ಯಯದಲ್ಲಿ ವಿಶೇಷ ಪ್ರೋತ್ಸಾಹ ಬೆಳೆಯನ್ನು ಬೆಳೆಯುವುದಕ್ಕೆ ಸುಮಾರು 25 ಕೋಟಿ ರೂ. ಗಳನ್ನು ಹಾಗೂ ಆ ಬೆಳೆಯನ್ನು ನಾವೇ ಖರೀದಿ ಮಾಡುತ್ತೇವೆ. ರೈತರು ಎಷ್ಟೇ ಬೆಳೆಯನ್ನು ಬೆಳೆದು ಕೊಟ್ಟರೂ ಏನು MSP ನಿಗದಿಯಾಗಿದೆ, ಅದಕ್ಕಿಂತ ಶೇ. 30 ರಷ್ಟು ಹೆಚ್ಚಿನ ದರ ಕೊಟ್ಟು ನಾವೇ ಖರೀದಿ ಮಾಡುತ್ತೇವೆ. ಈ ವಿಷಯವಾಗಿ ನಾನು ಮಾನ್ಯ ಸದಸ್ಯರುಗಳ ಮುಖಾಂತರವೂ ಮನವಿ ಮಾಡುವುದೇನೆಂದರೆ, ತಮ್ಮ ಕ್ಷೇತ್ರದಲ್ಲಿ ರಾಗಿ, ಜೋಳ ಬೆಳೆಯುವ ಪ್ರದೇಶಗಳಲ್ಲಿ ರೈತರಿಗೆ ಮಾಹಿತಿಯನ್ನು ಕೊಟ್ಟರೆ, ಸರ್ಕಾರ ಖರೀದಿ ಮಾಡುತ್ತದೆನ್ನುವ ಖಾತರಿ ಅವರಿಗೆ ಇದ್ದರೆ, ಅನೇಕ ರೈತರು ಈ ಬೆಳೆಯನ್ನು ಬೆಳೆಯುತ್ತಾರೆ. ಇದು ಬಹಳ ಒಳ್ಳೆಯ ಬೆಲೆ ಇದೆ, MSP ಗಿಂತ 30%, 40% ಹೆಚ್ಚಿಗೆ ಕೊಡುತ್ತಿದ್ದೇವೆ. ಬಹುಶಃ ಇದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವೇ

ಇಲ್ಲವೆಂದು ಹೇಳಬಹುದು. ಹಾಗಾಗಿ ಒಳ್ಳೆಯ ಬೆಲೆಯನ್ನು ಕೊಡುತ್ತಿರುವುದರಿಂದ, ತಾವು ಸಹ ರೈತರು ರಾಗಿ-ಜೋಳವನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು, ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಅದಕ್ಕಾಗಿ 25 ಕೋಟಿ ರೂ. ಗಳನ್ನು ಕಾದಿರಿಸಿಕೊಂಡಿದ್ದೇವೆ. ಇನ್ನು ಮತ್ತೊಂದು ವಿಷಯ ನಮ್ಮ ಸರ್ಕಾರ ಯಾಂತ್ರೀಕರಣಕ್ಕೆ ಆದ್ಯತೆಯನ್ನು ಕೊಟ್ಟಿದೆ, ಅದು ರೈತರಿಗೆ equipments ಕೊಡುವಂಥದ್ದು ಹಾಗೂ ಕೃಷಿ ಯಂತ್ರಧಾರೆ ಕಾರ್ಯಕ್ರಮವನ್ನು ಚಾಲನೆ ಮಾಡಿದ್ದೇವೆ. ಅದು ಹೋಬಳಿ ಮಟ್ಟದಲ್ಲಿ ಬಾಡಿಗೆ ಕೇಂದ್ರಗಳನ್ನು ತೆರೆಯುವಂಥದ್ದು. ಇದಕ್ಕೆ ಸುಮಾರು 143 ಕೋಟಿ ರೂ. ಗಳು ಹಾಗೂ 70 ಕೋಟಿ ರೂ. ಗಳನ್ನು ಒಟ್ಟು 210 ಕೋಟಿ ರೂ. ಗಳಿಗೂ ಹೆಚ್ಚು ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಕಾದಿರಿಸಿಕೊಂಡಿದ್ದೇವೆ. ಇನ್ನು ಹೆಚ್ಚು ಹಣ ಬೇಕಾದರೆ ಬೇರೆಯದನ್ನೂ ಕಡಿತಗೊಳಿಸಿಯಾದರೂ ಯಾಂತ್ರೀಕರಣಕ್ಕೆ ಖಂಡಿತವಾಗಿಯೂ ಹೆಚ್ಚಿನ ಅನುದಾನವನ್ನು ಕೊಡುತ್ತೇವೆ. ಇನ್ನು ವಿಮೆ ಬಗ್ಗೆ ತುಂಬಾ ಚರ್ಚೆಯಾಯಿತು, ಇವತ್ತು ನಮಗೂ ಸಹ ಎಲ್ಲೋ ಒಂದು ಕಡೆ ಇರುವಂಥ ವಿಮಾ ಸೌಲಭ್ಯ ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೆಂಬ ಸಮಾಧಾನವಿಲ್ಲ. ಆದರೆ ಇದು ರಾಷ್ಟ್ರಮಟ್ಟದಲ್ಲಿ ರಚನೆಯಾಗುವಂಥ ಕಾರ್ಯಕ್ರಮವಾಗಿದೆ. ಈ ವರ್ಷ ಒಂದು ಬದಲಾವಣೆಯನ್ನು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಕಳೆದ ವರ್ಷ Modified Nation Insurance Scheme ಅನ್ನು implement ಮಾಡಿದ್ದೇವೆ, ಆದರೆ ಅದು ನಮಗೆ ಸಮಾಧಾನವಾಗಲಿಲ್ಲ. ನಾವು ಈ ವರ್ಷ National Agriculture Insurance Scheme (NAIS) ಗೆ ವಾಪಸ್ಸು ಹೋಗಿದ್ದೇವೆ. ಅದರಲ್ಲಿ ಒಂದು ಅನುಕೂಲ ಏನಾಗುತ್ತದೆಂದರೆ, ಸ್ವಲ್ಪ ವಿಮಾ ದರ ಕಡಿಮೆಯಾಗುತ್ತದೆ. Modified Nation Insurance Scheme ನಲ್ಲಿ ಸುಮಾರು 6%-7% ಈ ರೀತಿ ಹೆಚ್ಚಾಗುತ್ತಿತ್ತು. ಇದರಲ್ಲಿ ಎರಡೂವರೆ ಪರ್ಸೆಂಟ್, ಮೂರು-ನಾಲ್ಕು ಪರ್ಸೆಂಟ್ ಅಷ್ಟು ವಿಮಾ ದರವಿರುತ್ತದೆ. ಇನ್ನೊಂದು SC/ST ರೈತರಿಗೆ ಸರ್ಕಾರದ ಕಡೆಯಿಂದಲೇ ಶೇ. 90 ರಷ್ಟು SCP/TSP ಯಲ್ಲಿ ವಿಮಾ ದರವನ್ನು ಭರಿಸುವಂಥದ್ದನ್ನು ಈ ವರ್ಷ implement

ಮಾಡುತ್ತಿದ್ದೇವೆ. ಮತ್ತೆ NAIS ನಲ್ಲಿ ನಾವು ಸ್ವಲ್ಪ ಅಧ್ಯಯನ ಮಾಡಿದಾಗ, ಇದರಿಂದ ರೈತರಿಗೆ ಸ್ವಲ್ಪ ಅನುಕೂಲವಾಗುತ್ತದೆಂಬುದು ಕಂಡು ಬಂದಿದ್ದರಿಂದ, ನಾವು NAIS ಗೆ opt ಮಾಡಿಕೊಂಡಿದ್ದೇವೆ, ಇಷ್ಟು ಆದರೂ ಸಹ ನಮಗೆ ಸಮಾಧಾನವಾಗಿಲ್ಲ. ನಾವು ಇದನ್ನು ಇನ್ನೂ ಸುಧಾರಣೆ ಮಾಡಬೇಕೆಂದು ಕೇಂದ್ರ ಸರ್ಕಾರದ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಕೇಂದ್ರ ಸರ್ಕಾರವೂ ಸಹ ಒಂದು ಹೊಸ ವಿಮಾ ಯೋಜನೆಯನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡುತ್ತಿದೆ. Income based insurance scheme ವಿಷಯದಲ್ಲಿ ನಾವು ಸಹ ಅವರ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಅದಕ್ಕಾಗಿ ನಮ್ಮ ಇಲಾಖೆಯಲ್ಲಿ ಒಂದು insurance cell ಅನ್ನು ಸಹ ಸ್ಥಾಪನೆ ಮಾಡುತ್ತಿದ್ದೇವೆ. ಏಕೆಂದರೆ, ನಮ್ಮಲ್ಲಿ expertise ಇಲ್ಲ, ಅದಕ್ಕೆ ಬೇಕಾದಂಥ ತಜ್ಞರನ್ನು ನೇಮಕ ಮಾಡಿಕೊಂಡು insurance ಅನ್ನು ಹೇಗೆ ಸುಧಾರಣೆ ಮಾಡಬೇಕೆಂಬ ಬಗ್ಗೆ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಧಾರವಾಡ ಭಾಗದಲ್ಲಿ ಉಳ್ಳಾಗಡ್ಡೆ ಆಗಬಹುದು, ಮೆಣಸಿನಕಾಯಿಗೆ weather based insurance ಇದೆ. ಈ weather based insurance ನಲ್ಲೂ telemetric station ನಿಂದ ನಮಗೆ ಮಳೆ ಬಗ್ಗೆ ಮಾಹಿತಿ ಬರುತ್ತದೆ. ಅದು automatically ಒಂದು system ಗೆ feed ಆಗುತ್ತದೆ. ಆ system ಒಳಗೆ feedಆದಾಗ, ಧಾರವಾಡ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮೂರುವರೆ ಕೋಟಿ ರೂ. ಗಳನ್ನು ಕಟ್ಟಿದ್ದರೆ ಏಳು ಕೋಟಿ ರೂ. ಗಳು ವಾಪಸ್ಸು ಬಂದಿದೆ. ಇನ್ನು ಕೆಲವು ಕಡೆಗಳಲ್ಲಿ 10 ಕೋಟಿ ರೂ. ಗಳನ್ನು ಕಟ್ಟಿದ್ದು 30 ಲಕ್ಷ ರೂ. ಗಳು ಬಂದಿದೆ. ಅದನ್ನು ನಾವು ಏನೋ ದುರುದ್ದೇಶದಿಂದ ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ. ಒಟ್ಟಾರೆ ಆ formul ಏನಿದೆ, ಆ ನೀತಿ ಏನಿದೆ, ಅದು ಬಹುಶಃ ಸರಿ ಇಲ್ಲ. ನಾವು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳು ಇದನ್ನು ಏನಾದರೂ ಮಾಡಿ ಸುಧಾರಣೆ ಮಾಡಬೇಕೆಂದು ಬಹಳ ತೀವ್ರವಾಗಿ ಪ್ರಯತ್ನ ಮಾಡುತ್ತಿದ್ದೇವೆ. ವಿಮಾ ಯೋಜನೆಯಲ್ಲಿ ಕೆಲವು ನ್ಯೂನತೆಗಳಿವೆ, ಸರ್ಕಾರಕ್ಕೂ ಸಹ ಇದರ ಬಗ್ಗೆ ಅರಿವು ಇದೆ. ಆದರೆ ಇದು Government of India Scheme ಅನ್ನು ನೀವು

ಸಾಲಗಾರರಿಗೆ ಕಡ್ಡಾಯ ಮಾಡಬೇಡಿ ಎಂದು ಕೇಂದ್ರ ಸರ್ಕಾರ ಹೊಡಿರುವಂಥ ನಿಬಂಧನೆಯಾಗಿದೆ. ಆದರೆ ನಾವು ವಿಮೆಯಲ್ಲಿ ಸುಧಾರಣೆ ತರಬೇಕೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಆ ದಿಕ್ಕಿನಲ್ಲಿ ತೋಟಗಾರಿಕಾ ಇಲಾಖೆ ಮತ್ತು ಕೃಷಿ ಇಲಾಖೆಗಳಲ್ಲಿ ನಾವು ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದ್ದೇವೆ. ಏಕೆಂದರೆ ನಮಗೇ ಸಮಾಧಾನವಿಲ್ಲ. ಇನ್ನೂ ಹೆಚ್ಚಿನ ಪ್ರಯತ್ನವನ್ನು ನಾವು ಆ ದಿಕ್ಕಿನಲ್ಲಿ ಮಾಡುತ್ತೇವೆ ಎಂದು ಹೇಳಲು ಬಯಸುತ್ತೇನೆ.

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ನಮೆ ಬಹಳ ದುರದೃಷ್ಟಕರವಾದಂಥ ವಿಚಾರ, ನಮಗೆ ಬಹಳ ದುಃಖವನ್ನು ಮತ್ತು ಖೇದವನ್ನು ತರುವಂಥ ವಿಚಾರವೆಂದರೆ ರೈತರ ಆತ್ಮಹತ್ಯೆ ಪ್ರಕರಣಗಳು. ಇದರ ಬಗ್ಗೆ ಹೇಳಲು ನಾನು ಒಂದೆರಡು ನಿಮಿಷ ಸಮಯ ತೆಗೆದುಕೊಳ್ಳಲು ಬಯಸುತ್ತೇನೆ. 2003–04 ರಿಂದ ಇಲ್ಲಿಯವರೆಗೆ ನಾವು ತುಲನೆ ಮಾಡಿ ನೋಡಿದರೆ, 2003–04 ರಲ್ಲಿ 708 ಪ್ರಕರಣಗಳು ವರದಿಯಾಗಿದ್ದವು. ಅದರಲ್ಲಿ ಮಾನದಂಡಗಳ ಪ್ರಕಾರ 205 ಪ್ರಕರಣಗಳು ರೈತರ ಆತ್ಮಹತ್ಯೆ ಎಂದು ಸಂಬಂಧಪಟ್ಟ ಸಮಿತಿಗಳು ಇತ್ಯರ್ಥಪಡಿಸಿದ್ದವು. 2004–05 ರಲ್ಲಿ ಅದು 270 ಕ್ಕೆ ಬಂತು, 2005–06 ರಲ್ಲಿ 163 ಕ್ಕೆ ಬಂತು. 2006–07 ರಲ್ಲಿ 346 ಪ್ರಕರಣ ವರದಿಯಾಗಿತ್ತು. ಅದರಲ್ಲಿ 176 ಪ್ರಕರಣಗಳನ್ನು ಆತ್ಮಹತ್ಯೆ ಪ್ರಕರಣ ಎಂದು ಇತ್ಯರ್ಥಪಡಿಸಲಾಗಿತ್ತು. 2007–08 ರಲ್ಲಿ 342, 2008–09 ರಲ್ಲಿ 337, ಹೀಗೆ ನಡೆದುಕೊಂಡು ಬಂದಿದ್ದು, ನಮ್ಮ ಸಕಾರ ಬಂದ ನಂತರ 2013–14 ರಲ್ಲಿ ವರದಿಯಾದಂಥ ಒಟ್ಟು ಪ್ರಕರಣಗಳು 106. ಅದರಲ್ಲಿ ಆತ್ಮಹತ್ಯೆ ಎಂದು ಇತ್ಯರ್ಥಪಡಿಸಲಾದಂಥ ಪ್ರಕರಣಗಳು 58. 2014–15ರಲ್ಲಿ ವರದಿಯಾಗಿರುವ ಪ್ರಕರಣಗಳು 58. ಅದರಲ್ಲಿ ಆತ್ಮಹತ್ಯೆ ಎಂದು ಒಪ್ಪಿದಂಥ ಪ್ರಕರಣಗಳು 48. 2003–04 ರಲ್ಲಿ ವರದಿಯಾಗಿದ್ದಂಥ 708 ಪ್ರಕರಣಗಳಿಗೆ ಹೋಲಿಕೆ ಮಾಡಿದರೆ ಅದು 2014–15 ರಲ್ಲಿ 58 ಕ್ಕೆ ಅಂದರೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. 58 ಪ್ರಕರಣಗಳಿಗೆ ಗಣನೀಯವಾಗಿ ಕಡಿಮೆಯಾಗಿತ್ತು. ಈ ವರ್ಷ ಏಪ್ರಿಲ್ ತಿಂಗಳವರೆಗೂ ಅದೇ ಸರಾಸರಿ ಪ್ರಕಾರವಾಗಿ ನಡೆದು ಬಂದಿದೆ. ಏಪ್ರಿಲ್ ತಿಂಗಳವರೆಗೆ ಇದೇ

ಅಂಕಿಸಂಖ್ಯೆಗಳನ್ನು ನಾವು ನೋಡುತ್ತೇವೆ. ಮೇ ತಿಂಗಳವರೆಗೂ ಸಹ ಹಾಗೇ ಇದೆ. ಆದರೆ ಜೂನ್ ಈ ಒಂದು ತಿಂಗಳಲ್ಲಿ ಮಾತ್ರ ಏನಾಗುತ್ತಿದೆ ಎನ್ನುವುದು ನಮಗೂ ಅರ್ಥವಾಗುತ್ತಿಲ್ಲ. ಒಮ್ಮೆಲೇ ಜೂನ್ ತಿಂಗಳಲ್ಲಿ ಏಕೆ ಇಷ್ಟು ಆತ್ಮಹತ್ಯೆ ಪ್ರಕರಣಗಳು ಹೆಚ್ಚಾದವು ಎನ್ನುವ ಬಗ್ಗೆ ನಾವೂ ಸಹ ತಲೆಕೆಡಿಸಿಕೊಳ್ಳುವ ಹಂತಕ್ಕೆ ಬಂದಿದ್ದೇವೆ. ಅದಾದ ಮೇಲೆ ನಾವು, ಅಧಿಕಾರಿಗಳು ಸಭೆಯನ್ನು ಮಾಡಿ ಇದರ ಬಗ್ಗೆ ಅನೇಕ ಚರ್ಚೆಗಳನ್ನು ಮಾಡಿದೆವು. ರಾಷ್ಟ್ರಮಟ್ಟದಲ್ಲಿ ಏನಾಗುತ್ತಿದೆ ಎನ್ನುವುದನ್ನು ನೋಡಬೇಕೆಂದು ನಾವು, ಗೃಹ ಸಚಿವಾಲಯದ ಕೆಳಗೆ ಇರುವ National Crime Records Bureau ದವರು ವಾರ್ಷಿಕವಾಗಿ Accidential deaths and suicides in India ಎಂದು ವಾರ್ಷಿಕ ವರದಿಯನ್ನು ಹೊರತರುತ್ತಾರೆ. ನಮ್ಮ ರಾಜ್ಯದಲ್ಲಿ ಏನಾಗುತ್ತಿದೆ, ಏಕೆ ಆಗುತ್ತಿದೆ ಎನ್ನುವ ಬಗ್ಗೆ ಇದರಲ್ಲೇನಾದರೂ ಸುಳಿವು ಸಿಗಬಹುದೇ ಎಂದು ನಾವು ಇದನ್ನೆಲ್ಲ ತೆಗೆದು ಅಧ್ಯಯನ ಮಾಡಿ ನೋಡಿದೆವು. ಇದರ latest ವರದಿ ಹೊರಬಂದಿರುವುದು 2013 ರದ್ದು, ತದನಂತರದ್ದು ಅಂದರೆ 2014 ರ ವರದಿ ಇನ್ನೂ ಹೊರಬಂದಿಲ್ಲ. 2013 ರ ವರದಿಯನ್ನು ನೋಡಿದಾಗ, ದೇಶದಲ್ಲಿ ಸುಮಾರು 1,34,799 ಆತ್ಮಹತ್ಯೆ ಪ್ರಕರಣಗಳಾಗಿವೆ ಎಂದು N.C.R.B. ನವರು ವರದಿ ಮಾಡಿದ್ದಾರೆ. ಇದರಲ್ಲಿ ಅವರು ನಾನಾ ರೀತಿಯಾಗಿ by professional classification ಮಾಡಿದ್ದಾರೆ. ಆತ್ಮಹತ್ಯೆಗೆ ಕಾರಣವೇನು ಎನ್ನುವ ಬಗ್ಗೆ ಕೆಲವು ವರ್ಗೀಕರಣ ಇದೆ. ಆದರೆ ಅವರು ಕಾರಣವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. By profession ಅಂದರೆ ಅವರು ಯಾವ ವೃತ್ತಿಯಲ್ಲಿದ್ದಾರೆ ಎನ್ನುವುದರ ಆಧಾರದ ಮೇಲೆಯೂ ಸಹ classifications ಮಾಡಿದ್ದಾರೆ. 2013 ರಲ್ಲಿ ದೇಶದಲ್ಲಿ ಆಗಿರುವ 1,34,799 ಆತ್ಮಹತ್ಯೆಗಳ ಪೈಕಿ ಗೃಹಿಣಿಯರ ಪ್ರಮಾಣ ಶೇಕಡ 16.9 ರಷ್ಟಿದೆ. Service sector ನಲ್ಲಿ ಅಂದರೆ ಗೌರ್ನಮೆಂಟಿನಲ್ಲಿ ಕೆಲಸ ಮಾಡುವವರು, ಪ್ರೈವೇಟ್‌ನಲ್ಲಿ ಕೆಲಸ ಮಾಡುವವರು, ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೆಲಸ ಮಾಡುವವರು, ಒಟ್ಟು suicide ನಲ್ಲಿ ಇವರ ಪ್ರಮಾಣ 12.5% ಇದೆ. ಒಟ್ಟು suicide ನಲ್ಲಿ ವಿದ್ಯಾರ್ಥಿಗಳು 6.2% ಇದ್ದಾರೆ. ಒಟ್ಟು suicide ನಲ್ಲಿ 7.2% ನಿರುದ್ಯೋಗಿಗಳಿದ್ದಾರರೆ. ಒಟ್ಟು suicide ನಲ್ಲಿ self-employed

ಇರುವವರು 38% ಇದ್ದಾರೆ. ಅದರಲ್ಲಿ business ಮಾಡಿಕೊಂಡು self-employed ಇದ್ದಂಥವರು 5.2% ಇದ್ದಾರೆ, professional activity ಮಾಡುವಂಥವರು 2.9%, ಕೃಷಿ ಮಾಡುವಂಥವರು 8.7% ಹಾಗೂ ಇತರರು 21% ಇದ್ದಾರೆ. Suicide ಮಾಡಿಕೊಂಡಂಥವರಲ್ಲಿ retired persons ಇದ್ದಾರೆ, others ಸಹಾ ಇದ್ದಾರೆ. ಹಾಗಾಗಿ 2013 ರಲ್ಲಿ ಆಗಿರುವ 1,34,799 ಆತ್ಮಹತ್ಯೆಗಳಲ್ಲಿ ಸುಮಾರು 8.7% ನಷ್ಟು ರೈತ ಆತ್ಮಹತ್ಯೆ ಪ್ರಕರಣಗಳು ಎಂದು N.C.R.B. ಯವರು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. N.C.R.B. ಅವರ figures ನಮ್ಮದ್ದಕ್ಕಿಂತ ten times ಜಾಸ್ತಿ ಇರುತ್ತದೆ. ರೈತ ಕೃಷಿಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅದನ್ನು ರೈತ ಆತ್ಮಹತ್ಯೆ ಎಂದು ನಾವು ಕರೆಯುತ್ತೇವೆ. ಆದರೆ ಇವರು ಹಾಗಲ್ಲ. ಮನೆಯಲ್ಲಿ ಏನೇ ವ್ಯಾಜ್ಯವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರೂ by profession ರೈತ ಎಂದು ಇದ್ದರೆ ಅದನ್ನು ರೈತ ಆತ್ಮಹತ್ಯೆ ಪ್ರಕರಣ ಎಂದು ಅವರು ಪರಿಗಣನೆ ಮಾಡುತ್ತಾರೆ. ಅವರ definition ಬಹಳ ವಿಶಾಲವಾಗಿದೆ. ನಮ್ಮದು ಇನ್ನೂ ಸ್ವಲ್ಪ ಕಡಿಮೆ ಇದೆ. ಅವರ ಪ್ರಕಾರ, 2013 ರಲ್ಲಾದ ಆತ್ಮಹತ್ಯೆ ಪ್ರಕರಣಗಳ ಪೈಕಿ 8.7% ರಷ್ಟು ಪ್ರಕರಣಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಇದೆ. ನಮ್ಮ ರಾಜ್ಯದಲ್ಲಿ ಜೂನ್ ತಿಂಗಳಲ್ಲಿ ನಡೆದಿರುವಂಥ ಘಟನೆಗಳು ಸರ್ಕಾರದಲ್ಲಿ ನಮಗೆ ಬಹಳ ಖೇದವನ್ನು ಉಂಟು ಮಾಡುವುದು ಅಷ್ಟೇ ಅಲ್ಲ, ಏಕೆ ಈ ರೀತಿಯಾಗುತ್ತಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಲಿಕ್ಕೂ ಸಹ ಕಷ್ಟವಾಗುತ್ತಿದೆ. ಕೆಲವರು ಮಾತನಾಡುತ್ತಾ ಪ್ರಮುಖವಾಗಿ ಇದು ಸಾಲ ಸಂಬಂಧಿತವಾದದ್ದು ಎಂದು ಹೇಳಿದರು. ರೈತರು ಮಾಡುವ ಸಾಲಕ್ಕೆ ಸಂಬಂಧಿತವಾಗಿರಬೇಕು ಎಂದು ಉಲ್ಲೇಖ ಮಾಡಿದ್ದಾರರೆ. ತಮಗೆ ತಿಳಿದ ಹಾಗೆ ನಮ್ಮ ಸರ್ಕಾರ ಬಂದ ಮೇಲೆ 0% interest rate ನಲ್ಲಿ ನಾವು ರೈತರಿಗೆ ಸಾಲವನ್ನು ಸಹ ಕೊಡುತ್ತಿದ್ದೇವೆ. ಅದು ಸಮರ್ಪಕವಾಗಿಲ್ಲ ಎನ್ನುವುದನ್ನು ಒಪ್ಪುತ್ತೇನೆ. ಆದರೂ ಸಹ 2014–15ರಲ್ಲಿ 9,896 ಕೋಟಿ ರೂಪಾಯಿಗಳನ್ನು 0% interest rate ನಲ್ಲಿ ನಾವು ರೈತರಿಗೆ ಸಾಲವನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಸಾಲದ ಮೇಲೆ

ಬಡ್ಡಿಗಾಗಿ ಕೊಡುತ್ತಿರುವ ಸಬ್ಸಿಡಿಗಾಗಿಯೇ 1,643 ಕೋಟಿ ರೂಪಾಯಿಗಳನ್ನು 0% interest ನಲ್ಲಿ ಕೊಡುವಂಥ ಸಾಲಕ್ಕೆ ಖರ್ಚು ಮಾಡಿದ್ದೇವೆ. ಆದರೆ ಇದರಲ್ಲಿ ಸಮಸ್ಯೆ ಏನಿದೆ ಎಂದರೆ ಇದು ಎಲ್ಲ ರೈತರಿಗೂ ಸಿಗುತ್ತಿಲ್ಲ. ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ ರೈತರಿಗೆ ಮಾತ್ರ ಇದು ಸಿಗುತ್ತಿದೆ ಎನ್ನುವುದು ಇದೆ. ಕಳೆದ ಆಯುವ್ಯಯಕ್ಕೆ ಮೊದಲೇ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಭೆಯಾಗಿ, ಆಗ ಮುಖ್ಯಮಂತ್ರಿಗಳು ಏನೊಂದು ತೀರ್ಮಾನವನ್ನು ತೆಗೆದುಕೊಂಡರು ಎಂದರೆ, ಈಗ ನಾನು ಹೇಳುತ್ತಿರುವುದು ಸಹಕಾರ ಇಲಾಖೆಗೆ ಬರುತ್ತದೆ, ಆದರೆ ರೈತರ ಆತ್ಮಹತ್ಯೆಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ನಾನು ಹೇಳುತ್ತಿದ್ದೇನೆ, 2015-16 ನೇ ಸಾಲಿನಲ್ಲಿ ಯಾವ್ಯಾವ ರೈತ ಕುಟುಂಬಗಳು below poverty line ನಲ್ಲಿವೆ, ಅಂದರೆ ಸುಮಾರು 90-95% ರೈತ ಕುಟುಂಬಗಳೆಲ್ಲ BPL ಕಾರ್ಡ್‌ಗಳನ್ನು ಪಡೆದುಕೊಂಡಿದ್ದಾರೆ, ಅವರೆಲ್ಲರಿಗೂ ಸಹ ಕಡ್ಡಾಯವಾಗಿ ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಸರ್ಕಾರದ ಖರ್ಚಿನಲ್ಲಿ ಮಾಡುವುದು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. Financial inclusion ಅಂದರೆ ರೈತರೂ ಸಹ ಸಹಕಾರ ಸಂಘಗಳಲ್ಲಿ ಸದಸ್ಯರಾದರೆ ಅವರು ನಾಳೆ ಕನಿಷ್ಠ ಸಾಲಕ್ಕೆ ಅರ್ಜಿಯನ್ನಾದರೂ ಹಾಕಬಹುದು ಎನ್ನುವ ಉದ್ದೇಶವನ್ನಿಟ್ಟುಕೊಂಡು ಈ ವರ್ಷ ನಾವು ಸಹಕಾರ ಸಂಘಗಳಲ್ಲಿ ರೈತರಿಗೆ ಸದಸ್ಯತ್ವವನ್ನು ಸರ್ಕಾರದ ಖರ್ಚಿನಲ್ಲಿ ಮಾಡತಕ್ಕಂಥ ಕಾರ್ಯಕ್ರಮವನ್ನು ಸಹಕಾರ ಇಲಾಖೆಯ ಮೂಲಕ ಕೈಗತ್ತಿಕೊಳ್ಳುತ್ತಿದ್ದೇವೆ. ಹಾಗೆಯೇ, ನಿನ್ನೆ ಕಾನೂನು ಸಚಿವರು ಸಹ ಹೇಳಿದ್ದಾರೆ. ಕೆಲವು ಕಾನೂನುಗಳಿಗೆ ಬದಲಾವಣೆ ತರುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಈ ಎಲ್ಲ ಆತ್ಮಹತ್ಯೆ ಪ್ರಕರಣಗಳಾದ ಮೇಲೆ, Money lenders provisions ಏನಿವೆ, ಅದರಲ್ಲಿ ಬದಲಾವಣೆಯನ್ನು ತರುವುದನ್ನೂ ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಏಕೆಂದರೆ ಸುಮಾರು ಸಾಲಗಳು ಕೈಸಾಲಗಳಾಗಿವೆ. ಅವುಗಳ್ಯಾವುವೂ ಅಧಿಕೃತ ಮೂಲಗಳಿಂದ ಪಡೆದುಕೊಂಡಿರುವಂಥ ಸಾಲಗಳಲ್ಲ. ಹಾಗಾಗಿ ನಾವು ಕಾನೂನಿನಲ್ಲಿ ಬದಲಾವಣೆಯನ್ನು ತೆಗೆದುಕೊಂಡು ಬರಬೇಕೆಂದಿದ್ದೇವೆ. ಹಿಂದೆ ಒಂದು ಬಾರಿ ಋಣಮುಕ್ತ ಕಾನೂನನ್ನು ಜಾರಿ

ಮಾಡಲಾಗಿತ್ತು. ಬಹುಶಃ ಇವತ್ತು ಅದನ್ನು ಮಾಡಲಿಕ್ಕೆ ಆಗುತ್ತದೆಯೇ, ಇಲ್ಲವೇ ಎನ್ನುವುದನ್ನೂ ನಾವು ಚರ್ಚೆ ಮಾಡುತ್ತಿದ್ದೇವೆ. ಅದರ ಜೊತೆಗೆ ಇರತಕ್ಕಂಥ ಕಾನೂನುಗಳಿಗೆ ಬದಲಾವಣೆಯನ್ನು ತಂದು ಏನು ಖಾಸಗಿಯವರು ಬಂದು ಸಾಲ ಪಡೆದುಕೊಂಡಂಥವರನ್ನು ಪೀಡಿಸಿ ಮಾನಸಿಕ ಹಿಂಸೆ ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಬದಲಾವಣೆಯನ್ನು ತರತಕ್ಕಂಥದ್ದಕ್ಕೆ ಸಹ ನಾವು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಾವು ಸರ್ಕಾರದಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದು ನಿರ್ದಿಷ್ಟವಾದ ಸೂಚನೆಯನ್ನು ಕೊಟ್ಟಿದ್ದೇವೆ.

> *'ಲೇವಾದೇವಿಗಾರರು ಹಣದ ವ್ಯವಹಾರ ನಡೆಸದಂತೆ ನೋಡಿಕೊಳ್ಳುವುದಲ್ಲದೆ ಈ ರೀತಿಯ ಅನಧಿಕೃತ ಚಟುವಟಿಕೆಗಳು ನಡೆಯುವ ಸ್ಥಳಗಳಿಗೆ ತಕ್ಷಣವೇ ಬೀಗ ಮುದ್ರೆ ಹಾಕಲು ಮತ್ತು ನೋಂದಾಯಿತ ಲೇವಾದೇವಿಗಾರರು ತಮ್ಮ ಹಣವನ್ನು ವಾಪಸ್ಸು ಪಡೆಯಲು ಯಾವುದೇ ತೆರನಾದ ಒತ್ತಾಯಪೂರ್ವಕ ಕ್ರಮಗಳನ್ನು ಅನುಸರಿಸದಂತೆ ಎಚ್ಚರವಹಿಸುವುದು, ಆಯಾ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳುವುದು'*

ಎಂದು ನಾವು ಸರ್ಕಾರದಿಂದ ಅವರಿಗೆ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಇದರಿಂದ ಎಲ್ಲವೂ ಪರಿಹಾರವಾಗುತ್ತದೆ ಎಂದು ನಾನು ಹೇಳುತ್ತಿಲ್ಲ. ಲೇವಾದೇವಿಗಾರರು ಅವರ ಮೇಲೆ ಒತ್ತಾಯ ತರುವಂಥದ್ದು ಇದ್ದರೆ ಅವರ ಮೇಲೆ case ಹಾಕಬೇಕೆಂದು ಹಾಗೂ ಕೆಲವು money lenders ಗೆ ಸಂಬಂಧಪಟ್ಟಂಥ ಕಾನೂನುಗಳಿಗೆ ಬದಲಾವಣೆ ತರತಕ್ಕಂಥದ್ದು, ಹಾಗೂ ಇನ್ನೂ ಮುಂದುವರೆದು ಋಣಮುಕ್ತ ಕಾನೂನನ್ನು ತರಲಿಕ್ಕೆ ಆಗುತ್ತದೆಯೇ ಎಂದು ಇವೆಲ್ಲವನ್ನು ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಏಕೆಂದರೆ, ನಮಗೂ ಎಲ್ಲೋ ಒಂದು ಕಡೆಗೆ ಅಂತಃಕರಣ ಕಲಕುವಂಥ ಕೆಲಸ ಇದು ಆಗಿರುವುದರಿಂದ ನಾವು ಇದನ್ನು ಗಂಭೀರವಾಗಿ

ತೆಗೆದುಕೊಂಡು, ಸಾಲದ್ದಕ್ಕೆ ಈ ಜೂನ್ ತಿಂಗಳಲ್ಲಿ ಏನು ಹೆಚ್ಚು ಆತ್ಮಹತ್ಯೆಗಳು ಆಗಿವೆ, ಈ ಪ್ರಕರಣಗಳು ನಮಗೂ ಸಹ ಅರ್ಥ ಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ಹಾಗಾಗಿ ನಾವು ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ತೀರ್ಮಾನ ತೆಗೆದುಕೊಂಡಿದ್ದಾರೆ. ಏಕೆ ಈ ರೀತಿ ಆಗುತ್ತಿದೆ ಎಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಜೂನ್ ತಿಂಗಳಲ್ಲಿ ಆದಂಥ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಅಧ್ಯಯನವನ್ನು ಮಾಡತಕ್ಕಂಥದ್ದು, ಹಾಗೂ ಇದಕ್ಕೆ ಕಾರಣಗಳೇನು ಎಂದು ಹುಡುಕುವ ಕೆಲಸವನ್ನು ಸರ್ಕಾರ ತತಕ್ಷಣ ಮಾಡಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡುತ್ತೇವೆಂದು ಸಹ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯಿಂದಲೂ ಸಹ ನಾನು ಆಗಲೇ ಹೇಳಿದ ಹಾಗೆ FPO ಬಗ್ಗೆ ಈ ಬಾರಿ ವಿಶೇಷವಾಗಿ ಆಸಕ್ತಿಯನ್ನು ತೆಗೆದುಕೊಂಡಿದ್ದೇವೆ. ಬಹುಶಃ ತಾವು ಆಗ ಇರಲಿಲ್ಲ. ಅದಕ್ಕೋಸ್ಕರ ನಾನು ಪುನಃ ಪ್ರಸ್ತಾಪ ಮಾಡುತ್ತಿದ್ದೇನೆ. ರೈತರ ಒಕ್ಕೂಟಗಳನ್ನು ರಚನೆ ಮಾಡಿ ಅದರ ಮುಖಾಂತರ ಅವರಿಗೆ ಅವರು ಬೆಳೆ ಬೆಳೆಯುವುದಕ್ಕೆ, ಅವರು fertilizer ಅನ್ನು sale ಮಾಡುವುದಕ್ಕೆ, market ಮಾಡುವುದಕ್ಕೆ ಎಲ್ಲದಕ್ಕೂ ಸಹ ಸರ್ಕಾರದ ಕಡೆಯಿಂದ ಬಂಡವಾಳ ಹೂಡತಕ್ಕಂಥ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆ ಮುಖಾಂತರವಾಗಿ ನಾವು FPO ಗಳನ್ನು ರಚನೆ ಮಾಡತಕ್ಕಂಥದ್ದನ್ನು ಮಾಡುತ್ತಿದ್ದೇವೆ. ಇನ್ನು ಮುಂದುವರೆದು ನಮಗೆ ತೋಟಗಾರಿಕೆ ಇಲಾಖೆ ಮುಖಾಂತರ micro irrigation ಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಕೆಲವರು ಮಾತನಾಡುತ್ತಾ ಹೇಳಿದರು. ಅದರ ಬಗ್ಗೆಯೂ ಸಹ ನಾನು ಸ್ವಲ್ಪ ಮಾತನಾಡುತ್ತೇನೆ. ಹನಿ ನೀರಾವರಿಗೆ ಒತ್ತು ಕೊಡಬೇಕೆನ್ನುವುದು ಸಹ ನಮ್ಮ ಉದ್ದೇಶವಾಗಿದೆ. ಹಾಗೂ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಕೋನರೆಡ್ಡಿಯವರು ಹೇಳಿದಂತೆ ಬೆಳೆ ವಿಮಾದಿಂದ ತೊಂದರೆ ಆಗಿರತಕ್ಕಂಥದ್ದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಅದರಲ್ಲಿಯೂ ಸಹ ಬದಲಾವಣೆಯನ್ನು ತರುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇನ್ನು ಕೆಲವು ಸದಸ್ಯರು ಈ ತೋಟಗಾರಿಕಾ ಬೆಳೆಗಳಿಗೆ ಕೊಡತಕ್ಕಂಥ

ಪರಿಹಾರ ಧನವನ್ನು ಪರಿಷ್ಕರಣೆ ಮಾಡಬೇಕೆಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 2 ಬಾರಿ ಪರಿಷ್ಕರಣೆ ಆಗಿದೆ. ಈ ವರ್ಷವೂ ಸಹ ಮೇ ತಿಂಗಳಲ್ಲಿ ನಾವು ಪರಿಹಾರ ಧನವನ್ನು ಪರಿಷ್ಕರಣೆ ಮಾಡಿದ್ದೇವೆನ್ನತಕ್ಕಂಥದ್ದನ್ನು ಸಹ ಕೇಂದ್ರ ಸರ್ಕಾರದ ಜೊತೆಗೂಡಿ ಮಾಡಿದ್ದೇವೆಂದು ಸಹ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಒಟ್ಟಾರೆ ನಮಗೆ ಜಲಾನಯನ ಹಾಗೂ ಇತರೆ ಕಾರ್ಯಕ್ರಮಗಳಿಗೆ ಕೃಷಿ ಸಂಬಂಧಿತ ಕಾರ್ಯಕ್ರಮಗಳಿಗೆ 2013–14, 2014–15 ಮತ್ತು 2015–16 ಈ ಮೂರು ವರ್ಷಗಳಿಗೆ ಹೋಲಿಕೆ ಮಾಡಿದರೆ ನಮ್ಮ ಸರ್ಕಾರ ಬಂದಮೇಲೆ ಅನುದಾನ ಕಾದಿರಿಸಿರತಕ್ಕಂಥದ್ದು 6291 ಕೋಟಿ ರೂಪಾಯಿಗಳು. ಅಷ್ಟೂ ಖರ್ಚಾಗಿಲ್ಲವೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೂ ನಿಗದಿಯಾಗಿರತಕ್ಕಂಥ ಅನುದಾನ 6291 ಕೋಟಿ ರೂಪಾಯಿಗಳು. ಅದೇ ಹಿಂದಿನ ಮೂರು ವರ್ಷಗಳು ಅಂದರೆ 2010–11, 2011–12 ಮತ್ತು 2012–13 ರನ್ನು ಪರಿಗಣಿಸಿದರೆ 3,275 ಕೋಟಿ ರೂಪಾಯಿಗಳು ಅಂದರೆ ನಮ್ಮ ಸರ್ಕಾರ ಬಂದಮೇಲೆ 3 ಆಯವ್ಯಯಗಳನ್ನು ಕೃಷಿಗೆ ಸಂಬಂಧಿಸಿದ ಹಾಗೆ ನಾವು ಏನು ಮಂಡನೆ ಮಾಡಿದ್ದೇವೆ, 2 ಪಟ್ಟು ಆಯವ್ಯಯವನ್ನು ಕೃಷಿಗೆ ಕಾದಿರಿಸಿದ್ದೇವೆ ಎನ್ನುವುದನ್ನೂ ಸಹ ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ನಮಗೆ ಈ ವರ್ಷ ಸ್ವಲ್ಪ ಕಠಿಣ ಸಾಧ್ಯವಾಗತಕ್ಕಂಥದ್ದು ಎಂದರೆ ಅನೇಕ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ನಮಗೆ ಅನುದಾನ ಕಡಿತವಾಗಿದೆ. ಇದು RKVY ಆಗಿರಬಹುದು, ಅನೇಕ ಕಾರ್ಯಕ್ರಮಗಳಲ್ಲಿ ನಮಗೆ ಕಡಿತವಾಗಿದೆ. ಹೆಚ್ಚಿನ ಹಣವನ್ನು ರಾಜ್ಯಗಳಿಗೆ ನಾವು ಕೊಟ್ಟಿದ್ದೇವೆನ್ನುವ ಮಾತನ್ನು ಪದೇ ಪದೇ ಕೇಂದ್ರ ಸರ್ಕಾರದವರು ಹೇಳುತ್ತಾರೆ. ಆದರೆ, ಅದು ವಾಸ್ತವಾಂಶಕ್ಕೆ ಹತ್ತಿರವಿರುವ ಮಾತಲ್ಲ. ಹೀಗೆ ಏಕೆ ಹೇಳುತ್ತಿದ್ದೇನೆಂದರೆ, ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ taxes ನಲ್ಲಿ ಬರುತ್ತಿದ್ದ ಹಣ state shre of central taxes 2013–14 ರಲ್ಲಿ 16,560 ಕೋಟಿ ರೂಪಾಯಿಗಳಿತ್ತು. 2015–16 ರಲ್ಲಿ ಅದು 24,790 ಕೋಟಿ ರೂಪಾಯಿಗಳು ಆಗಿದೆ. 32% ಇದ್ದದ್ದು 42% ಏನಾಯಿತು, ಒಟ್ಟಾರೆ 8,230 ಕೋಟಿ ರೂಪಾಯಿಗಳು ಜಾಸ್ತಿ ಆಯಿತು. ಆದರೆ ನಮಗೆ Central Plan

Grants ಏನಿತ್ತು centrally sponsored schemes ಗೆ ಇದ್ದಂಥ ಅನುದಾನ ಕಳೆದ ವರ್ಷ ನಮಗೆ 16,626 ಕೋಟಿ ರೂಪಾಯಿಗಳಿತ್ತು. ಅದು ಈ ವರ್ಷ 8,146 ಕೋಟಿ ರೂಪಾಯಿಗಳಿಗೆ ಇಳಿಯಿತು. So, plus ಆಗಿದ್ದು 8230 ಕೋಟಿ ರೂಪಾಯಿಗಳು, minus ಆಗಿದ್ದು 8,480 ಕೋಟಿ ರೂಪಾಯಿಗಳು. ಮುಂದುವರೆದು, Centıal Finance Commission ನವರು ಕೆಲವು specific schemes ಗೆ ರಾಜ್ಯಗಳಿಗೆ grant ಕೊಡುತ್ತಾರೆ. ಆ ಯೋಜನೆಯಲ್ಲಿ 2014-15 ರಲ್ಲಿ 3,509 ಕೋಟಿ ರೂಪಾಯಿಗಳು ನಮ್ಮ ರಾಜ್ಯಕ್ಕೆ ಬಂದಿತ್ತು. 2015-16 ರಲ್ಲಿ ನಮಗೆ 1,772 ಕೋಟಿ ರೂಪಾಯಿಗಳು ಮಾತ್ರ ಬಂದಿದೆ. ಅಂದರೆ 1,737 ಕೋಟಿ ರೂಪಾಯಿಗಳು ಕಡಿತವಾಗಿದೆ. ಹಾಗೆಯೇ ಈ GSDP ಯನ್ನು calculate ಮಾಡುವ ವಿಧಾನದಲ್ಲಿ ಬದಲಾವಣೆ ಮಾಡಿದರು. ಅದರಿಂದ ನಾವು ಸಾಲ ತೆಗೆದುಕೊಳ್ಳುವ ಮಿತಿ ಏನಿದೆ, ಅದು 1,504 ಕೋಟಿ ರೂಪಾಯಿಗಳು ಕಡಿಮೆ ಆಯಿತು. ಒಟ್ಟಾರೆ ಇವೆಲ್ಲವುಗಳ effect ನಮ್ಮ ಆಯವ್ಯಯದ ಮೇಲೆ ಏನಾಗಿದೆ ಎಂದರೆ 3,491 ಕೋಟಿ ರೂಪಾಯಿಗಳು ನಮ್ಮ ಕೈಗೆ ಬರುವುದು ಕಡಿಮೆ ಆದ ಹಾಗೆ ಆಗಿದೆ. ಹಾಗಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ನಮ್ಮ ರಾಜ್ಯದಲ್ಲಿ drip irrigation subsidy ಗೆ, ಕೃಷಿ ಯಾಂತ್ರೀಕರಣ subsidy ಗೆ telemetric station ಹಾಕುವುದಕ್ಕೆ, University ಗಳಿಗೆ ಎಲ್ಲಾದಕ್ಕೂ ನಾವು RKVY ನಲ್ಲಿ funding ತೆಗೆದುಕೊಳ್ಳುತ್ತಿದ್ದೆವು. RKVY ನಲ್ಲಿ ಈ ವರ್ಷ ನಮ್ಮ ರಾಜ್ಯಕ್ಕೆ 1,089 ಕೋಟಿ ರೂಪಾಯಿಗಳು ಬರುತ್ತದೆ ಎಂದು ನಾವು ನಿರೀಕ್ಷೆ ಇಟ್ಟುಕೊಂಡಿದ್ದೆವು. ಕೇಂದ್ರ ಸರ್ಕಾರದ total RKVY budget ಈ ವರ್ಷ 10 ಸಾವಿರ ಕೋಟಿ ರೂಪಾಯಿಗಳು ಇರಬೇಕಾದುದ್ದನ್ನು 4.50 ಕೋಟಿ ರೂಪಾಯಿಗಳಿಗೆ ಸೀಮಿತ ಮಾಡಿದ್ದಾರೆ. ಅದರಲ್ಲಿ ರಾಜ್ಯಕ್ಕೆ 1800 ಕೋಟಿ ರೂಪಾಯಿಗಳನ್ನು ಕೊಡುವ ಪ್ರಶ್ನೆಯೇ ಇಲ್ಲವೆಂದು ಬಹುಶಃ ಕಾಣುತ್ತದೆ. ನಾವು ಅಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರೂ ಸಹ ಕೊನೆಗೆ ಅವರು ಏನು ಮಾಡಿದರೆಂದರೆ, ಮೊದಲು RKVY 100% centrally sponsored scheme, ಈಗ ಹೊಸ guidelines issue ಮಾಡಿ 50:50 ಮಾಡಿದ್ದಾರೆ, ನಾವು ಆಯಿತು ಎಂದು ಹೇಳಿದ್ದೇವೆ. ನಮ್ಮ ಪಾಲು 1,089 ಕೋಟಿ

ರೂಪಾಯಿಗಳಲ್ಲಿ 540 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಹೇಳಿದ್ದೇವೆ. ಆದರೆ, ಕೇಂದ್ರ ಸರ್ಕಾರದವರು ಕೇವಲ 322 ಕೋಟಿ ರೂಪಾಯಿಗಳು ಅಷ್ಟೇ ನಿಮಗೆ ಕೊಡುವುದಕ್ಕೆ ಆಗುವುದು ಎಂದು ಹೇಳಿದ್ದಾರೆ. So, ಕಳೆದ ವರ್ಷ ನಾವು 750 ಕೋಟಿ ರೂಪಾಯಿಗಳನ್ನು ತೆಗೆದುಕೊಂಡವರು, ಈ ವರ್ಷ ನಮಗೆ ಕೇವಲ 322 ಕೋಟಿ ರೂಪಾಯಿಗಳಲ್ಲಿ ಬಹುಶಃ ನಾವು ನಿರ್ವಹಣೆ ಮಾಡಬೇಕಾಗುತ್ತದೆಯೋ ಏನೋ ಎನ್ನುವ ಆತಂಕ ನಮಗೆ ಈ ವರ್ಷ ಕಾಣುತ್ತಿದೆ. ಅದೇ ರೀತಿ ಸುಮಾರು ಕೇಂದ್ರ ಪುರಸ್ಕೃತ ಯೋಜನೆಗಳು, National Mission on Food Processing 75% central, 25% state share ಇತ್ತು, ಈ ವರ್ಷ ಆ scheme ಇಲ್ಲ. ಹಾಗೆಯೇ National Food Security Mission 100% centrally sponsored ಇದ್ದದ್ದು ಈಗ 50:50 ಗೆ ಬಂದಿದೆ. RKVY 100% centrally sponsoered ಇದ್ದದ್ದು ಈಗ 50:50 ಗೆ ಬಂದಿದೆ. 50% ಗೆ ನಾವು 500 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಿದ್ದೇವೆ. ಆದರೆ, ಅವರು ಕರ್ನಾಟಕಕ್ಕೆ ಕೇವಲ 322 ಕೋಟಿ ರೂಪಾಯಿಗಳು ಅಷ್ಟೇ ಕೊಡುವುದು ಎಂದು ಹೇಳುತ್ತಿದ್ದಾರೆ. Nation Mission on Oil Seeds and Oil Palm 75-25 ಇತ್ತು. ಈಗ 50–50 ಆಗಿದೆ. National Mission on Sustainable Agriculture 100% ಇದ್ದಿದ್ದು ಈಗ 50% ಗೆ ಬಂದಿದೆ. ಹೀಗೆ ಅನೇಕ ಯೋಜನೆಗಳಲ್ಲಿ ನಮಗೆ ಕಡಿತವಾಗಿರುವುದರಿಂದ ನಮಗೆ ಬಹಳ ಇಕ್ಕಟ್ಟಾಗುತ್ತಿದೆ. ಅದರ ಜೊತೆಗೆ ಬಹಳ ದುರದೃಷ್ಟಕರ ಎಂದರೆ ಹನಿ ನೀರಾವರಿ. ಹನಿ ನೀರಾವರಿ ಬಗ್ಗೆ ನಾವೆಲ್ಲರೂ ಭಾಷಣ ಮಾಡುತ್ತೇವೆ. ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳು ಸಹ ಹೇಳುತ್ತಾರೆ. ಪ್ರತಿ ಹನಿ ನೀರಿಗೂ ಸಹ ನಾವು ಹೆಚ್ಚಿಗೆ ಮಾನ್ಯತೆಯನ್ನು ಕೊಡಬೇಕೆಂದು ಹೇಳುತ್ತಾರೆ. ನಾವೂ ಒಪ್ಪುತ್ತೇವೆ. ಹರ್ ಬೂಂದ್ ಪಾನಿ ಎಂದು ಮಾತನಾಡುವಾಗ ಸಂಪೂರ್ಣವಾಗಿ ಆ ವಿಚಾರದಲ್ಲಿ ನಾವಿದ್ದೇವೆ. ಬಹುಶಃ ಕೇಂದ್ರ ಸರ್ಕಾರದಲ್ಲಿ ಎಲ್ಲಿ ಸಮನ್ವಯತೆ ಕೊರತೆ ಇದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಏಕೆ ಹೇಳುತ್ತಿದ್ದೇನೆಂದರೆ ಕೇಂದ್ರ ಸರ್ಕಾರದಲ್ಲಿ ಹೊಸ ಸರ್ಕಾರ ಬಂದಮೇಲೆ ಮೊದಲಿಗೆ ಹಿಂದಿನ ಸರ್ಕಾರ ಇದ್ದಾಗ ಕೇಂದ್ರ

ಸರ್ಕಾರ ಸಹಾಯಧನ ಶೇ. 45 ರಷ್ಟು ಬರುತ್ತಿತ್ತು. ಅಂದರೆ, small and marginal farmers ಗೆ 50% other farmers ಗೆ 40% drip irrigation ಮೇಲೆ subsidy ಇತ್ತು. ಹೊಸ ಸರ್ಕಾರ ಬಂದ ಕೂಡಲೇ ಅದನ್ನು ಮಾರ್ಪಾಡು ಮಾಡಿದರು. ಮಾರ್ಪಾಡು ಮಾಡಿ ಏನು ಮಾಡಿದರು ಎಂದರೆ, DPAP and Non DPAP taluka ಎಂದು ಮಾಡಿದರು. ಅದನ್ನು ಮಾಡಿದ್ದರಿಂದ ಏನಾಯಿತು ಎಂದರೆ, 50–40% ಇದ್ದಿದ್ದು 35% ಗೆ ಬಂತು ಹಾಗೂ ಇತರೆ ಅಂದರೆ small and marginal ಗೆ 35%, ಇತರರಿಗೆ 25% ಆಯಿತು. DPAP taluk ನಲ್ಲಿ 50–35% ಗೆ ಇಳಿಸಿದರು. ಈಗ ಮತ್ತೆ ಅದನ್ನು ಪರಿಷ್ಕರಣೆ ಮಾಡಿ ಅಂತಿಮವಾಗಿ ಅಂದರೆ ಬರಪೀಡಿತ ತಾಲ್ಲೂಕು (drought prone talukas) ನಲ್ಲಿ DPAP taluk ನಲ್ಲಿ small and marginal farmers ಗೆ 30% ಮಾಡಿದ್ದಾರೆ. ಇತರೆ ರೈತರಿಗೆ 22.5% ಇದೆ. DPAP taluk ನಲ್ಲಿ ಸಣ್ಣ, ಅತಿ ಸಣ್ಣ, ಪರಿಶಿಷ್ಟ ಜಾತಿ:ಪಂಗಡ ಅಲ್ಲಿ 22.5%, ಇತರರಿಗೆ 17.5% ಇದೆ. So, net effect 45% ಇದ್ದ drip irrigation subsidy, ಈಗ 22.5% ಗೆ ಬಂದು ನಿಂತಿದೆ. ಎಲ್ಲಿ ಸಮನ್ವಯ ಕೊರತೆ ಆಗುತ್ತಿದೆ, ನನಗೆ ಗೊತ್ತಾಗುತ್ತಿಲ್ಲ. Burden ವಿಷಯಕ್ಕೂ ಬರುತ್ತೇನೆ. ಇದರಿಂದ ಎಷ್ಟು burden ಆಗುತ್ತದೆಂದರೆ, 14–15 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ಒಂದರಲ್ಲಿ 36 ಕೋಟಿ ರೂಪಾಯಿ ನಮಗೆ additional burden ಆಯಿತು. ಈ ವರ್ಷ ಅಂದರೆ, 15–16 ನೇ ಸಾಲಿನಲ್ಲಿ ಹೊಸ ಮಾನದಂಡದ ಪ್ರಕಾರ ತೋಟಗಾರಿಕೆ ಇಲಾಖೆಗೆ ಸುಮಾರು 63 ಕೋಟಿ ರೂಪಾಯಿ additional burden just on account of micro irrigation ಆಗುವಂಥ ಸಾಧ್ಯತೆ ಇದೆ. Central Government ನವರು ಅವರ shaie ಅನ್ನೇ ಕಡಿತ ಮಾಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಏನಾಗಿದೆ ಎಂದರೆ, 4th Finance Commission recommendations ನಲ್ಲಿ agriculture, rural development, ಕೆಲವು sector ಗಳಿಗೆ ಏನು ಹೆಚ್ಚಿನ subsidy ಮತ್ತು ಬೇರೆ ಬೇರೆ ಹಣವನ್ನು ಕೊಡುತ್ತಿದ್ದರು, ಅವೆಲ್ಲವನ್ನೂ ಕಡಿತಗೊಳಿಸಿಬಿಟ್ಟರು. ಇದು ಕರ್ನಾಟಕಕ್ಕೆ ಅಲ್ಲ. ರಾಷ್ಟ್ರದ ಎಲ್ಲಾ ರಾಜ್ಯಗಳಿಗೆ. ಕಡಿತಗೊಳಿಸಿದ್ದರಿಂದ ರಾಜ್ಯಕ್ಕೆ

ಸಿಗಬೇಕಾದಂಥ ಹೆಚ್ಚಿನ ಹಣ ಕಡಿಮೆಯಾಗಿ ಈಗ ಇವರಿಗೆ burden ಜಾಸ್ತಿಯಾಗುತ್ತಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಕೃಷಿ ಸಚಿವರೆ, ಎಲ್ಲಾ ಕಡೆಯಲ್ಲೂ ರೈತರು ಮೊದಲು announce ಮಾಡಿದ್ದರಿಂದ subsidy ಹಣ ಬರುತ್ತದೆ ಎನ್ನುವಂಥ ನಿಖರತೆ ಮತ್ತು guarantee ಯೊಳಗೆ ಇದ್ದಾರೆ. ಈಗ ಸರ್ಕಾರಕ್ಕೆ burden ಆಗುತ್ತದೆಯೋ, ಬಿಡುತ್ತದೆಯೋ, ರೈತರಿಗೆ . . . .

ಶ್ರೀ ಕೃಷ್ಣ ಬೈರೇಗೌಡ:- ನಾನು ಪೂರ್ತಿ ಹೇಳಲೇ ಇಲ್ಲ.

ಶ್ರೀ ಸಿ.ಟಿ. ರವಿ:- ನೀವು ಈಗ ಸಚಿವರಾಗಿ ಹೇಳುತ್ತಿದ್ದೀರಿ. ನೀವು ಹೇಳಿದ್ದೀರಿ. ನೀವು ಹೇಳಿದ ಮಾತು 100% ನಿಜ ಇದೆ ಎಂದೇ ಒಪ್ಪಿಕೊಳ್ಳೋಣ. ತಪ್ಪು ಮಾಹಿತಿ ಕೊಡುವಂಥದ್ದಾಗಬಾರದು. Re allocation ಮಾಡಿದ್ದಾರೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ. ನಿಮಗೆ ಅದು re allocation.

ಶ್ರೀ ಕೃಷ್ಣ ಬೈರೇಗೌಡ:- ಕಳುಹಿಸಿಕೊಡುತ್ತೇನೆ.

ಶ್ರೀ ಸಿ.ಟಿ. ರವಿ:- ನಿಮ್ಮ ಹಳೆಯ scheme ಗಳನ್ನು wind up ಮಾಡಿ re allocation ಮಾಡುವಂಥದ್ದು ಮಾಡಿದೆ. ನೀವು ಇನ್ನೊಂದು ಹೇಳಿದಿರಿ. 14ನೇ ಹಣಕಾಸು ಪ್ರಕಾರ 42% ಕೊಡುವುದರಿಂದ ನಮಗೆ minus ಆಗುತ್ತಿದೆ ಎಂದು ಹೇಳಿದಿರಿ. ಬಹಳ ಸ್ಪಷ್ಟವಾಗಿ ಕೇಂದ್ರ ಸಚಿವರು ಒಂದು ಮಾತು ಹೇಳಿದ್ದರು. ಕರ್ನಾಟಕ ಸರ್ಕಾರ ನಮಗೆ 32% ಅದನ್ನೇ ಕೇಳಿ ಹಳೆಯ scheme ಪ್ರಕಾರವೇ allocation ಕೊಡಿ ಎಂದರೆ ನಿಮಗೆ ಅದನ್ನೇ ಕೊಡುತ್ತೇವೆಂದು ಹೇಳಿದರು. 13th Finance ಪ್ರಕಾರವೇ ನಮಗೆ ಕೊಡಿ, 14th finance ಪ್ರಕಾರ ಬೇಡ ಎಂದು ಹೇಳಿ. ನೀವು ಕರ್ನಾಟಕದಿಂದ resolution ಮಾಡಿ ಕೊಡಿ. ನಿಮಗೆ ಅದನ್ನೇ ಕೊಡಿಸುತ್ತೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ನಿಮಗೆ ಕಡಿಮೆ ಕೊಟ್ಟರೆ ಹೆಚ್ಚಿಗೆ ಕೊಡಲು ಒತ್ತಾಯ ಮಾಡಿ.

ಶ್ರೀ ಸಿ.ಟಿ. ರವಿ:- ನೀವು ತಪ್ಪು ಮಾಹಿತಿ ಕೊಡುವಂಥದ್ದು ಮಾಡುತ್ತಿದ್ದೀರಿ.

ಶ್ರೀ ಕೃಷ್ಣ ಬೈರೇಗೌಡ:- ಇಲ್ಲ.

ಶ್ರೀ ಸಿ.ಟಿ. ರವಿ:- ಒಟ್ಟಾರೆಯಾಗಿ ಈ 5 ವರ್ಷಗಳಲ್ಲಿ ಎಲ್ಲಾ ರಾಜ್ಯಗಳಿಗೂ ಕರ್ನಾಟಕಕ್ಕೆ, 1 ಲಕ್ಷದ 12 ಸಾವಿರ ಕೋಟಿ ರೂಪಾಯಿ ಹೆಚ್ಚುವರಿಯಾಗಿ ಹಣ ಸಿಗುತ್ತದೆ. ಮಾನ್ಯ ಸಭಾಧ್ಯಕ್ಷರು ಹೇಳಿದರೆ, ನಿಮಗೆ ಅಂಕಿಅಂಶಗಳನ್ನು ನಾಳೆ ಬೆಳಗ್ಗೆ ದಾಖಲೆ ಸಮೇತ ತಂದು ಕೊಡುತ್ತೇನೆ. ಕಾಪಿ ಬೆಂಗಳೂರಿನಲ್ಲಿದೆ. ನಾನು ತಂದುಕೊಡುತ್ತೇನೆ. ನಿಮ್ಮದು ಸುಳ್ಳಾಗಿದ್ದರೆ ನೀವು ಹೇಳಿ. ನಮಗೆ 13th Finance ಪ್ರಕಾರವೇ ಕೊಡಿ. ನಾವು ಇದನ್ನು ಕೇಂದ್ರ ಸಚಿವರ ಜೊತೆ ಚರ್ಚಿಸಿ . . . .

(ಗೊಂದಲ)

ಶ್ರೀ ಸಿ.ಟಿ. ರವಿ:- ನಾನು ಪೂರ್ಣ ಮಾಡುವುದಕ್ಕೆ ಬಿಡಿ. ರಾಯರೆಡ್ಡಿಯವರೆ, ಒಂದು ನಿಮಿಷ ಇರಿ. ನಾನು ಮಾತನಾಡುವುದಕ್ಕೆ ಬಿಡಿ. ನೀವು ಆಮೇಲೆ ಮಾತನಾಡಿ. ನಾನು ಮಾತನಾಡುವುದು ಬಿಟ್ಟಮೇಲೆ ನೀವು ಮಾತನಾಡಿ. ಹೀಗೆ statement ಕೊಟ್ಟಿದ್ದಾರೆಂದು ನಾವು ನಮ್ಮ ಪಕ್ಷದ ವೇದಿಕೆಯಲ್ಲಿ ಕೇಂದ್ರ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿದೆವು. ಅದಕ್ಕೆ ಅವರು ಸ್ಪಷ್ಟವಾಗಿ ಅಂಕಿ ಅಂಶ ಕೊಟ್ಟು ಹೇಳಿದ್ದಾರೆ. ಜೊತೆಗೆ, ಕೇಂದ್ರದ ಹಣಕಾಸು ಸಚಿವರು ಯಾವ್ಯಾವ ರಾಜ್ಯಗಳಿಗೆ ಎಷ್ಟೆಷ್ಟು ಲಾಭವಾಗುತ್ತದೆಂದು ನಮಗೊಂದು format ಅನ್ನೂ ಕೊಟ್ಟಿದ್ದಾರೆ. ಅದರ ಕಾಪಿಯನ್ನೂ ಕೂಡ ಈಗ ಬೇಕಾದರೆ mail ತರಿಸಿಕೊಂಡು ಕೊಡುತ್ತೇನೆ. ಯಾವ್ಯಾವ ರಾಜ್ಯಕ್ಕೆ ಎಷ್ಟೆಷ್ಟು ಲಾಭವಾಗುತ್ತದೆಂದು ಕೊಡುತ್ತೇನೆ. ಅವರ ಲೆಕ್ಕದ ಪ್ರಕಾರ 1 ಲಕ್ಷದ 12 ಸಾವಿರ ಕೋಟಿ ರೂಪಾಯಿ 2015 ರಿಂದ 2020 ಕ್ಕೆ ರಾಜ್ಯಕ್ಕೆ ಹೆಚ್ಚುವರಿಯಾಗಿ 5 ವರ್ಷಗಳಲ್ಲಿ ಬರುತ್ತದೆ. ಇದೇನಾದರೂ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದರೆ ನಿಮ್ಮ ಧ್ವನಿ ಜೊತೆಗೆ ನಾವೂ ಇದ್ದೇವೆ. ನೀವು ಇಲ್ಲಿಂದ resolution ಮಾಡಿ. ನಮಗೆ 14th Finance ಪ್ರಕಾರ ಬೇಡ, 13th

Finance ಮಾನದಂಡದ ಪ್ರಕಾರವೇ ನಮ್ಮ ರಾಜ್ಯಕ್ಕೆ ಕೊಡಿಸಿ ಎಂದು ಹೇಳಿ. ಅವರು ಅದನ್ನೇ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದನ್ನು ಮಾಡಿಸಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- Defence ಯಾಕೆ ಮಾಡಿಕೊಳ್ಳುತ್ತಿರುವುದು. Agriculture sector ನ್ನು neglect ಮಾಡಿದ್ದೀರೆಂದು ಒಪ್ಪಿಕೊಳ್ಳಿ.

ಅಧ್ಯಕ್ಷರು:- ಸುಮ್ಮನಿರಿ. ಬೇಗ ಪೂರೈಸಿ.

ಶ್ರೀ ಬಸವರಾಜ ರಾಯರೆಡ್ಡಿ:- ಹೊಸ ಕಾನೂನನ್ನು ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಬೇಗ ಉತ್ತರ ಹೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- Finance Commission ಸಂವಿಧಾನ ಇದರಲ್ಲಿ ಆದಂಥದ್ದು. ಅಲ್ಲಿ ಯಾರೂ ಏನೂ change ಮಾಡಲಿಕ್ಕೆ ಬರುವುದಿಲ್ಲ. 13th Finance ಪ್ರಕಾರ ಕೊಡಲಿಕ್ಕೆ ಕೇಂದ್ರಸರ್ಕಾರಕ್ಕೆ ಯಾವ ಅಧಿಕಾರವಿದೆ? ಮತ್ತೆ ಅದಕ್ಕೊಂದು recommendation ಅನ್ನು ಒಂದು committee ಮಾಡಬೇಕಾಗುತ್ತದೆ. ಹಾಗೆ ಮಾಡಲಿಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಸುಮ್ಮನೆ ಏನೇನೋ ಮಾತನಾಡಲಿಕ್ಕೆ ಬರುತ್ತದೆಯೇ?

ಶ್ರೀ ವೈ.ಎಸ್.ವಿ. ದತ್ತಾ:- ಹಾಗಾಗಿ, ರೈತರಿಗೆ subsidy ಅವೆಲ್ಲ ತಡವಾಗಿದೆ ಎಂದು ಹೇಳುತ್ತಿದ್ದಾರೆ. ಸಿ.ಟಿ. ರವಿಯವರು, ಹಾಗೇನೂ ಆಗಿಲ್ಲ, ಇನ್ನೂ ನಾವು ಜಾಸ್ತಿ ಕೊಡುತ್ತಿದ್ದೇವೆ, ನಿಮಗೇನು ಬೇಕಿದ್ದರೂ ಮಾಡಿಕೊಡುವುದಕ್ಕೆ ನಾವು ತಯಾರಿದ್ದೇವೆ. ರಾಜ್ಯ ಸರ್ಕಾರವೇ ತಯಾರಿಲ್ಲ ಎನ್ನುವ ತರಹದಲ್ಲಿ ಅವರು ಹೇಳುತ್ತಿದ್ದಾರೆ. ನನಗೆ, ನಿಮ್ಮ ಸರ್ಕಾರ, ನಿಮ್ಮ

ಪಕ್ಷದ್ದಲ್ಲ, ಅವರ ಸರ್ಕಾರ, ಅವರ ಪಕ್ಷದ್ದಲ್ಲ. ನಮಗೆ ಬೇಕಾಗಿರುವುದೇನೆಂದರೆ, ರೈತರಿಗೆ ಯಾವುದೂ ನಿಲ್ಲಬಾರದು, ಬರಬೇಕಾದ್ದವೆಲ್ಲ ಬರಬೇಕು, ಮುಟ್ಟಬೇಕಾದ್ದೆಲ್ಲ ಮುಟ್ಟಬೇಕು. ಸ್ಪಷ್ಟವಾಗಿ ಹೇಳಿ. ಅವರಿಂದ ತೊಂದರೆಯಾಗಿದೆಯೇ? ಅಥವಾ ನೀವೇ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಸಿ.ಟಿ. ರವಿ:- ಅವರ ಬುದ್ಧಿವಂತಿಕೆಯಲ್ಲಿ ಲಾಭವಾಗುವಂಥದ್ದನ್ನು ಮರೆಮಾಚಿದ್ದಾರೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ತಮ್ಮ ವಿಚಾರ ತಾವು ಹೇಳಿದ್ದೀರಿ.

(ಗೊಂದಲ)

ಅಧ್ಯಕ್ಷರು:- ಸಾಕು ಬಿಡಿ. ಬೇಗ ಪೂರೈಸಿ.

ಶ್ರೀ ಸಿ.ಟಿ. ರವಿ:- ಲಾಭವಾಗುವಂಥದ್ದನ್ನು ಮರೆಮಾಚಿದ್ದಾರೆ. Horticultue ನದ್ದು online marketing, ರೈತರದ್ದು cooperative system create ಮಾಡುತ್ತಿರುವಂಥದ್ದು ಕೇಂದ್ರಸರ್ಕಾರದ ಯೋಜನೆ. ಅಪ್ಪಿತಪ್ಪಿಯೂ ನೀವು ಹೇಳಲಿಲ್ಲ.

ಅಧ್ಯಕ್ಷರು:- ಆಯಿತು ಬಿಡಿ.

ಶ್ರೀ ಸಿ.ಟಿ. ರವಿ:- ಅದರಲ್ಲಿ ಒಂದು ರೂಪಾಯಿಯೂ ರಾಜ್ಯದ್ದು ಇಲ್ಲ.

ಅಧ್ಯಕ್ಷರು:- ರವಿಯವರೆ, ದಯವಿಟ್ಟು, ಆ ಸರ್ಕಾರದವರು ನೋಡಿಕೊಳ್ಳುತ್ತಾರೆ. ಹೇಳಿ.

ಶ್ರೀ ಸಿ.ಟಿ. ರವಿ:- Online marketing ಕೂಡ ಕೇಂದ್ರದ್ದೇ ಯೋಜನೆ. ಬುದ್ಧಿವಂತಿಕೆಯಲ್ಲಿ ಯಾವುದು ಬೇಕೋ ಅದನ್ನು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಸುಮ್ಮನೆ ಬಿಡಿ, ಸಾಕು, ಹೇಳಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಎಲ್ಲವೂ ಕೇಂದ್ರ ಸರ್ಕಾರದ ಮೇಲೆ ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು:- ಬೇಗ ಉತ್ತರ ಹೇಳಿ. ಪೂರೈಸುತ್ತೀರೋ, ಇಲ್ಲವೋ? 6.15 ಗಂಟೆ ಆಯಿತು.

ಶ್ರೀ ಸಿ.ಟಿ. ರವಿ:- ಕೇಂದ್ರ ಸಚಿವರು ಕಳುಹಿಸಿರುವ ಮಾಹಿತಿ ಇದೆ. Mail ತರಿಸಿ ತರಿಸಿ ನಾನು ಕೊಡುತ್ತೇನೆ.

ಅಧ್ಯಕ್ಷರು:- ಸರ್ಕಾರ ನಡೆಸುವವರಿಗೆ ಗೊತ್ತು ಬಿಡಿ. ನೀವು ಏಕೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು:- ಆಯಿತು ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಹನಿ ನೀರಾವರಿಗೂ ಸಹ ಕೇಂದ್ರ ಸರ್ಕಾರ ಕೊಡತಕ್ಕಂಥ ಹಣ ಕಡಿತವಾಗಿದೆ ಅನ್ನುವುದನ್ನು ಹೇಳಿ ಅದಕ್ಕೆ ಪೂರಕವಾಗಿ ಇನ್ನೂ ವಿಸ್ತೃತವಾದಂಥ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಇದನ್ನು ನಾನು ತಯಾರು ಮಾಡಿದ್ದಲ್ಲ. ರಾಜ್ಯದ ಅಧಿಕಾರಿಗಳು ತಯಾರು ಮಾಡಿರುವುದು. ಅಧಿಕಾರಿಗಳಿಗೆ ಯಾವ ಪಕ್ಷವೂ ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಏನಾದರೂ ಬೇರೆ ಮಾಹಿತಿ ಇದ್ದರೆ ಅದನ್ನು ನಾನು ಅಧಿಕಾರಿಗಳಿಗೆ ಕೊಟ್ಟು ಅವರ ಕಡೆಯಿಂದ ಅವರ ಕೊಟ್ಟಿದ್ದು ಸರಿ ಇದೆಯೋ, ಇಲ್ಲವೋ ಎನ್ನುವುದನ್ನು ನಾನು verify ಮಾಡಿಸುತ್ತೇನೆ. ನಮಗೆ ಕಡಿತವಾಗಿದ್ದರೂ ಸಹ ಹನಿ ನೀರಾವರಿಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಕೇಂದ್ರ ಸರ್ಕಾರ ತನ್ನ ಪಾಲನ್ನು ಕಡಿತ ಮಾಡಿದ್ದರೂ ಆ ಪಾಲನ್ನು ನಾವೇ ಭರಿಸ ಕೊಡಬೇಕು ಅನ್ನುವಂಥ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಯವರು

ತೆಗೆದುಕೊಂಡಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಇದನ್ನು ನಾನು ಹೇಳಿದ್ದು. ರೈತರಿಗೆ ನಾವು ಅದೇ 90% ಅನ್ನು maintain ಮಾಡುತ್ತಿದ್ದೇವೆ. ಹೌದು. ಬೇಕಾದರೆ ಅವರಿಗೆ ನಾನು circular ಕಳುಹಿಸಿಕೊಟ್ಟೆ. ಮಾನ್ಯ ಅಧ್ಯಕ್ಷರೆ, ತಮಗೂ ನಾನು ಕಳುಹಿಸಿಕೊಡುತ್ತೇನೆ. ರೈತರ ಹಿತದೃಷ್ಟಿಯಿಂದ ನಾವು ಎಲ್ಲಾ ಕಾರ್ಯಕ್ರಮಗಳನ್ನು ಕಾಪಾಡಿಕೊಳ್ಳುವುದಕ್ಕಾಗದೇ ಹೋದರೂ ಅವಶ್ಯವಾದಂಥ ಕಾರ್ಯಕ್ರಮಗಳನ್ನು ನಾವು ಕಾಪಾಡಿಕೊಳ್ಳುತ್ತಿದ್ದೇವೆ. ಇದೆಲ್ಲದರ ನಡುವೆಯೂ ಸಹ ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ಅನುದಾನವನ್ನು ಕೃಷಿ ಇಲಾಖೆಗೆ ಮತ್ತು ತೋಟಗಾರಿಕೆ ಇಲಾಖೆಗೆ ಒದಗಿಸಿಕೊಟ್ಟಿದ್ದಾರೆ. ಬಹುಶಃ ಈ ವರ್ಷ ಇನ್ನೂ ಸ್ವಲ್ಪ ಗೊಂದಲವಿದೆ. ಕೇಂದ್ರ ಸರ್ಕಾರದ ಅನೇಕ ಯೋಜನೆಗಳು schemes finalize ಆಗಿಲ್ಲ. ಹಾಗಾಗಿಯೂ ಸಹ ಇಲ್ಲಿಯವರೆಗೂ ಸ್ಪಷ್ಟತೆ ಇಲ್ಲ. ಕೃಷಿ ಸಿಂಚಾಯಿ ಯೋಜನೆ 1ನೇ ತಾರೀಖು ಕ್ಯಾಬಿನೆಟ್‌ನಲ್ಲಿ pass ಆಗಿದೆ. ನಾವು guidelines ಕೇಳಿದ್ದೇವೆ. ಇವತ್ತಿನವರೆವಿಗೂ ಸಹ guidelines ನಮಗೆ ಇನ್ನು ಸಿಕ್ಕಿಲ್ಲ. ಸ್ವಲ್ಪ ಗೊಂದಲವಿದ್ದರೂ AIBP ತೆಗೆದುಬಿಟ್ಟಿದ್ದಾರೆ. Watershed ಗೆ ನಮಗೆ ಇದ್ದಂಥ ಅನುದಾನ ನಾನು ಹೋದ ವರ್ಷ ಕೇಳಿದ್ದೂ 326 ಕೋಟಿ, ಅವರು ಕೊಟ್ಟಿದ್ದು 40 ಕೋಟಿ. ಈ ವರ್ಷವೂ ಸಹ ನಮ್ಮದು watershed budget ಸಾಮಾನ್ಯವಾಗಿ 600 ರಿಂದ 700 ಕೋಟಿ ಇರುತ್ತಿತ್ತು. ಈ ವರ್ಷ ನಾವು 300 ಕೋಟಿಗೆ ಇಳಿಸಿದ್ದೇವೆ. ಏಕೆಂದರೆ, watershed programme was centrally sponsored programme ಇತ್ತು. ಹೀಗಾಗಿ Central Government ಅದನ್ನು 90% ಇದ್ದದ್ದನ್ನು 50% ಗೆ ತಂದಿದ್ದಾರೆ. ಹೀಗಾಗಿ ನಾವು ಸ್ವಲ್ಪ ಒದಗಿಸಿದ್ದೇವೆ, ಇಲ್ಲವೆಂದಲ್ಲ. ಕೆಲವು ಕಾರ್ಯಕ್ರಮಕ್ಕೆ ಸಂಪೂರ್ಣವಾಗಿ ಒದಗಿಸಲಿಕ್ಕಾಗಲಿಲ್ಲ. ಆದ್ಯತೆ ಕಾರ್ಯಕ್ರಮವಾದ ಹನಿ ನೀರಾವರಿಗೆ ನಾವು ಸಂಪೂರ್ಣವಾಗಿ ಒದಗಿಸುತ್ತಿದ್ದೇವೆ. ಕೆಲವು ಯೋಜನೆಗಳಲ್ಲಿ ನಮಗೆ ಸ್ವಲ್ಪ ತೊಂದರೆಯಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಇದಕ್ಕಾಗಿ ನಾನು ಆ ಮಾಹಿತಿ ಕೊಟ್ಟಿದ್ದು ಮತ್ಯಾರಿಗೊ ರಾಜಕೀಯ ಮಾಡುವುದಕ್ಕಾಗಿ ಅಲ್ಲ. ಪೂರಕವಾಗಿ ಮಾಹಿತಿ ಕೊಟ್ಟಿದ್ದು.

ಶ್ರೀ ಡಿ.ಎನ್. ಜೀವರಾಜ್:- Tiller ಮತ್ತು ಅಡಿಕೆ ಸುಲಿಯುವ machineಗೆ ಸ್ವಲ್ಪ ಜಾಸ್ತಿ ಕೊಡಿ ಸಾರ್ ಮಲೆನಾಡಿನಲ್ಲಿ ಅದನ್ನೇ ಕೇಳುವುದು.

ಶ್ರೀ ಕೃಷ್ಣ ಬೈರೇಗೌಡ:- ಖಂಡಿತ. ನಮಗೆ ಸ್ವಲ್ಪ ಅಡೆತಡೆಗಳಾಗಿದ್ದರೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ಅನುದಾನವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಒದಗಿಸಿದ್ದಾರೆ. ಬಂದಂಥ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಬೇಕೆಂದು ತೀಕ್ಷ್ಣವಾದ ಸೂಚನೆಯನ್ನು ಅನೇಕ ಮಾನ್ಯ ಶಾಸಕರು ಕೊಟ್ಟಿದ್ದಾರೆ. ಕೆಲವು ಯೋಜನೆಯಲ್ಲಿ ಅನುದಾನ ಕಡಿಮೆಯಾಗಿದೆ ಎಂಬುದನ್ನು ಅವರು ಓದಿ ಹೇಳಿದ್ದಾರೆ. ಮಾನ್ಯ ಕಾರಜೋಳ್‌ರವರು ನಾನು ಆಗ ಮಾತನಾಡಿದಾಗ ಇರಲಿಲ್ಲ. ಆದರೆ, ಕೆಲವು ಯೋಜನೆಗಳಲ್ಲಿ ಕಡಿಮೆಯಾದರೂ ಇನ್ನು ಕೆಲವು ಯೋಜನೆಯಲ್ಲಿ ಜಾಸ್ತಿ ಮಾಡಿದ್ದೇವೆ. Allocation ಗಿಂತ ಜಾಸ್ತಿ ಖರ್ಚು ಮಾಡಿದ್ದೇವೆ. ಈ ವರ್ಷ ಇನ್ನು ಸ್ವಲ್ಪ ಹೆಚ್ಚಿನ ಪ್ರಯತ್ನ ಮಾಡುತ್ತೇವೆ. ಅನುದಾನ ಕೊಟ್ಟಿದ್ದಾರೆಂದು ಖರ್ಚು ಮಾಡುವುದಲ್ಲ. ರೈತರಿಗೆ ಅನುಕೂಲವಾಗುತ್ತದೆ ಎಂದು ನಾವು ಖರ್ಚು ಮಾಡಬೇಕೆ ಹೊರತು ಹಣ ಇದೆ ಎಂದು ಖರ್ಚು ಮಾಡುವುದನ್ನು ನಾನು ನಂಬುವುದಿಲ್ಲ. ಅದನ್ನು ಆಧಾರವಾಗಿಟ್ಟುಕೊಂಡು ಈ ವರ್ಷದ ಆಯವ್ಯಯದಲ್ಲಿ ಇನ್ನು ಹೆಚ್ಚಿಗೆ ನಾವು ಪ್ರಯತ್ನಿಸಿ ಅನುದಾನವನ್ನು ರೈತರಿಗೆ ಸಮರ್ಪಕವಾಗಿ ಬಳಕೆ ಮಾಡುತ್ತೇವೆಂದು ಹೇಳಿ, ಈ ವರ್ಷ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ಪ್ರಸ್ತಾವಿಕವಾಗಿರತಕ್ಕಂಥ ಅನುದಾನಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂದು ಸವಿನಯವಾಗಿ ನಾನು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿ ನಮ್ಮ ಬೇಡಿಕೆಗೆ ತಾವೆಲ್ಲಾ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಸಾರ್ ನಾನು ಆಗಾಗ clarification ಕೇಳುತ್ತಿದ್ದೆ. ಒಂದು ನಿಮಿಷ ನಿಲ್ಲಿಸಿದಿರಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ನಾನು ನನ್ನ ಭಾಷಣದಲ್ಲಿ ಕೇಳಿದೆ. ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ Diploma, B.Sc. ಓದತಕ್ಕಂಥ ರೈತರ ಕೃಷಿ ಕಾರ್ಮಿಕರ ಮಕ್ಕಳಿಗೆ 40% ಮೀಸಲಾತಿ ತಾವು ಇಟ್ಟಿದ್ದೀರಿ. ITI ನಲ್ಲಿ 10 college ನಿಂದ 15 college ಗೆ ಕೃಷಿಯಾಧಾರಿತ ವಿಷಯ ಪಠ್ಯಕ್ರಮ ಮಾಡಿದಿರಿ. ತಾವು ಹೋಬಳಿವಾರು ಮಾತನಾಡಿದರೆ, there is a lot wide gap in between these ಕೃಷಿ ಕಾರ್ಮಿಕರಿಗೆ ಮತ್ತೆ ಜ್ಞಾನಕ್ಕೆ, ವಿಜ್ಞಾನಕ್ಕೆ, ಸಂಶೋಧನೆಗೆ, ತರಬೇತಿಗೆ, ಮಾರುಕಟ್ಟೆಗೆ. ಇದರಲ್ಲಿ ಮಧ್ಯವರ್ತಿಗಳು, ವ್ಯಾಪಾರರಸ್ಥರೇ ಲಾಭಾಂಶ ಪಡೆದಿರುವುದು. ಕೃಷಿ ಕ್ಷೇತ್ರದಲ್ಲಿ ಯಾವ ಕೃಷಿಕನೂ ಇಂದು ಸಂತೋಷವಾಗಿಲ್ಲ. ಯಾರು ಉತ್ಪಾದಕತೆ ಮಾಡತಕ್ಕಂಥ ಬೇಸಾಯಗಾರನಿರುತ್ತಾನೆ, ಅವರಿಗೆ ಮತ್ತು ಮಧ್ಯವರ್ತಿಗಳಿಗೆ gap. ಈ ಮಕ್ಕಳಿಗೆ ಅಲ್ಲಿ ವಿಶೇಷವಾಗಿ ದುಡಿಯತಕ್ಕಂಥ ಹೆಣ್ಣು ಮಕ್ಕಳಿಗೆ ತಾವು ಮೊದಲನೆಯದಾಗಿ ತರಬೇತಿ ಏನು ಕೊಡುತ್ತೀರಿ? ಅದಕ್ಕೆ ಏನಾದರೂ ಕೃಪಾಂಕ ರೀತಿಯಲ್ಲಿ ಅಥವಾ ಹೋಬಳಿ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ವಿಶೇಷವಾಗಿ ಕೃಷಿ ಕಾರ್ಮಿಕರ ಹೆಣ್ಣು ಮಕ್ಕಳಿಗೆ ತರಬೇತಿ ಕೊಡುವಂಥದ್ದಾಗಬೇಕು. ತರಬೇತಿ ಕೊಡತಕ್ಕಂಥ ವಿಚಾರದಲ್ಲಿ SC/ST ಹಣವನ್ನು ಅದಕ್ಕೆ ಉಪಯೋಗಿಸಬೇಕು. ಆ ವರ್ಗಕ್ಕೆ ಪೂರ್ತಿಯಾಗಿ ಹಣವನ್ನು ಜ್ಞಾನಕ್ಕೆ ಮತ್ತು ವಿಜ್ಞಾನಕ್ಕೆ ಹಾಗೂ ಸಂಶೋಧನೆಗೆ ಉಪಯೋಗಿಸಬೇಕು. Supreme Court ಗ್ರಾಮೀಣ ಕೃಪಾಂಕ ಹೊಡೆದು ಹಾಕಿತು, ಆ ವಿಚಾರ ಒಂದು ಕಡೆ ಇರಲಿ. ಬೆಳೆ ವಿಮೆಯ ಬಗ್ಗೆ, ಯಂತ್ರೋಪಕರಣಗಳನ್ನು ಪೂರೈಸಿದಿರಿ. ಆ seasonal ಯಂತ್ರಗಳು ಕೆಟ್ಟು ಹೋಗುತ್ತವೆ. ಅಲ್ಲಿ ಅವುಗಳನ್ನು repair ಮಾಡತಕ್ಕಂಥ ಜನ ಇಲ್ಲ. There is no technician. ಅದಕ್ಕಾಗಿ ಇದನ್ನು ತಾವು ಮಾಡಬೇಕು. ಏಕೆಂದರೆ, ಗೋದಾಮು ಕಟ್ಟುವ ವಿಚಾರ ಇದೆಯಲ್ಲ, ಆಮೇಲೆ ಯಂತ್ರೋಪಕರಣ ಮತ್ತು transformer repair ಇದರ ಬಗ್ಗೆ ತಾವು ಕಾಳಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):- ನಾನು 2-3 clarification ಮಾನ್ಯ ಕೃಷಿ ಸಚಿವರನ್ನು ಕೇಳುತ್ತೇನೆ. ಮಾನ್ಯ ಕೃಷಿ ಸಚಿವರು ಮೂರು ತಾಸು ಸಮಗ್ರವಾಗಿ ಮಾಹಿತಿ ಕೊಟ್ಟಿದ್ದಾರೆ. ಕೃಷಿ ಭಾಗ್ಯ ಯೋಜನೆಯನ್ನು ಜಾರಿ ಮಾಡಿದಿರಿ. ಇದ್ದ ಕೆರೆಯನ್ನು double ಮಾಡುವುದರ ಬಗ್ಗೆ ತಾವು clear ಮಾಡಲಿಲ್ಲ. ಅದೇ ರೀತಿಯಾಗಿ ಯಂತ್ರೋಪಕರಣ ಬಾಡಿಗೆ ಕೊಡುವ ವ್ಯವಸ್ಥೆ ಜಾರಿಗೆ ತಂದಿದ್ದೀರಿ. ದೊಡ್ಡ ದೊಡ್ಡ machine ಗಳನ್ನು ಕೆಲವು ಕಡೆ ಪೂರೈಕೆ ಮಾಡಿದಿರಿ, ಇನ್ನು ಕೆಲವವು ಕಡೆ ಪೂರೈಕೆ ಮಾಡಿಲ್ಲ. ದಯವಿಟ್ಟು ಅದನ್ನು ಸರಿಮಾಡಿ. 20 HP tractor ಗಿಂತ ಹೆಚ್ಚಿನ ಅಶ್ವಶಕ್ತಿ ಇರತಕ್ಕಂಥ tractor ಗಳು ನಮ್ಮ ಉತ್ತರ ಕರ್ನಾಟಕದಲ್ಲಿ ಉಪಯೋಗವಾಗುತ್ತವೆ. ಅದಕ್ಕೆ ವಿಶೇಷವಾಗಿ ಗಮನಹರಿಸಿ ಅದನ್ನು declare ಮಾಡಿ ಎಂದು ಹೇಳಿದ್ದೆವು. ರೈತರ ಆತ್ಮಹತ್ಯೆಯ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ ಹೇಳಿದ್ದೆವು. ಅದಕ್ಕೆ ನೀವೊಂದು ಸಮಿತಿ ಮಾಡುತ್ತೇನೆಂದು ಹೇಳಿದಿರಿ, ಅದಕ್ಕೆ ನಾನು ಒಪ್ಪುತ್ತೇನೆ. ಈ ಸಲ ಮುಂಗಾರು ಮಳೆ ಈಗ ಪ್ರಾರಂಭವಾಗಿತ್ತು, ಮತ್ತೆ ಮಳೆ ಬರುವುದು ತೊಂದರೆಯಾಯಿತು ಎಂದರೆ ಇನ್ನು ಮೇಲೆ ಬೆಳೆಗಳ ಕಥೆ ಮುಗಿದು ಹೋಗುತ್ತದೆಂದು ತಮ್ಮ ಗಮನ ಸೆಳೆದಿದ್ದೆ. ನಮ್ಮ ಅಣ್ಣೀಗೇರಿಯಲ್ಲಿ ಜನಾಬ್ ಅಬ್ದುಲ್ ಕಲಂ ನಡುಕಟ್ಟಿನ್ ಎನ್ನುವವರು ಮೊನ್ನೆ ರಾಷ್ಟ್ರ ಪ್ರಶಸ್ತಿಯನ್ನು President ಕಡೆಯಿಂದ ಪಡೆದರು. ಅವರು ಸಂಶೋಧನೆ ಮಾಡಿರುವ ವಿಚಾರ ತಮ್ಮ ಗಮನಕ್ಕೆ ತಂದೆವು ಅದಕ್ಕೆ ತಾವು ಉತ್ತರಿಸಲಿಲ್ಲ. ಈರುಳ್ಳಿ ಬೆಳೆದಂಥ ರೈತರಿಗೆ ಅರ್ಧ ರೈತರಿಗೆ ಕೊಟ್ಟಿರಿ, ಇನ್ನರ್ಧ ರೈತರಿಗೆ ಕೊಡಲಿಲ್ಲ. ಅದಕ್ಕೆ ತಾವು ಸ್ಪಷ್ಟೀಕರಣ ಇಲ್ಲಿಯವರೆಗೆ ಕೊಡಲಿಲ್ಲ. ಗೋವಿನ ಜೋಳ 1100/- ರೂ. ಕೊಟ್ಟು ಖರೀದಿಸಿದ್ದೀರಿ, ಕೇಂದ್ರ ಸರ್ಕಾರದಿಂದ 200/- ರೂ. ಬಂದರೆ ಕೊಡುತ್ತೇವೆಂದು ಹೇಳಿದ್ದೀರಿ. ಇಲ್ಲಿಯವರೆಗೆ ಆ 200/- ರೂಪಾಯಿಗಳನ್ನು ಕೂಡ ಕೊಡಲಿಲ್ಲ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ:- ಅವರ ಕಡೆಯಿಂದ ಪ್ರಶ್ನೆ ಬರೆಸಿಕೊಂಡು ಉತ್ತರ ಬರೆಸಿ ಕಳುಹಿಸುವುದು ಉತ್ತಮವೆಂದು ಹೇಳುತ್ತೇನೆ. ಏಕೆಂದರೆ, ಅವರಿಗೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಆಯಿತು ಸಾಕು ಬಿಡಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ತಾವು ಬೆಳೆ ವಿಮೆ ಬಗ್ಗೆ ಬೆಳಕು ಚೆಲ್ಲಿದಿರಿ. ಒಂದು ನಿಮಿಷ ದಯವಿಟ್ಟು ಯಾರು ಅವಸರ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು:- ಸಾಕು ಬಿಡಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಬೆಳೆ ವಿಮೆ important ಇದೆ.

(ಗೊಂದಲ)

ಅಧ್ಯಕ್ಷರು:- ಆಯಿತು, ಅದನ್ನು ಅವರು ವಿಸ್ತಾರವಾಗಿ ಹೇಳಿದ್ದಾರೆ ಬಿಡಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ನಮ್ಮ ಜಿಲ್ಲೆಯಿಂದ ಒಟ್ಟು 34,247 ರೈತರು 23 ಕೋಟಿ 33 ಲಕ್ಷ ರೂಪಾಯಿಗಳನ್ನು ತುಂಬಿದ್ದೇವೆ. ಬಂದಿದ್ದು 15 ಕೋಟಿ 35 ಲಕ್ಷ ಮಾತ್ರ. ನನ್ನ ಕ್ಷೇತ್ರದಿಂದ 10 ಲಕ್ಷ 10 ಸಾವಿರ ತುಂಬಿದರೆ 30,048 ರೂಪಾಯಿ ಬಂದಿದೆ, ಇದು ವೈಜ್ಞಾನಿಕವೆಂದು ತಿಳಿದು ಒಪ್ಪುವುದಾದರೆ ನಾವು ಈ ಸದನದಲ್ಲಿ ಕುಳಿತುಕೊಂಡು ಒಂದು ಕಂಪನಿಗೆ ಲಾಭ ಮಾಡುವುದಾದರೆ ಇದೊಂದು ರೀತಿ ಲಾಟರಿ ದಂಧೆಯಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದೆ. ಹುಬ್ಬಳ್ಳಿ ತಾಲ್ಲೂಕಿನಲ್ಲಿಯೂ ಕೂಡ

ಇದೇ ರೀತಿಯಾಗಿದೆ. ನವಲಗುಂದ ತಾಲ್ಲೂಕು ಹೇಗೆ ಇದೆ ಎಂದರೆ, ಕುಂದಗೋಳ, ಗದಗ್, ನವಲಗುಂದ, ಕಲಘಟಗಿ, ನಡುವೆ ಇರತಕ್ಕಂಥದ್ದು. ಎಲ್ಲಾ ಕಡೆಗೂ ಸ್ವಲ್ಪ ಬಂದು ನಮ್ಮಲ್ಲಿ ಬರದಿದ್ದರೆ ನಾವು ರೈತರಿಗೆ ಯಾವ ರೀತಿಯಾಗಿ ಉತ್ತರ ಹೇಳಬೇಕು. ಕೊನೆಗೆ ರೈತರು ತುಂಬುವುದನ್ನು ಕಡ್ಡಾಯ ಮಾಡಿದ್ದನ್ನು ರದ್ದು ಮಾಡ್ರಿ. ಇಲ್ಲದಿದ್ದರೆ ಈ ರೀತಿಯಾಗಿ ರೈತರನ್ನು ದೌರ್ಜನ್ಯ ಮಾಡುವುದಾದರೆ ನಾವು ಯಾವ ರೀತಿ ಉತ್ತರ ಹೇಳಬೇಕು. ದಯವಿಟ್ಟು ಮಾನ್ಯ ಕೃಷಿ ಸಚಿವರು ಈ ಬೆಳೆ ವಿಮೆಗೆ ತಾವು ಹವಾಮಾನದ್ದು ಏನು ಇದೆ, ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ಇದು ತೊಂದರೆಯಾದಾಗ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಿಮ್ಮ ಹತ್ತಿರ ಅಧಿಕಾರಿಗಳ ಹತ್ತಿರ ಭಿಕ್ಷೆ ಬೇಡುವ ಹಂತಕ್ಕೆ ಬಂದಿದ್ದೇವೆ. ಅದಕ್ಕೆ ತಾವು ಇದರ ಬಗ್ಗೆ ಗಮನ ಸೆಳೆಯಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರ ಹಿಪ್ಪರಗಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳೇ ಒಂದು ನಿಮಿಷ. ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಬಹುತೇಕವಾಗಿ ಕೃಷಿ ಕ್ಷೇತ್ರವನ್ನು ತೆಗೆದುಕೊಂಡರೆ ಈ ಭಾಗದಲ್ಲಿ ಆಹಾರಧಾನ್ಯಗಳಿರಬಹುದು, ಕಬ್ಬು ಇರಬಹುದು, ಬೆಳೆಯತಕ್ಕಂಥ ಕೃಷಿ major ಕ್ಷೇತ್ರ ಬರುವುದು ಉತ್ತರ ಕರ್ನಾಟಕದಲ್ಲಿ. ಆಮೇಲೆ ಕೃಷಿ ಕಾರ್ಮಿಕರ ಸಂಖ್ಯೆ more than 36.6% ಕೃಷಿ ಕಾರ್ಮಿಕರು ಈ ಭಾಗದಲ್ಲಿದ್ದಾರೆ. ಆದರೆ, ನಮ್ಮ ಸಚಿವರು ಮಾತನಾಡುವಾಗ ಆತ್ಮಹತ್ಯೆಗೆ ಕಾರಣ ನಮಗೆ ಗೊತ್ತಾಗುತ್ತಿಲ್ಲವೆಂದು ಹೇಳಿದರು. ಆದರೆ ನಮಗೆ ರೈತರು ಎರಡು ಎಕರೆ, ಮೂರು ಎಕರೆ bore

ಹಾಕಿಕೊಂಡು ಬಾವಿ ಹೊಡೆದುಕೊಂಡಿದ್ದಾರೆ, ಅವರಿಗೆ ನೀವು ಏನು ಮಾಡುವುದು ಬೇಡ, 8 ಗಂಟೆ ಕರೆಂಟ್ ಕೊಟ್ಟುಬಿಡಿ ಸಾಕು.

(ಗೊಂದಲ)

ಅಧ್ಯಕ್ಷರು:- ಅವರಿಗೆ ಕರೆಂಟ್ ಕೊಡುವುದು ಬರುವುದಿಲ್ಲವೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಅವರಿಗೆ ಕೃಷಿ ಇಲಾಖೆಗೆ ಸೀಮಿತವಾಗಿ ಸಂಬಂಧಪಟ್ಟಿಲ್ಲದಿರಬಹುದು, ಆದರೆ, ಕೃಷಿಗೆ ಸಂಬಂಧಪಟ್ಟಿರತಕ್ಕಂಥದ್ದು

(ಗೊಂದಲ)

ಅಧ್ಯಕ್ಷರು:- ಅದು ಆಮೇಲೆ ಹೇಳಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಎರಡನೆಯದಾಗಿ ಮಾನ್ಯ ಮಂತ್ರಿಗಳೇ, ಡಾ: ನಂಜುಂಡಪ್ಪನವರ ವರದಿಗಿಂತ ಬಹಳ ದೊಡ್ಡ ವರದಿ ಬಹುಶಃ ಯಾರದ್ದು ಇರಲಿಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು:- ರೀ ಸ್ವಾಮಿ ಕೃಷಿಗೆ ಹೋಗಿ ಮತ್ತೆ ಅಲ್ಲಿಗೆ ಹೋದಿರಿ, ಸುಮ್ಮನೆ ಎಲ್ಲಿಂದ ಎಲ್ಲಿಗೆ ಹೋಗುತ್ತೀರಿ, ರೀ ಹೇಳ್ರಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಅವರು ರೈತರಿಗೋಸ್ಕರ ಏನು ಮಾಡಬೇಕೆಂದು recommendation ಮಾಡಿದ್ದಾರಲ್ಲ, ಅದನ್ನು ಎಲ್ಲಿ implement ಮಾಡಿದ್ದೀರಿ ನೀವು? ಅದರಲ್ಲಿ ಬ್ಯಾಂಕ್‌ಗಳಿರಬಹುದು,

(ಗೊಂದಲ)

ಶ್ರೀ ಜಿ.ಟಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ ನಾವು clarification ಕೇಳಬೇಕಾಗಿದೆ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ:- ನಮಗೊಂದು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ರೀ ನಾನು ಈಗ vote ಗೆ ಹಾಕಿ ಬಿಡುತ್ತೇನೆ ನೋಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಪ್ರಮುಖವಾಗಿ ಎರಡು clarification ಇದೆ.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:- ಕೃಷಿ ಬೆಲೆ ಆಯೋಗದ ಬಗ್ಗೆ.

(ಗೊಂದಲ)

ಅಧ್ಯಕ್ಷರು:- ಆಯೋಗ ಅಲ್ಲಿ ಕುಳಿತಿದೆ.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:- ಹೇಳುತ್ತಿದ್ದೇನೆ, ಕೃಷಿ ಬೆಲೆ ಆಯೋಗ.

(ಗೊಂದಲ)

ಅಧ್ಯಕ್ಷರು:- ಆಯಿತು ಹೇಳಿ. ಬೇಗ ಹೇಳಿ ಕೃಷಿ ಬೆಲೆ ಆಯೋಗ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವು ಮಾತನಾಡುತ್ತೀರಾ?

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:- ಕೃಷಿ ಬೆಲೆ ಆಯೋಗದ ಬಗ್ಗೆ ಬಹಳ ಸಂಕ್ಷಿಪ್ತವಾಗಿ ಹೇಳಿದರು. ಆದರೆ ನಾವು ಬಹಳ ನಿರೀಕ್ಷೆ ಮಾಡಿದ್ದೆವು, ಇದರ ಉದ್ದೇಶ ಏನಿರಬೇಕೆಂದರೆ ಕೃಷಿ ಬೆಲೆ ಆಯೋಗ ಇದು ಕೇವಲ ಅಧ್ಯಯನ ಮಾಡಿ, ಸಂಶೋಧನೆ ಮಾಡಿ ಮತ್ತೊಂದು ಮಾಡಿ ಹಾಗೆಯೇ ಇರುವುದೆ? ಅಥವಾ ರೈತರಿಗೆ ಲಾಭದಾಯಕ ಬೆಲೆ ಆಗಬಹುದು ಅಥವಾ ಕೃಷಿಯ ಆ ಪದಾರ್ಥಗಳು ಬೆಳೆದಂಥ ಬೆಳೆಗಳಿಗೆ ಏನೇನು ಬೆಲೆ ಆದೀತು ಎಂಬುದನ್ನು fix ಮಾಡುವುದು, ಅದರ ಉದ್ದೇಶವಾಗಿರಬೇಕೆಂದು ನಮ್ಮ ನಿರೀಕ್ಷೆ ಇತ್ತು. ಅದು ನಮ್ಮ ನಿರೀಕ್ಷೆ ಕೂಡ ಆಗಿತ್ತು. ಆದರೆ, ಅದು ಏನು ಕೆಲಸ ಮಾಡದೆ ಇರುವುದರಿಂದ ಕೆಲಸ ಮಾಡುವುದಕ್ಕೆ ಮಾನ್ಯ ಸಚಿವರು ಸೂಚಿಸಬೇಕು. ಇಲ್ಲದಿದ್ದರೆ ಅದು ಕೇವಲ ಅಲಂಕಾರಿಕ ಸ್ಥಾನ ಇದ್ದಂತೆ ಆಗುತ್ತದೆಯಷ್ಟೆ.

ಶ್ರೀ ಜೆ.ಟಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಕೃಷಿ ಬೇಡಿಕೆ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳಾದ ಆಹಾರ ಬೆಳೆ ಮತ್ತು ಹಣ್ಣುಗಳಿಂದ ಪ್ರತಿದಿನ ಸಹಿತ ಜನರ ಆರೋಗ್ಯದ ಮೇಲೆ ಯಾವ ರೀತಿಯಾದ ದುಷ್ಪರಿಣಾಮಗಳು ಆಗುತ್ತಿವೆ ಎಂಬ ಬಗ್ಗೆ ನಾನು ಇಲ್ಲಿ ಬೆಳಕು ಚೆಲ್ಲಿದ್ದೇನೆ. ಆದರೆ, ಈ ವಿಷಯದ ಬಗ್ಗೆ ಒಂದು ಶಬ್ದವನ್ನು ಸಹ ಮಾನ್ಯ ಕೃಷಿ ಸಚಿವರು ಹೇಳಲಿಲ್ಲ. ಆದ್ದರಿಂದ, ಅದರ ಬಗ್ಗೆ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವ ಗಮನಕ್ಕೆ ತರುವುದೇನೆಂದರೆ, ಹೊಸ ಆಲೋಚನೆ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಯೋಚನೆ ಮಾಡಬೇಕು. ಇಡೀ ಜಿಲ್ಲೆಗಳಲ್ಲಿ land holding ಎಷ್ಟಿದೆ ಎಂದು ಒಂದು ಪ್ಲಾನ್ ಮಾಡಿ. ಹಾಗೆಯೇ ಒಂದು ಅಥವಾ ಎರಡು ಎಕರೆ ಜಮೀನು ಇದ್ದರೆ ನೀರಾವರಿಯನ್ನು ಯಾವ ರೀತಿ ಮಾಡಬೇಕೆಂದು ಹಾಗೂ cropping pattern ಯಾವ ರೀತಿ ಇರಬೇಕೆಂದು ಮತ್ತೆ ರಾಜ್ಯದಲ್ಲಿ ಮಾರ್ಕೆಟ್‌ನ ಪರಿಸ್ಥಿತಿ ಯಾವ ರೀತಿ ಇದೆ ಎಂದು ಅವಲೋಕನ ಮಾಡಿ ಒಂದು ಹೊಸ ಕೃಷಿ ನೀತಿಯನ್ನು introduce ಮಾಡಿದರೆ ರೈತ ಕನಿಷ್ಠ ಸುಧಾರಣೆ ಆಗುತ್ತಾನೆ. ಟೊಮೊಟೊ ಹಣ್ಣು

ಹಾಕಿದರೆ ಎಲ್ಲರೂ ಟೊಮೊಟೊ ಹಣ್ಣನ್ನು ಹಾಕಿಬಿಡುತ್ತಾರೆ. ಇದರಿಂದ ಏನಾಗಿದೆ ಎಂಬ ಬಗ್ಗೆ ಮಂಡ್ಯದ ಒಂದು ಉದಾಹರಣೆ ಹೇಳುತ್ತೇನೆ. ಅಲ್ಲಿ ಸುಮಾರು 7 ಲಕ್ಷ ಕುಟುಂಬಗಳು ಒಂದೊಂದು ಎಕರೆ ಭೂಮಿಯನ್ನು ಹೊಂದಿದ್ದಾರೆ. ಕೆಲವರಿಗೆ 2 ಎಕರೆ ಇದೆ. ಆ ಒಂದು ಎಕರೆ ಇರತಕ್ಕಂಥವನು ಭೂಮಿಯನ್ನು ನಾಲ್ಕು ಭಾಗ ಮಾಡಿ ಬೆಳೆಯನ್ನು ಬೆಳೆಯತಕ್ಕಂಥ ಒಂದು ಹೊಸ ಕೃಷಿ ನೀತಿ ಬಗ್ಗೆ ತಾವು ಆಲೊಚನೆ ಮಾಡಬೇಕು.

ಅಧ್ಯಕ್ಷರು:- ಇಂಥ ವಿಚಾರಗಳನ್ನು ಚರ್ಚೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕು. ಕ್ಲಾರಿಫಿಕೇಷನ್ ಸಂದರ್ಭದಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಈ ವಿಷಯ ಹೇಳಿದ್ದೇನೆ.

ಅಧ್ಯಕ್ಷರು:- ಹೇಳಿದ್ದರೆ ಅವರು ಹೇಳುತ್ತಾರೆ ಬಿಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸಚಿವರು ಮಾತನಾಡುವಂಥ ಸಂದರ್ಭದಲ್ಲಿ ಕಬ್ಬಿನ ಬೆಳೆಗೆ alternative ಹೇಳುತ್ತೇನೆಂದು ಹೇಳಿದರು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ತಾವು ದಯವಿಟ್ಟು ಕೇಳಬೇಕು. ನಾವ್ಯಾರು ಕಬ್ಬು ಹಾಕಬೇಕೆಂದು ಆಲೋಚನೆ ಮಾಡಿದವರಲ್ಲ. ಸರ್ಕಾರ ಕಾರ್ಖಾನೆಗೆ ಲೈಸೆನ್ಸ್ ಕೊಟ್ಟಿದ್ದರ ಪ್ರಯುಕ್ತ ಅವರು ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು. ನಾವು ಕಬ್ಬು ಬೆಳೆದು ಅವರಿಗೆ ಕೊಟ್ಟೆವು. ಆದರೆ, ಇದರಲ್ಲಿ ನಮ್ಮದ್ಯಾರದೂ ತಪ್ಪಿಲ್ಲ. ಈಗ alternative crop ಕೊಟ್ಟು reserved area ಮಾಡಿ. ಕಬ್ಬಿಗಿಂತ ಉತ್ತಮವಾದಂಥ ಆದಾಯ ಬರತಕ್ಕಂಥ ಹೊಸ ಕ್ರಾಪ್ ಕೊಟ್ಟರೆ ಫ್ಯಾಕ್ಟರಿಗಳು ಮುಚ್ಚತಕ್ಕಂಥ ಪರಿಸ್ಥಿತಿ ಆಗುತ್ತದೆ. ಆದ್ದರಿಂದ, ಈ ಬಗ್ಗೆ ಆಲೋಚನೆ ಮಾಡಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಮಾನ್ಯ ಅಧ್ಯಕ್ಷರೆ, ರೈತರಿಗೆ ಯಂತ್ರೋಪಕರಣಗಳನ್ನು ಬಾಡಿಗೆ ಕೊಡುವಂಥ ಒಂದು ವ್ಯವಸ್ಥೆ ಮಾಡಿದ್ದಾರೆ. ನಮ್ಮ ಏರಿಯಾದಲ್ಲಿ ಕಬ್ಬನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ. ಬೇಸಿಗೆ ಕಾಲ ಬಂದಾಗ harvesting ಸಮಯದಲ್ಲಿ

ಲೇಬರ್‌ಗಳ ಕಡಿತ ಇಲ್ಲ. ಆದ್ದರಿಂದ, ರೈತರಿಂದ ಒಂದು ಟನ್‌ಗೆ 100 ರಿಂದ 200 ರೂಪಾಯಿ ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರ ಕಬ್ಬು ಕಡಿಯತಕ್ಕಂಥ ಮೆಷಿನ್‌ಗಳನ್ನು ನಮ್ಮ ಕೃಷಿ ಇಲಾಖೆ ಮುಖಾಂತರ ಬಾಡಿಗೆ ಮೂಲಕ ಕೊಡುತ್ತಾರೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ ನಮ್ಮ ಬಿಜಾಪುರ ಅಖಂಡ ಬಿಜಾಪುರ ಜಿಲ್ಲೆ ಆಗಿದೆ. ಅದು ಬಾಗಲಕೋಟೆ, ಬಿಜಾಪುರ ಇರಬಹುದು. ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದ್ರಾಕ್ಷಿ, ದಾಳಿಂಬೆ, ನಿಂಬೆ, ಟೊಮೊಟೊ, ಉಳ್ಳಾಗಡ್ಡೆ ಬೆಳೆಯುತ್ತೇವೆ. ಆದ್ದರಿಂದ, ಇಲ್ಲಿ ಹಣ್ಣು ಸಂಸ್ಕರಣಾ ಘಟಕ ಮಾಡಿದರೆ ಹೆಚ್ಚಿನ ರೈತರಿಗೆ ಯೋಗ್ಯ ಬೆಲೆ ಸಿಗುತ್ತದೆ. ಆದ್ದರಿಂದ, ಅಲ್ಲಿ ಹಣ್ಣು ಸಂಸ್ಕರಣಾ ಘಟಕ ಮಾಡುವುದಕ್ಕೆ ವಿಶೇಷವಾಗಿ ಪ್ರೋತ್ಸಾಹ ಸಬ್ಸಿಡಿಯನ್ನು ಆ ಕಾರ್ಖಾನೆಗಳಿಗೆ ಕೊಡುವುದಕ್ಕೆ ಏನಾದರೂ ಯೋಚನೆ ಇದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ರಾಜಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ವಿಶೇಷವಾಗಿ ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತಾರೆ. ಆ ದ್ರಾಕ್ಷಿ ಬೆಳೆಗೆ ಅಕಾಲಿಕ ಆಲಿಕಲ್ಲು ಮಳೆಯಿಂದ ಬಹಳಷ್ಟು ನಷ್ಟವಾಗುತ್ತಿದೆ. ಇವತ್ತಿನ ದಿವಸ ಘನ ಸರ್ಕಾರ ಅವರಿಗೆ ಪರಿಹಾರ ಕೊಡತಕ್ಕಂಥದ್ದು ಬಹಳ ಕಡಿಮೆ ಇದೆ. ಇವತ್ತಿನ ದಿವಸ ಒಂದು ಎಕರೆ ದ್ರಾಕ್ಷಿ ಬೆಳೆದು ಹಣ್ಣು ತೆಗೆಯಬೇಕಾದರೆ ಒಂದರಿಂದ ಒಂದುಕಾಲು ಲಕ್ಷ ರೂಪಾಯಿ ಖರ್ಚಾಗುತ್ತದೆ. ಇವರು ಕೊಡುವ ಅಲ್ಪಮೊತ್ತ ಸಾಲುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಘನ ಸರ್ಕಾರ ಅದನ್ನು ಮತ್ತೆ ಪರಿಷ್ಕರಣೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಸಚಿವರ ಒಂದು ವಿಷಯವನ್ನು ಗಮನಿಸಬೇಕೆಂದು ಕೇಳುತ್ತೇನೆ. ಅದೇನೆಂದರೆ, ಈಗ ತಾವು 10 ವಲಯಗಳನ್ನು ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೆ, ನನ್ನ ವಿರೋಧಾಭಾಸವೇನೆಂದರೆ, ತಾವು ಮಲೆನಾಡು ಪ್ರದೇಶದವರು ನಾವು ಬೀದರ್‌ನವರು ಅರೆ ಮಲೆನಾಡಿನವರಾಗಿದ್ದೇವೆ. ಇದು

ಅವರ definitions ಪ್ರಕಾರ ಆಗಿದೆ. ಇದರಿಂದ ನಮಗೂ ಮತ್ತು ಚಿಂಚೋಳಿಗೆ ಅನೇಕ ಅವಕಾಶಗಳು ತಪ್ಪುತ್ತಿವೆ. ಇದನ್ನು ಬದಲಾವಣೆ ಮಾಡಿದ್ದೀರಿ. ಇದು agro climatic zone ಅನ್ನು ಯಾವುದೋ ಕಾಲದಲ್ಲಿ ಮಾಡಲಾಗಿದೆ. ಈಗ ಕಾಲಮಾನ, ಹವಾಮಾನ ಬದಲಾವಣೆ ಆಗಿದೆ. ಆದ್ದರಿಂದ, ದಯಮಾಡಿ ಇದನ್ನು ಮತ್ತೆ revised ಮಾಡಬೇಕೆಂದು ಕೇಳುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ತೊಗರಿ ಮಂಡಳಿ ಬಗ್ಗೆ ಮಾನ್ಯ ಸಚಿವರು ಸ್ಪಷ್ಟತೆಯನ್ನು ಕೊಡಲಿಲ್ಲ. ಇಗ short term crops ಎಲ್ಲಾ ಹೊರಟುಹೋಗಿವೆ. ಅಂದರೆ, ಹೆಸರು, ಉದ್ದು, ಎಳ್ಳು, ಶೇಂಗಾ ಬೆಳೆ ಎಲ್ಲಾ ಹೋಯಿತು. ಇದರಿಂದ ಎಲ್ಲರೂ ತೊಗರಿ ಬೆಳೆಗೆ ಬರುತ್ತಿದ್ದಾರೆ. ಈಗ ತೊಗರಿ ಬೀಜ ಕೂಡ ಬಹಳ ವಿಪರೀತವಾಗಿ ಮಾರಾಟವಾಗುತ್ತಿವೆ. ಈಗ ಮಾರುಕಟ್ಟೆಯಲ್ಲಿ ತೊಗರಿ ಬೀಜ short ಆಗಿದೆ. ತೊಗರಿ ಬೆಳೆ ವಿಪರೀತ ಬೆಳೆಯುತ್ತಿರುವುದರಿಂದ ತೊಗರಿ ಬೇಳೆಯನ್ನು ಖರೀದಿ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಈಗಿನಿಂದಲೇ ಮಾಡಿ ಅದಕ್ಕೆ ಹಣದ ವ್ಯವಸ್ಥೆ ಮಾಡುವುದರ ಜೊತೆಗೆ ಅದಕ್ಕೆ ಒಂದು ಯೋಗ್ಯವಾದ ಬೆಲೆಯನ್ನು ಕೊಡತಕ್ಕಂಥದ್ದರ ಬಗ್ಗೆ ತಾವು ಇವತ್ತೇ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲದಿದ್ದರೆ ಕೊನೇ ಹಂತದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ರೈತರು ಆಗ ಬಹಳ ಕಷ್ಟಕ್ಕೆ ಸಿಲುಕುತ್ತಾರೆ. Agriculture Price Commission ಬಗ್ಗೆ ಅನೇಕ ಸಲ ನಾನು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ್ದೇವೆ. Agriculture cost and price commission ಮಾಡಿದರೆ ಮಾತ್ರ ನಿಮಗೆ ಅದರಿಂದ ಅನುಕೂಲವಾಗುತ್ತದೆ. ಕೇವಲ agriculture price commission ಮಾಡಿದರೆ ಆಗುವುದಿಲ್ಲವೆಂದು ನಾವು ಅವತ್ತು ಹೇಳಿದ್ದೇವೆ. ಆದ್ದರಿಂದ, ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಜನರಿಗೆ agriculture price commission ನಿಂದ ಯಾವುದೇ ಅನುಕೂಲವಾಗಿಲ್ಲ.

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ, agriculture price commission ನಲ್ಲಿ cost ಅನ್ನು ಸಹ ಲೆಕ್ಕ ಹಾಕಿಕೊಂಡು ಮಾಡುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:- ಕಂದಾಯ ಹೋಬಳಿಗೆ Customer Hire Center ಗಳನ್ನು ಮಾಡಿದ್ದಾರೆ. ಇದು ಕೂಡ ರೈತರಿಗೆ ಸಾಕಾಗುವುದಿಲ್ಲ. ಒಂದೊಂದು ಹಳ್ಳಿಯಲ್ಲಿ ಬಹಳ ಉಪಯೋಗವಾಗುತ್ತಿದೆ. ಮುಂದೆ ಬರತಕ್ಕಂಥ ದಿನಗಳಲ್ಲಿ ಬೇಡಿಕೆ ಜಾಸ್ತಿ ಆಗುತ್ತದೆ. ಆದ್ದರಿಂದ, ಒಂದು ಕಂದಾಯ ಹೋಬಳಿಗೆ 1 customer hire center ಸಾಕಾಗುವುದಿಲ್ಲ. ಆದ್ದರಿಂದ, ಇನ್ನು ಹೆಚ್ಚು ಕೊಡುವ ಬಗ್ಗೆ ಯೋಚನೆ ಮಾಡಬೇಕೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವೊಂದು ಸ್ಪಷ್ಟೀಕರಣ ಕೇಳಿದ್ದಾರೆ. ITI ನಲ್ಲಿ ನಾವು ಒಂದು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಮ್ಮ ಕೃಷಿ ವಿಶ್ವವಿದ್ಯಾಲಯಗಳನ್ನು ಬಿಟ್ಟು ಅಂದರೆ, ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಾವು ಎಲ್ಲರಿಗೂ ಪ್ರವೇಶ ಕೊಡುವುದಕ್ಕೆ ಆಗುವುದಿಲ್ಲ ಎಂದು ಐಟಿಐ ಮುಖಾಂತರ ಒಂದು ಪ್ರಯೋಗ ಮಾಡುತ್ತಿದ್ದೇವೆ. ಮೊದಲ ಬಾರಿಗೆ ಈ ರೀತಿ ಮಾಡಿದ್ದೇವೆ. ಬಹುಶಃ ದೇಶದಲ್ಲಿ ಈ ರೀತಿಯಾಗಿ ಎಲ್ಲಿ ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಐಟಿಐ ಮುಖಾಂತರ ಕೃಷಿ ತರಬೇತಿಯನ್ನು ಕೊಡತಕ್ಕಂಥ ಒಂದು ಪ್ರಯೋಗವನ್ನು ಮಾಡಿದ್ದೇವೆ. ಈ ವರ್ಷ ಹೊಸದಾಗಿ ಪ್ರಾರಂಭವಾಗಿದ್ದು, ಈ ಬಗ್ಗೆ ಯಾರಿಗೂ ಸಹ ಸರಿಯಾಗಿ ಗೊತ್ತಿರಲಿಲ್ಲ. 86 ಮಕ್ಕಳು ಈಗ ಸೇರಿದ್ದಾರೆ, 15ನೇ ತಾರೀಖಿನವರೆಗೆ ಪ್ರವೇಶವನ್ನು ವಿಸ್ತರಣೆ ಮಾಡಿದ್ದೇವೆ. ಪ್ರವೇಶಾತಿ ಜಾಸ್ತಿ ಆದರೆ ಇನ್ನು ಬೇರೆ ಬೇರೆ ವಿಚಾರದ ಬಗ್ಗೆ ಕೂಡ ಯೋಚನೆ ಮಾಡೋಣ. ಅಂದರೆ, ಯಾವ ರೀತಿಯಾಗಿ ಇನ್ನೂ ಹತ್ತಿರ ತೆಗೆದುಕೊಂಡು ಹೋಗಬಹುದು ಎಂಬ ಬಗ್ಗೆ ಯೋಚನೆ ಮಾಡೋಣ. ಈಗ ಹೊಸದಾಗಿ ಆರಂಭ ಮಾಡಿದ್ದೇವೆ. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಜನರ ಪ್ರತಿಕ್ರಿಯೆ ನೋಡಿಕೊಂಡು ಮಾಡೋಣ. ತರಬೇತಿಗೆ ಎಸ್‌ಸಿಪಿ/ಟಿಎಸ್‌ಪಿ ಅನುದಾನ..

ಅಧ್ಯಕ್ಷರು:- ಅದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಿ ಸಾಕು.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಎಸ್‌ಸಿಪಿ/ಟಿಎಸ್‌ಪಿ ಅನುದಾನವನ್ನು ತರಬೇತಿಗಾಗಿ ಉಪಯೋಗ ಮಾಡುತ್ತಿದ್ದೇವೆ. ರಿಪೇರಿ ಮಾಡತಕ್ಕಂಥದ್ದು ಅವರ ಜವಾಬ್ದಾರಿ ಆಗಿದೆ. ಆದ್ದರಿಂದ, ಯಾರು ಇದ್ದಾರೆಯೋ ಅವರ ಮೂಲಕ ಮಾಡಿಸುತ್ತೇವೆ. ಕೃಷಿ ಹೊಂಡದ ಆಳದ ಬಗ್ಗೆ ಹೇಳಿದ್ದಾರೆ. ನಾನು ಬಿಸಿಲಿನಲ್ಲಿ 2 ಗಂಟೆ ಅವರ ಮುಂದೆ ನಿಂತುಕೊಂಡು ಈ ಬಗ್ಗೆ ಎಲ್ಲಾ ವಿವರಣೆ ಕೊಟ್ಟಿದ್ದೇವೆ. ಇದಕ್ಕೆ ಒಟ್ಟು ನಾಲ್ಕು ಗಾತ್ರವನ್ನು ಕೊಟ್ಟಿದ್ದೇವೆ. ಅಂದರೆ, 12x12 meter, 15x15 meter, 18x18 meter, 21x21 meter ಕೊಟ್ಟಿದ್ದೇವೆ. ಜೊತೆಗೆ ನಿಮಗೆ ಬೇಕೆಂದರೆ, 3 ಮೀಟರ್ ಆಳದ ಬದಲು ನಾಲ್ಕು ಮೀಟರ್ ಆಳವನ್ನು ಮಾಡಿಕೊಳ್ಳಬಹುದೆಂಬ ಒಂದು ಆಯ್ಕೆಯನ್ನು ಸಹ ರೈತರಿಗೆ ಕೊಟ್ಟಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಟ್ರಾಕ್ಟರ್ ಬಗ್ಗೆ ಹೇಳುವುದಾದರೆ, ಟ್ರಾಕ್ಟರ್‌ಗಳನ್ನು ಕೊಡುವುದಕ್ಕಿಂತ ಅದಕ್ಕೆ ಬೇಕಾಗಿರುವ equipment ಅನ್ನು ಕೊಡಿ ಎಂದು ಕೇಂದ್ರ ಸರ್ಕಾರ ಬಹಳ ಹಿಂದೆಯೇ ಸಲಹೆ ಮಾಡಿ ಟ್ರಾಕ್ಟರ್‌ಗಳಿಗೆ ಕೊಡತಕ್ಕಂಥದ್ದನ್ನು ನಿಲ್ಲಿಸಿದೆ. ಇದರ ಹಿನ್ನೆಲೆಯಲ್ಲಿ ನಮಗೆ ಕಷ್ಟ ಇದೆ. ಅಲ್ಲಿಂದ ಹಣವನ್ನು ತೆಗೆದುಕೊಂಡು ಅದರ ಬದಲು equipment ಗೆ ಹೆಚ್ಚು ಪ್ರೋತ್ಸಾಹವನ್ನು ನಾವು ಕೊಡುತ್ತಿದ್ದೇವೆ. ಉಳ್ಳಾಗಡ್ಡೆ ಬಗ್ಗೆ ನಮಗೆ ಜಿಲ್ಲಾಮಟ್ಟದಿಂದ ಒಂದು ಬಾರಿ ವರದಿಯನ್ನು ಕಳುಹಿಸುತ್ತಾರೆ. ಅದಕ್ಕೆ ನಾವು ಪರಿಹಾರ ಬಿಡುಗಡೆ ಮಾಡಿದ ಮೇಲೆ ಮತ್ತೆ ಇನ್ನೊಂದು ವರದಿ ಕಳುಹಿಸುತ್ತಾರೆ. ಈ ರೀತಿ ಮಾಡಿದಾಗ ನಾವು ಇತ್ಯರ್ಥ ಮಾಡುವುದು ಕಷ್ಟವಾಗುತ್ತದೆ. ಒಂದು ಸಾರಿ ಬರುವ ವರದಿಯ ಆಧಾರದ ಮೇಲೆ ನಾವು ಅನುದಾನವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಸಚಿವರೆ, ನಮ್ಮ ಕಡೆ ಎರಡು ಬಾರಿ ಮಳೆ ಆಯಿತು.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಪದೇ ಪದೇ ಕಳುಹಿಸುತ್ತಿದ್ದರೆ ಕಷ್ಟವಾಗುತ್ತದೆ. ಒಂದು ವರದಿಯ ಆಧಾರದ ಮೇಲೆ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನು ಸಹ ಕೊಟ್ಟಿದ್ದೇವೆ.

ಶ್ರೀ ಜಿ.ಎಸ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಪರಿಹಾರದ ಹಣಕ್ಕೋಸ್ಕರ ರೈತರಿಗೆ ಬ್ಯಾಂಕಿನ ಟೋಕನ್ ಕೊಟ್ಟು ಈಗಾಗಲೇ ಮೂರು ತಿಂಗಳಾಗಿದೆ.

ಶ್ರೀ ಕೃಷ್ಣ ಬೈರೇಗೌಡ:- ಅದನ್ನು ಕೊಡಿಸೋಣ ಬಿಡಿ. ಆದರೆ, ಅಲ್ಲಿ ಸಮಸ್ಯೆ ಏನಾಗಿತ್ತೆಂದರೆ, ಉಳ್ಳಾಗಡ್ಡೆಗೆ ವಿಶೇಷ ಪ್ರಕರಣವೆಂದು ಮಾಡಿ 36 ಕೋಟಿ ರೂಪಾಯಿ ರಾಜ್ಯದ ಪರಿಹಾರವನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ಮಾನದಂಡವನ್ನು ಮೀರಿ ನಾವು ಪರಿಹಾರವನ್ನು ಕೊಟ್ಟಿದ್ದೇವೆ. ಆವತ್ತಿನ ದಿನ ಏನು ವರದಿ ಬಂದಿತ್ತೋ ಅದರ ಆಧಾರದ ಮೇಲೆ ಸಂಪುಟದಲ್ಲಿ ತೀರ್ಮಾನವಾಯಿತು. ಅದಾದ ಮೇಲೆ ಮತ್ತೆ ಮತ್ತೆ ವರದಿ ಬರುವುದಕ್ಕೆ ಪ್ರಾರಂಭವಾದರೆ ಅದನ್ನು ಇತ್ಯರ್ಥ ಮಾಡುವುದು ಬಹಳ ಕಷ್ಟವಾಗುತ್ತದೆ. ಆದರೂ ತಮ್ಮ ತಾಲ್ಲೂಕಿನಲ್ಲಿ ಒಂದು ವಿಶೇಷ ಪ್ರಕರಣದಲ್ಲಿ ನಾವು ಕೊಡಿಸಿ ಕೊಟ್ಟಿದ್ದೇವೆ. ಪದೇ ಪದೇ ಅದೇ ವಾಡಿಕೆ ಆದರೆ ಕಷ್ಟವಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ವಿಮೆ ಬಗ್ಗೆ ನಾನು ಸಾಕಷ್ಟು ಹೇಳಿದ್ದೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಸಚಿವರೆ, ಅರ್ಧ ರೈತರಿಗೆ ಕೊಟ್ಟಿದ್ದು, ಇನ್ನೂ ಅರ್ಧ ರೈತರಿಗೆ ಕೊಟ್ಟಿಲ್ಲ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ವಿಮೆ ಬಗ್ಗೆ ಪರಿಷ್ಕರಣೆ ಆಗಬೇಕಾಗಿದೆ. ಅಂದರೆ, ಹವಾಮಾನ ಆಧಾರಿತ ವಿಮೆ ಬಗ್ಗೆ ಏನು ಸೂತ್ರ ಇದೆಯೋ ಅದು ಪರಿಷ್ಕರಣೆ ಆಗಬೇಕಾಗಿದೆ, ಅದನ್ನು ನಾವು ಒಪ್ಪಿಕೊಂಡಿದ್ದೇವೆ. ನಮ್ಮ ಅಧಿಕಾರಿಗಳು..

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸಚಿವರೆ, ಕಳಪೆ ಹತ್ತಿ ಬೀಜದ ಬಗ್ಗೆ ಹೇಳಬೇಕು.

ಶ್ರೀ ಕೃಷ್ಣ ಬೈರೇಗೌಡ:- ಆ ಬಗ್ಗೆ ಕೇಸ್ ಹಾಕಿದ್ದೇವೆ. ಹಾಗೆಯೇ blacklist ಸಹ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಹೇಳಿರುವುದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಆನಂತರ ಉತ್ತರ ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಬೆಲೆ ಆಯೋಗದ ಬಗ್ಗೆ ಕೂಡ ಹೇಳಿದ್ದೇನೆ. ಆಗ ಮಾನ್ಯ ಯಾವಗಲ್‌ರವರು ಅಧ್ಯಕ್ಷರ ಸ್ಥಾನದ ಪೀಠದಲ್ಲಿ ಕುಳಿತುಕೊಂಡಿದ್ದರು. ನಾನು ಹೇಳಿರುವುದನ್ನು ಅವರು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಅವರ ಚಿತ್ತ ಕೇವಲ ಬೆಲೆ ನಿಗದಿ ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ. ಆದರೆ, ನಮ್ಮ ಚಿತ್ತ ಬಹಳ ವಿಸ್ತೃತವಾಗಿದೆ. ಅದು ಬೆಲೆ ನಿಗದಿ ಮಾಡುವುದಕ್ಕೆ ಅಷ್ಟೇ ಅಲ, ರೈತರ ಆದಾಯ ಸುಧಾರಣೆ ಮಾಡುವುದಕ್ಕೆ ಏನೆಲ್ಲಾ ಕ್ರಮಗಳು ಬೇಕೋ ಅದನ್ನು ಬೆಲೆ ಆಯೋಗದ ಮುಖಾಂತರ ನಾವು ಮಾಡುತ್ತೇವೆ. Chemicals ಬೆರಕೆ ಮಾಡತಕ್ಕಂಥದ್ದು ಏನಿದೆ, ಅದಕ್ಕೆ ನಾವು ತೋಟಗಾರಿಕೆ ಇಲಾಖೆಯಿಂದ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದು ದೊಡ್ಡ policy matter, land ಹೇಗೆ ಎಂದು, ರೈತರು ಈ ಬೆಳೆ ಹಾಕಿ ಇದನ್ನು ಬೇಡ ಎಂದರೆ ಯಾರು ನಮ್ಮ ಮಾತು ಕೇಳುವುದಿಲ್ಲ. ತಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ನಾವು ಏನು ಮಾಡುತ್ತಿದ್ದೇವೆಂದರೆ, ಕೆಲವು ಬೆಳೆಗಳಿಗೆ ಪರೋಕ್ಷವಾಗಿ incentive ಕೊಡುತ್ತಿದ್ದೇವೆ. ರಾಗಿ, ಜೋಳಕ್ಕೆ MSP ಗಿಂತ ಜಾಸ್ತಿ price procurement ಕೊಡುತ್ತಿದ್ದೇವೆ. ಆಮೇಲೆ ಕೆಲವು disincentive ಈ ವರ್ಷ ಮೆಕ್ಕೆಜೋಳದ ಮೇಲೆ seed subsidy ಕಡಿಮೆ ಮಾಡಿದ್ದೇವೆ. ಏಕೆಂದರೆ, ಮೆಕ್ಕೆಜೋಳ ಅವಶ್ಯಕತೆಗಿಂತ ಬಹಳ ಜಾಸ್ತಿ ಬೆಳೆಯುತ್ತಿದ್ದೇವೆ. ಅದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಹೇಳಿ ಅದರ ಮೇಲೆ seed subsidy ಸ್ವಲ್ಪ ಕಡಿಮೆ ಮಾಡಿದ್ದೇವೆ. ಹೀಗೆ ಮಾಡಬಹುದೇ ಹೊರತು, ನಾವು ಹೀಗೆ zoning ಮಾಡುವುದಕ್ಕೆ ಹೋದರೆ ಬಹುಶಃ ರೈತರು ನಮ್ಮನ್ನು ಕೇಳುವುದಿಲ್ಲ. Sugarcane ಗೆ alternate crops ಸಹ ಈ ವರ್ಷ ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ನೋಡೋಣ, ಅದು ಎಷ್ಟರಮಟ್ಟಿಗೆ

ಯಶಸ್ವಿಯಾಗುತ್ತದೆ ಎಂದು ಕಬ್ಬು ಕಟಾವು ಯಂತ್ರವು ಸಹ ಈ ವರ್ಷ ಯೋಜನೆ ಇಟ್ಟುಕೊಂಡಿದ್ದೇವೆ. ಅದನ್ನು ಕನಿಷ್ಠ 25 ರವರೆಗೆ ಮಾಡಬೇಕೆಂದು ಮಾಡಿದ್ದೇವೆ, ಅದನ್ನು ನೋಡುತ್ತೇವೆ. ಚಿಕ್ಕಬಳ್ಳಾಪುರದಲ್ಲಿ ಮೊನ್ನೆ ಆಲಿಕಲ್ಲು ಮಳೆ ಬಿತ್ತು, ಅಲ್ಲಿ 25 ಸಾವಿರ ರೂ. ಗಳನ್ನು ಕೊಟ್ಟಿದ್ದೇವೆ. ಮಾನದಂಡದಲ್ಲಿರುವುದು ಹದಿಮೂರುವರೆ ಸಾವಿರ ರೂ. ಗಳು. ಮಾನ್ಯ ಮುಖ್ಯ ಮಂತ್ರಿಗಳು ವಿಶೇಷ ತೀರ್ಮಾನ ತೆಗೆದುಕೊಂಡು ಅದಕ್ಕೆ ಎರಡು ಪಟ್ಟು ಮಾಡಿ 25 ಸಾವಿರ ರೂ. ಗಳನ್ನು ನಾವು ಕೊಟ್ಟಿದ್ದೇವೆ, ಸಾಲುವುದಿಲ್ಲ ಒಪ್ಪಿಕೊಳ್ಳುತ್ತೇನೆ. ಆದರೆ ಸ್ವಲ್ಪ ಅಲ್ಲಿ insurance ದಿಂದ ಅನುಕೂಲವಾಗುತ್ತದೆಯೇ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. Agro Climatic Zone Government of India guidelines ಪ್ರಕಾರ ಆಗತಕ್ಕಂಥದ್ದು, ಏನಾದರೂ ಇದ್ದರೆ ನಾನು ಯೂನಿವರ್ಸಿಟಿಯವರಿಗೆ ಕೇಳುತ್ತೇನೆ. Toor Board ಬಗ್ಗೆ ಮಾತನಾಡಿದ್ದೇನೆ, ಹಿಂದೆ ನಾನು ಅವರಿಗೆ ಹೇಳಿದ್ದೇನೆ. ಅದನ್ನು ನಾವು ಸಬಲೀಕರಣ ಮಾಡಬೇಕೆಂದರೆ, ರೈತರು ಒಕ್ಕೂಟಗಳನ್ನು ರಚನೆ ಮಾಡಿಕೊಂಡರೆ ಅವರಿಗೆ ನಾವು ಇದನ್ನು handover ಮಾಡಿ ಅದಕ್ಕೆ ಬೇಕಾದಂಥ ಬಂಡವಾಳ ನಾವು ಕೊಡುತ್ತೇವೆ. ಸುಮ್ಮನೆ ನಾವು ಬಂಡವಾಳವನ್ನು ಎತ್ತಿ ಕೊಟ್ಟು ಬಿಡುವುದಿಲ್ಲ, ನಿಮಗೆ ಬೇಕಾದಂಥ ಬಂಡವಾಳವನ್ನು ಕೊಡುತ್ತೇವೆ. ರೈತರು ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಂಡು ಅದರ ಮುಖಾಂತರವಾಗಿ ನಾವು ನಿರ್ವಹಣೆ ಮಾಡುವಂಥದ್ದು. ಇನ್ನೊಂದು, ಸಹಕಾರ ಇಲಾಖೆಯ ಜೊತೆಯಲ್ಲಿಯೂ ನಾವು ಮಾತನಾಡುತ್ತಿದ್ದೇವೆ. ಅವರು ಏನಾದರೂ ಇದನ್ನು ತೆಗೆದುಕೊಂಡು ಸರಿಯಾಗಿ ನಡೆಸಲಿಕ್ಕೆ ಆಗುತ್ತದೆಯೆ ಎಂದು. ತಾವು ಕೃಷಿ ಯಂತ್ರಧಾರೆ ಬಾಡಿಗೆ ಕೇಂದ್ರಗಳನ್ನು ಜಾಸ್ತಿ ಮಾಡಬೇಕು ಎಂದು, ಇನ್ನು ಎಲ್ಲಾ ಹೋಬಳಿ ಮಟ್ಟಕ್ಕೆ ಮಾಡುವುದಕ್ಕಾಗಿಲ್ಲ. ಅದನ್ನು ವಿಸ್ತರಣೆ ಮಾಡಿದ ನಂತರ ಮುಂದೆ ನೋಡೋಣ ಎನ್ನತಕ್ಕಂಥದ್ದನ್ನು ಹೇಳಿ, ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮತ್ತೊಮ್ಮೆ ಎಲ್ಲಾ ಸದಸ್ಯರಿಗೆ ಮನವಿ ಮಾಡುತ್ತೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂಥ ಬೇಡಿಕೆಗಳನ್ನು ಸದನದ ಮುಂದೆ ನಾವು ಏನಿಟ್ಟಿದ್ದೇವೆ,

ದಯವಿಟ್ಟು ಅನುಮತಿಯನ್ನು ಕೊಡಬೇಕೆಂದು ಹೇಳಿ, ನ್ಯೂನತೆಗಳನ್ನು ಸರಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಹೆಚ್ಚಿನ ಪ್ರಯತ್ನವನ್ನು ಮಾಡುತ್ತೇವೆ. ನೀವು ನಮಗೆ ಒಂದು benchmark ಇಟ್ಟು ಬಿಟ್ಟು ಆ benchmark ಮುಟ್ಟುವುದಿಲ್ಲವೆಂದು ನೀವು ಹೇಳಿದ್ದೀರಾ, ಆದರೂ ಪರವಾಗಿಲ್ಲ. ನಾವು ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತೇವೆ, ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸದನವನ್ನು ಮನವಿ ಮಾಡುತ್ತೇನೆ.

ಬೇಡಿಕೆ ಸಂಖ್ಯೆ: 01 ಕೃಷಿ ಮತ್ತು ತೋಟಗಾರಿಕೆ

ಅಧ್ಯಕ್ಷರು:– 2015–16 ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವು ಹೀಗಿದೆ:

ದಿನಾಂಕ: 31.03.2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ: 01 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 479091.00 ಲಕ್ಷ ರೂ. ಹಾಗೂ ಬಂಡವಾಳ ಖಾತೆಯಲ್ಲಿ 3754.00 ಲಕ್ಷ ರೂ. ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡುತ್ತದೆ.

ಪ್ರಸ್ತಾವದ ಪರವಾಗಿರುವವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.